ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 16 ಗುರುವಾರ 2023

ಸಂಪುಟ: 44 | ಸಂಚಿಕೆ: 209 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಬಿಜೆಪಿ ರಾಜ್ಯಾಧ್ಯಕ್ಷರಾಗಿ ಬಿ.ವೈ.ವಿಜಯೇಂದ್ರ ಪದಗ್ರಹಣ

ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರಕ್ಕೆ ಕಾಂಗ್ರೆಸ್ ಶಾಸಕರೇ ಪಾಠ ಕಲಿಸ್ತಾರೆ...

● ರಾಜ್ಯ ಬಿಜೆಪಿ ನೂತನ ಸಾರಥಿ ಬಿ.ವೈ.ವಿಜಯೇಂದ್ರ ಭವಿಷ್ಯ ● ಬಿಜೆಪಿಯ ಹಲವು ನಾಯಕರು ಗೈರು

ಬೆಂಗಳೂರು, ನ.15(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಪತನಕ್ಕೆ ಆಪರೇಷನ್ ಕಮಲದ ಅಗತ್ಯವಿಲ್ಲ, ಈ ದುಷ್ಟ ಸರ್ಕಾರಕ್ಕೆ ಆ ಪಕ್ಷದ ಶಾಸಕರೇ ಪಾಠ ಕಲಿಸುವ ಸಮಯ ದೂರ ಉಳಿದಿಲ್ಲ ಎಂದು ಬಿಜೆಪಿ ನೂತನ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇಂದಿಲ್ಲಿ ತಿಳಿಸಿದ್ದಾರೆ.



ಪಕ್ಷದ ಕಚೇರಿಯಲ್ಲಿ ನಿರ್ಗಮಿತ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರಿಂದ ಪಕ್ಷದ ಬಾವುಟ ಸ್ವೀಕರಿಸುವ ಮೂಲಕ ರಾಜ್ಯಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ ನಡೆದ ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಆಡಳಿತ ಪಕ್ಷದ ಶಾಸಕರೇ ಅವರ ಕ್ಷೇತ್ರಗಳಲ್ಲಿ ಓಡಾಡದಂತಾಗಿದೆ. ಸರ್ಕಾರದಿಂದ ಒಂದು ರೂ.ಅನುದಾನ ಸಿಗುತ್ತಿಲ್ಲ. ಈ ದುಷ್ಟ ಸರ್ಕಾರಕ್ಕೆ ಕಾಂಗ್ರೆಸ್ ಶಾಸಕರೇ ತಕ್ಕ ಪಾಠ ಕಲಿಸುತ್ತಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಹಿಂದಿನ ನಮ್ಮ ಸರ್ಕಾರವನ್ನು ಶೇ.40 ರಷ್ಟು ಸರ್ಕಾರವೆಂದು ಟೀಕಿಸಿದ್ದರು. ಮತದಾರರು ಅದನ್ನು ನಂಬಿದರು. ಕಾಂಗ್ರೆಸ್ ಸರ್ಕಾರ ಬಂದು 6 ತಿಂಗಳಾಗಿದೆ. ಹಗಲು ದರೋಡೆ, ಭ್ರಷ್ಟಾಚಾರ ಮೇರೆ ಮೀರಿದೆ. ಶೇ.40ರಷ್ಟು ಕಮಿಷನ್, ಭ್ರಷ್ಟಾಚಾರದ ಅನುಷ್ಠಾನ ಈ ಸರ್ಕಾರದಿಂದ ಅವ್ಯಾಹತವಾಗಿ ನಡೆಯುತ್ತಿದೆ. ಇವರ ದುರಾಡಳಿತವನ್ನೇ ಜನರ ಮುಂದಿಟ್ಟು ಲೋಕಸಭಾ ಚುನಾವಣೆಯಲ್ಲಿ ಎಲ್ಲಾ 28 ಸ್ಥಾನಗಳನ್ನು ಗೆದ್ದು, ಕಾಂಗ್ರೆಸ್ ಸರ್ಕಾರಕ್ಕೆ ಉತ್ತರ ಕೊಡೋಣ, ಬರಗಾಲದ ಪರಿಸ್ಥಿತಿಯಲ್ಲೂ ಉಸ್ತುವಾರಿ ಸಚಿವರು, ಪ್ರವಾಸ ಮಾಡುತ್ತಿಲ್ಲ. ರೈತರ ಸಮಸ್ಯೆಗಳಿಗೆ ಸ್ಪಂದಿಸುವುದನ್ನು ಮರೆತು ಅಧಿಕಾರ ದರ್ಪ ಮತ್ತು ಉದ್ಧಟತನದಿಂದ ವರ್ತಿಸುತ್ತಿದ್ದಾರೆ.

ನಮಗೆ ತಕ್ಷಣಕ್ಕೆ ಜಿಲ್ಲಾ, ತಾಲೂಕು ಪಂಚಾಯತ್ ಚುನಾವಣೆ ಎದುರಾಗಬಹುದು. ಅದನ್ನು ಗಂಭೀರವಾಗಿ ಪರಿಗಣಿಸೋಣ. ನಾನು ಯಾವುದೇ ಸಮುದಾಯಕ್ಕೆ ಸೇರಿದವನಲ್ಲ. ಎಲ್ಲರ ವಿಶ್ವಾಸಗಳಿಸಿ ಪಕ್ಷವನ್ನು ಸಂಘಟಿಸಿ ಲೋಕಸಭಾ ಚುನಾವಣೆಯಲ್ಲಿ 28 ಕ್ಷೇತ್ರಗಳಲ್ಲೂ ಗೆಲುವು ಸಾಧಿಸಿ ಮತ್ತೆ ಪಕ್ಷವನ್ನು ಅಧಿಕಾರಕ್ಕೆ ತಂದು ಕಮಲದ ಬಾವುಟ ಹಾರಿಸೋಣ ಎಂದರು. ರಾಜ್ಯದಲ್ಲಿ ಸಾಕಷ್ಟು ಹಿರಿಯರು ಪಕ್ಷದಲ್ಲಿದ್ದಾರೆ. ಅವರನ್ನು ಬಿಟ್ಟು ನನಗೆ ಅವಕಾಶ ಕೊಟ್ಟಿದ್ದಾರೆ ಎಂದರೆ, ಆ ಸ್ಥಾನದ ಮಹತ್ವದ ಅರಿವು ನನಗಿದೆ. ಈ ವೇದಿಕೆಯ ಮೂಲಕ ಭರವಸೆ ನೀಡುತ್ತೇನೆ. ಹಿರಿಯ ನಾಯಕರು ಮತ್ತು ಕಾರ್ಯಕರ್ತರು ತಲೆ ತಗ್ಗಿಸುವ ರೀತಿ ನಡೆದುಕೊಳ್ಳುವುದಿಲ್ಲ. ಅವರಿಗೆ ಎಲ್ಲಾ ಪರಿಸ್ಥಿತಿಯಲ್ಲೂ ಬೆಂಬಲವಾಗಿ ನಿಂತು, ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ ಎಂದು ಹೇಳಿದರು. ರಾಜ್ಯಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳುವುದಕ್ಕೂ ಮುನ್ನ ಪಕ್ಷದ ಕಚೇರಿಯಲ್ಲಿ ಹೋಮ, ಹವನ ನಡೆಯಿತು. ಬಹುದಿನಗಳ ನಂತರ ಕಚೇರಿಯನ್ನು ಮೈಸೂರಿನ ಅರಮನೆ ರೀತಿ ದೀಪಾಲಂಕಾರಗಳಿಂದ ಶೃಂಗರಿಸಲಾಗಿತ್ತು. ಮಾಜಿ ಮುಖ್ಯಮಂತ್ರಿ ● 6ನೇ ಪುಟಕ್ಕೆ

ವಿಶ್ವಕಪ್ ಫೈನಲ್‌ಗೆ ಭಾರತ

● ಸೆಮಿಫೈನಲ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ 70 ರನ್‌ಗಳ ಭರ್ಜರಿ ಜಯ ● ಪ್ರಸಕ್ತ ವಿಶ್ವಕಪ್ ಸರಣಿಯಲ್ಲಿ ಸತತ 10ನೇ ಗೆಲುವು

ಮುಂಬೈ, ನ. 15– ವಿರಾಟ್ ಕೊಹ್ಲಿ ಮತ್ತು ಶ್ರೇಯಸ್ ಐಯ್ಯರ್ ಅವರ ಭರ್ಜರಿ ಶತಕ ಹಾಗೂ ಮಹಮ್ಮದ್ ಶಮಿ ಅವರ ಮಾರಕ ಬೌಲಿಂಗ್‌ನಿಂದ ಇಂದಿಲ್ಲಿ ನಡೆದ ವಿಶ್ವಕಪ್ ಸೆಮಿಫೈನಲ್ ಪಂದ್ಯದಲ್ಲಿ ಭಾರತ, ನ್ಯೂಜಿಲ್ಯಾಂಡ್ ವಿರುದ್ಧ 70 ರನ್‌ಗಳಿಂದ ಜಯಗಳಿಸುವ ಮೂಲಕ ಫೈನಲ್ ತಲುಪಿದೆ.

ಮುಂಬೈನ ವಾಂಖೆಡೆ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಭಾರತ ನೀಡಿದ 398 ರನ್ನುಗಳ ಬೃಹತ್ ಮೊತ್ತವನ್ನು ಬೆನ್ನತ್ತಿದ ನ್ಯೂಜಿಲ್ಯಾಂಡ್ 48.5 ಓವರ್‌ಗಳಲ್ಲಿ 327 ರನ್‌ಗಳಿಗೆ ಆಲೌಟ್ ಆಗುವ ಮೂಲಕ ಅದರ ● 6ನೇ ಪುಟಕ್ಕೆ



ಮಹಮ್ಮದ್ ಶಮಿ ದಾಖಲೆ

ಭಾರತ ಕ್ರಿಕೆಟ್ ತಂಡದ ಮಹಮ್ಮದ್ ಶಮಿ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಅತ್ಯಂತ ಹೆಚ್ಚು ವಿಕೆಟ್ ಪಡೆಯುವ ಮೂಲಕ ದಾಖಲೆನಿರ್ಮಿಸಿದ್ದಾರೆ. ಇದರೊಂದಿಗೆ ವಿಶ್ವಕಪ್‌ನ ಪಂದ್ಯವೊಂದರಲ್ಲಿ ಏಳು ವಿಕೆಟ್ ಪಡೆದ ಮೊದಲ ಭಾರತೀಯ ಬೌಲರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ವಿಶ್ವಕಪ್–2023ರ ಟೂರ್ನಿಯಲ್ಲಿ 6 ಪಂದ್ಯಗಳನ್ನು ಆಡಿರುವ ಮೊಹಮ್ಮದ್ ಶಮಿ ಒಟ್ಟು 23 ವಿಕೆಟ್ ಪಡೆಯುವ ಮೂಲಕ ತಮ್ಮ ಹೆಸರಿನಲ್ಲಿ ದಾಖಲೆ ಬರೆದಿದ್ದಾರೆ. ಅವರು ಆಡಿದ ಎಲ್ಲಾ ಪಂದ್ಯಗಳಲ್ಲೂ ಗಮನಾರ್ಹ ಸಾಧನೆ ಮಾಡಿ ತಂಡಕ್ಕೆ ಗೆಲುವು ತಂದು ಕೊಟ್ಟಿದ್ದಾರೆ. ನ್ಯೂಜಿಲೆಂಡ್ ವಿರುದ್ಧ ಬುಧವಾರ ನಡೆದ ಪಂದ್ಯದಲ್ಲಿ 9.5 ಓವರುಗಳಲ್ಲಿ 57 ರನ್ನಿತ್ತು, ಏಳು ವಿಕೆಟ್ ಪಡೆದು ಸಾಧನೆ ಮಾಡಿ ತಂಡಕ್ಕೆ ತಮ್ಮ ಆಯ್ಕೆಯನ್ನು ಸಮರ್ಥಿಸಿಕೊಂಡಿದ್ದಾರೆ.



ವಿರಾಟ್ ಕೊಹ್ಲಿ ಏಕದಿನ ಪಂದ್ಯದಲ್ಲಿ ವಿಶ್ವದಾಖಲೆ 50ನೇ ಶತಕ

ಮುಂಬೈ: ಭಾರತದ ಕ್ರಿಕೆಟಿಗ ವಿರಾಟ್ ಕೊಹ್ಲಿ ಒಂದೇ ಪಂದ್ಯದಲ್ಲಿ ಸಚಿನ್ ತೆಂಡೂಲ್ಕರ್ ಅವರ 2 ವಿಶ್ವದಾಖಲೆಯನ್ನು ಮುರಿದಿದ್ದಾರೆ. ಮುಂಬೈನ ವಾಂಖೆಡೆ ಸ್ಟೇಡಿಯಂನಲ್ಲಿ ನ್ಯೂಜಿಲೆಂಡ್ ವಿರುದ್ಧದ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಗರಿಷ್ಠ ರನ್‌ಗಳನ್ನು ಗಳಿಸಿ ದಾಖಲೆ ನಿರ್ಮಿಸಿರುವುದು ಒಂದು ದಾಖಲೆಯಾದರೆ, ಏಕದಿನ ಕ್ರಿಕೆಟ್‌ನಲ್ಲಿ 50ನೇ ಶತಕ ದಾಖಲಿಸಿ ಸಚಿನ್ ದಾಖಲೆಯನ್ನು ಮುರಿದಿರುವುದು 2ನೇ ದಾಖಲೆಯಾಗಿದೆ. ಸಚಿನ್ ತೆಂಡೂಲ್ಕರ್ ಏಕದಿನ ಕ್ರಿಕೆಟ್‌ನಲ್ಲಿ 49 ಶತಕ ದಾಖಲಿಸಿದ್ದಾರೆ. 2023ರ ವಿಶ್ವಕಪ್‌ನಲ್ಲಿ ಕೊಹ್ಲಿ 673 ರನ್‌ಗಳನ್ನು ಗಳಿಸಿದ್ದಾರೆ. ಇದಕ್ಕೂ ಮುನ್ನ ಕೊಹ್ಲಿ ಒಂದೇ ವಿಶ್ವಕಪ್ ಟೂರ್ನಿಯಲ್ಲಿ 600+ ರನ್‌ಗಳನ್ನು ಗಳಿಸಿದ ಮೂರನೇ ಭಾರತೀಯ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ● 6ನೇ ಪುಟಕ್ಕೆ

ಮೈಸೂರು ನಗರಪಾಲಿಕೆ ಪ್ರಸಕ್ತ ಅವಧಿ ಇಂದಿಗೆ ಅಂತ್ಯ

ಮಾಜಿಗಳಾಗುವ ಮುನ್ನ ಫೋಟೋ ತೆಗೆಸಿಕೊಂಡು; ಅವಕಾಶ ಸಿಕ್ಕಷ್ಟು ಕೆಲಸ ಮಾಡಿದ ಸಂತೃಪ್ತಿ ನಮ್ಮ ಪುರಪಿತೃಗಳದ್ದು!





ಮೈಸೂರು ಮಹಾ ನಗರಪಾಲಿಕೆ ಸದಸ್ಯರ ಅವಧಿ ನಾಳೆ(ನ.16) ಮುಕ್ತಾಯಗೊಳ್ಳುವ ಹಿನ್ನೆಲೆ ಬುಧವಾರ ಮೇಯರ್ ಶಿವಕುಮಾರ್ ಅಧ್ಯಕ್ಷತೆಯಲ್ಲಿ ಪಾಲಿಕೆ ಸದಸ್ಯರ ಫೋಟೋ ಸೆಷನ್ ಹಾಗೂ ಔತಣ ಕೂಟ ನಡೆಯಿತು.

ಮೈಸೂರು, ನ.15(ಎಂಕೆ)– ಪ್ರತಿಷ್ಠಿತ ಮೈಸೂರು ಮಹಾ ನಗರಪಾಲಿಕೆ ಸದಸ್ಯರ ಅವಧಿ ನಾಳೆ(ನ.16) ಮುಕ್ತಾಯಗೊಳ್ಳುವ ಹಿನ್ನೆಲೆಯಲ್ಲಿ ಮೇಯರ್ ಶಿವಕುಮಾರ್ ಅಧ್ಯಕ್ಷತೆಯಲ್ಲಿ ಪಾಲಿಕೆ ಸದಸ್ಯರ ಫೋಟೋ ಸೆಷನ್(ಗ್ರೂಪ್ ಫೋಟೋ) ಹಾಗೂ ಔತಣ ಕೂಟವನ್ನು ಬುಧವಾರ ಏರ್ಪಡಿಸಲಾಗಿತ್ತು.

ನಗರಪಾಲಿಕೆ ಎದುರು ಸದಸ್ಯರ ಫೋಟೋ ಸೆಷನ್ ಬಳಿಕ ಸಂದೇಶ್ ದಿ ಪ್ರಿನ್ಸ್ ಹೋಟೆಲ್‌ನಲ್ಲಿ ಔತಣಕೂಟ ಏರ್ಪಡಿಸಲಾಗಿತ್ತು. ಫೋಟೋ ಸೆಷನ್‌ಗೆ 65 ಮಂದಿ ಪಾಲಿಕೆ ಸದಸ್ಯರ ಪೈಕಿ ಮಾಜಿ ಮೇಯರ್‌ಗಳಾದ ಸುನಂದಾ ಪಾಲನೇತ್ರ, ತಸ್ನಿಂ, ಪಾಲಿಕೆ ಸದಸ್ಯ ಲೋಕೇಶ್ ಪಿಯಾ ಸೇರಿದಂತೆ 13 ಮಂದಿ ಗೈರಾದರೆ, 52 ಮಂದಿ ಭಾಗವಹಿಸಿದ್ದರು.

ಪಾಲಿಕೆ ಸದಸ್ಯರ ಜೊತೆಗೆ ಪಾಲಿಕೆ ಆಯುಕ್ತ ಅಸಾದ್ ಉರ್ ರೆಹಮಾನ್ ಷರೀಫ್, ಹೆಚ್ಚುವರಿ ಆಯುಕ್ತೆ ರೂಪ, ಆರೋಗ್ಯಾಧಿಕಾರಿ, ಮುಖ್ಯ ಲೆಕ್ಕಾಧಿಕಾರಿ ಸೇರಿದಂತೆ ಪ್ರಮುಖ ಅಧಿಕಾರಿಗಳು ಫೋಟೋ ಸೆಷನ್‌ನಲ್ಲಿ ಭಾಗವಹಿಸಿ ಪಾಲಿಕೆ ಸದಸ್ಯರಿಗೆ ಬೀಳ್ಕೊಡುಗೆ ನೀಡಿದರು.

ಆತ್ಮಾವಲೋಕನ ಮಾಡಿಕೊಳ್ಳಬೇಕು: ಸಂದೇಶ್ ದಿ ಪ್ರಿನ್ಸ್ ಹೋಟೆಲ್‌ನಲ್ಲಿ ನಡೆದ ಔತಣಕೂಟದಲ್ಲಿ ಮಾತನಾಡಿದ ಮೇಯರ್ ಶಿವಕುಮಾರ್, ಕಳೆದ 5 ವರ್ಷದಲ್ಲಿ ಪಾಲಿಕೆ ಸದಸ್ಯರಾಗಿ ನಾವೇನು ಕೆಲಸ ಮಾಡಿದ್ದೇವೆ, ಜನರ ಕಷ್ಟಕ್ಕೆ ಹೇಗೆ ಸ್ಪಂದಿಸಿದ್ದೇವೆ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕು. ಬೆರಳೆಣಿಕೆಯಷ್ಟು ಪಾಲಿಕೆ ಸದಸ್ಯರನ್ನು ಹೊರತು ಬಹುತೇಕರು ತಮ್ಮ ತಮ್ಮ ವಾರ್ಡ್‌ಗಳ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಜನರೊಂದಿಗೆ ನಿತ್ಯ ಸಂಪರ್ಕ ಇಟ್ಟುಕೊಂಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅಧಿಕಾರಿಗಳಲ್ಲಿ ಮನವಿ: ಅಧಿಕಾರಾವಧಿ ಮುಗಿದ ಬಳಿಕ ಎಂದಿನಂತೆ ನಮ್ಮ ಕೆಲಸಗಳು ಸಲೀಸಾಗಿ ಸಾಗುತ್ತವೆ ಎಂದು ಭಾವಿಸುವುದು ಕಷ್ಟ. ಮೇಯರ್ ಆಗಿದ್ದವರು ಎರಡ್ಮೂರು ತಿಂಗಳ ನಂತರ ಪಾಲಿಕೆಗೆ ಬಂದರೆ ಅವರನ್ನು ಕುಳಿತುಕೊಳ್ಳಿ ಎಂದು ಹೇಳುವವರು ಇಲ್ಲದಿರುವುದನ್ನು ನಾನು ಗಮನಿಸಿದ್ದೇನೆ. ಆದ್ದರಿಂದ ಅಧಿಕಾರಿಗಳು ಜನರ ಸಮಸ್ಯೆಗಳೊಂದಿಗೆ ಬರುವ ಮಾಜಿ ಸದಸ್ಯರ ಮನವಿಗೆ ಸ್ಪಂದಿಸುವಂತೆ ಮನವಿ ಮಾಡಿದರಲ್ಲದೆ, ಪಾಲಿಕೆಯಲ್ಲಿ ಈಗಿರುವ ಎಲ್ಲಾ ಅಧಿಕಾರಿ, ಸಿಬ್ಬಂದಿಗಳು ಪಾಲಿಕೆ ಸದಸ್ಯರ ಹಾಗೂ ಜನರ ಸಮಸ್ಯೆಗಳಿಗೆ ● 7ನೇ ಪುಟಕ್ಕೆ

5 ವರ್ಷದಲ್ಲಿ ಹಲವು ಅಭಿವೃದ್ಧಿ ಪೂರಕ ಯೋಜನೆಗಳ ಜಾರಿ...

ಮೈಸೂರು ನಗರ ಪಾಲಿಕೆಯಲ್ಲಿ ಕಳೆದ 5 ವರ್ಷದಲ್ಲಿ ಹಲವು ಅಭಿವೃದ್ಧಿ ಪೂರಕ ಯೋಜನೆಗಳನ್ನು ಜಾರಿ ಮಾಡಲಾಯಿತು. ಮುಖ್ಯವಾಗಿ ಆಸ್ತಿ ತೆರಿಗೆ ಸಂಗ್ರಹಣೆಗೆ ಆನ್‌ಲೈನ್ ವ್ಯವಸ್ಥೆ ಮಾಡಿದ್ದರಿಂದಾಗಿ ದಾಖಲೆ ಮಟ್ಟದಲ್ಲಿ 300 ಕೋಟಿ ರೂ.ಗೂ ಹೆಚ್ಚು ತೆರಿಗೆ ಸಂಗ್ರಹವಾಗಿದೆ ಎಂದು ಮೇಯರ್ ಶಿವಕುಮಾರ್ ತಿಳಿಸಿದರು. ಹಾಗೆಯೇ ನೀರಿನ ಶುಲ್ಕವನ್ನು ಕೂಡ ಆನ್‌ಲೈನ್ ಮೂಲಕವೇ ಕಟ್ಟಿಸಿಕೊಳ್ಳುವ ವ್ಯವಸ್ಥೆ ಮಾಡಲಾಯಿತು. ಹಾಗೆಯೇ ನೀರಿನ ತೆರಿಗೆ ಸಂಗ್ರಹಣೆಯಲ್ಲಿದ್ದ ನ್ಯೂನತೆಗಳನ್ನು ಸರಿಪಡಿಸಲಾಯಿತು. ಆನ್‌ಲೈನ್ ಮೂಲಕವೇ ಟ್ರೇಡ್ ಲೈಸನ್ಸ್ ಪಡೆಯಲು ಅವಕಾಶ ಮಾಡಿರುವುದರಿಂದ ಉದ್ಯಮಿಗಳಿಗೆ ● 7ನೇ ಪುಟಕ್ಕೆ

ಮೈಸೂರಿನ ಕುವೆಂಪುನಗರದಲ್ಲಿ ಹಾಡಹಗಲೇ ಸರ್ಕಾರಿ ಅಧಿಕಾರಿ ಪತ್ನಿ ಹತ್ಯೆ

● ಕುತ್ತಿಗೆಗೆ ಸ್ಕಾರ್ಫ್ ಬಿಗಿದು ಕೊಲೆ ● ಶಾಲೆಯಿಂದ ದತ್ತು ಪುತ್ರಿ ಮನೆಗೆ ಮರಳಿದಾಗ ಪ್ರಕರಣ ಬಯಲು; ಭಯಭೀತರಾಗಿರುವ ಸುತ್ತಮುತ್ತಲ ನಿವಾಸಿಗಳು

ಮೈಸೂರು, ನ.15–ಹಾಡಹಗಲೇ ಮನೆಗೆ ನುಗ್ಗಿ ಗೃಹಿಣಿಯನ್ನು ಹತ್ಯೆ ಮಾಡಿರುವ ಘಟನೆ ಮೈಸೂರಿನ ಕುವೆಂಪುನಗರದ ಜ್ಯೋತಿ ವಿದ್ಯಾಸಂಸ್ಥೆಯ ಬಳಿ ಬುಧವಾರ ನಡೆದಿದೆ.



ಮಂಜುಳಾ

ಹೆಚ್.ಡಿ.ಕೋಟೆ ಪರಿಶಿಷ್ಟ ಪಂಗಡ ಅಭಿವೃದ್ಧಿ ಮಂಡಳಿ ಮ್ಯಾನೇಜರ್ ನಾಗರಾಜು ಪತ್ನಿ ಮಂಜುಳಾ (41) ಹತ್ಯೆಗೀಡಾದವರಾಗಿದ್ದು, ದುಷ್ಕರ್ಮಿಗಳು ಸ್ಕಾರ್ಫ್‌ನಿಂದ ಕುತ್ತಿಗೆ ಬಿಗಿದು ಹತ್ಯೆಗೈದಿದ್ದಾರೆ.

ವಿವರ: ಇಂದು ಬೆಳಗ್ಗೆ ನಾಗರಾಜು ಅವರು ಹೆಚ್.ಡಿ.ಕೋಟೆಗೆ ಹಾಗೂ ಅವರ ಪುತ್ರಿ ದತ್ತು 3 ವರ್ಷ ವಯಸ್ಸಿನ ಮೇಘಾ ಶಾಲೆಗೆ ಹೋಗಿದ್ದು, ಮಂಜುಳಾ ಅವರೊಬ್ಬರೇ ಮನೆಯಲ್ಲಿದ್ದರು. ಈ ವೇಳೆ ಮನೆಗೆ ಪ್ರವೇಶಿಸಿದ ದುಷ್ಕರ್ಮಿಗಳು ಮಂಜುಳಾ ಕುತ್ತಿಗೆಯನ್ನು ಸ್ಕಾರ್ಫ್‌ನಿಂದ ಬಿಗಿದು ಹತ್ಯೆ ಮಾಡಿದ್ದಾರೆ. ಹಂತಕರು ಮನೆಯಲ್ಲಿ ಯಾವುದೇ ವಸ್ತುಗಳನ್ನು ಕಳವು ಮಾಡಿಲ್ಲ. ಆದರೆ ಮಂಜುಳಾ ಅವರ ತಾಳಿ ಮಾತ್ರ ನಾಪತ್ತೆಯಾಗಿದೆ. ನಾಗರಾಜು ಮತ್ತು ಮಂಜುಳಾ ಅವರಿಗೆ ವಿವಾಹವಾಗಿ 26 ವರ್ಷವಾದರೂ ಮಕ್ಕಳಿಲ್ಲದ ಕಾರಣ ಅವರು ಅಣ್ಣನ ಮಗಳು 3 ವರ್ಷದ ಮೇಘಾಳನ್ನು ದತ್ತು ಪಡೆದಿದ್ದರು ಎಂದು ಹೇಳಲಾಗಿದೆ.

ಮಂಜುಳಾ ಅವರ ಪುತ್ರಿ ಮೇಘಾ ಮಧ್ಯಾಹ್ನ 3.30ರ ಸುಮಾರಿನಲ್ಲಿ ಶಾಲೆಯಿಂದ ಮನೆಗೆ ಹಿಂತಿರುಗಿದಾಗ ಕೋಣೆಯ ಮಂಚದ ಮೇಲೆ ಸ್ಕಾರ್ಫ್‌ನಿಂದ ಬಿಗಿದು ತಾಯಿ ಹತ್ಯೆಯಾಗಿರುವುದು ಬೆಳಕಿಗೆ ಬಂದಿದೆ.ವಿಷಯ ತಿಳಿಯುತ್ತಿದ್ದಂತೆಯೇ ಕುವೆಂಪುನಗರ ಠಾಣೆ ಇನ್ಸ್‌ಪೆಕ್ಟರ್ ಅರುಣ್, ತಮ್ಮ ಸಿಬ್ಬಂದಿಯೊಂದಿಗೆ ಘಟನಾ ಸ್ಥಳಕ್ಕೆ ತೆರಳಿ ಪರಿಶೀಲಿಸಿದರು. ಬೆರಳಚ್ಚು ತಜ್ಞರು ಮತ್ತು ಶ್ವಾನದಳ ಘಟನಾ ಸ್ಥಳದಲ್ಲಿ ಪರಿಶೀಲನೆ ನಡೆಸಿದರು. ಡಿಸಿಪಿಗಳಾದ ಮುತ್ತುರಾಜ್, ಜಾನ್ಹವಿ ಸ್ಥಳಕ್ಕೆ ಭೇಟಿ ನೀಡಿ, ತನಿಖಾಧಿಕಾರಿಗಳಿಗೆ ಮಾರ್ಗದರ್ಶನ ನೀಡಿದ್ದಾರೆ. ಜನನಿಬಿಡ ವಸತಿ ಪ್ರದೇಶವಾದ ಇಲ್ಲಿ ಹಾಡ ಹಗಲೇ ಹತ್ಯೆ ನಡೆದಿರುವುದು ಅಲ್ಲಿನ ನಿವಾಸಿಗಳನ್ನು ಬೆಚ್ಚಿ ಬೀಳಿಸಿದೆ. ಪರಿಚಯಸ್ಥರೇ ಮಂಜುಳಾ ಅವರನ್ನು ಹತ್ಯೆ ಮಾಡಿರಬಹುದೆಂದು ಶಂಕಿಸಲಾಗಿದೆ. ಕುವೆಂಪುನಗರ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಆಸ್ತಿಗಾಗಿ ಪತ್ನಿ ಕೊಲೆ; ಮಂಡ್ಯ ಖಾಸಗಿ ಕಾಲೇಜು ಉಪನ್ಯಾಸಕನ ಬಂಧನ

● ಮಲಗಿದ್ದ ಪತ್ನಿ ಮುಖದ ಮೇಲೆ ದಿಂಬಿನಿಂದ ಅದುಮಿ ಉಸಿರುಗಟ್ಟಿಸಿ ಹತ್ಯೆ; ಲೋ ಬಿಪಿಯಿಂದ ಸಾವಿನ ನಾಟಕವಾಡಿದ ● ಪತ್ನಿಯ ತವರಿನ ಭಾರಿ ಆಸ್ತಿ ಮೇಲೆ ಕಣ್ಣಿಟ್ಟಿದ್ದ ಈತ ತನ್ನ ಹೆಸರಿಗೆ ಆಸ್ತಿ ಬರೆಯಲು ಚಿತ್ರಹಿಂಸೆ ನೀಡುತ್ತಿದ್ದ

ಮಂಡ್ಯ, ನ.15–ಖಾಸಗಿ ಕಾಲೇಜಿನ ಉಪನ್ಯಾಸಕನೋರ್ವ ಆಸ್ತಿ ಆಸೆಗಾಗಿ ತನ್ನ ಪತ್ನಿಯನ್ನೇ ಹತ್ಯೆಗೈದು ಪೊಲೀಸರ ಅತಿಥಿಯಾಗಿರುವ ಬಗ್ಗೆ ವರದಿಯಾಗಿದೆ. ಮಂಡ್ಯದ ವಿವಿ ನಗರದಲ್ಲಿ ವಾಸವಿರುವ ಇಲ್ಲಿನ ಖಾಸಗಿ ಕಾಲೇಜಿನ ಉಪನ್ಯಾಸಕ ಟಿ.ಎನ್.ಸೋಮಶೇಖರ್ (41), ತನ್ನ ಪತ್ನಿ ಶ್ರೀಮತಿ ಎಸ್.ಶೃತಿ(32)ಯನ್ನು ನ.11ರಂದು ಹತ್ಯೆಗೈದಿದ್ದು, ಇಂದು ಆತನನ್ನು ಪೊಲೀಸರು ಬಂಧಿಸಿದ್ದಾರೆ.



ಎಸ್.ಶೃತಿ

ವಿವರ: ಮೈಸೂರಿನ ಹೆಬ್ಬಾಳ್ ನಿವಾಸಿಗಳಾದ ಪಿ.ಷಣ್ಮುಖಸ್ವಾಮಿ ಮತ್ತು ರಾಜೇಶ್ವರಿ ದಂಪತಿ ಪುತ್ರಿ ಶೃತಿಯನ್ನು ಕೆಲ ವರ್ಷದ ಹಿಂದೆ ಮಂಡ್ಯ ವಿವಿ ನಗರದ ನಾಗರಾಜಪ್ಪ ಪುತ್ರ ಟಿ.ಎನ್.ಸೋಮಶೇಖರ್‌ಗೆ ಮದುವೆ ಮಾಡಿಕೊಡಲಾಗಿತ್ತು. ಈ ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಸ್ಥಿತಿವಂತರಾಗಿದ್ದ ಶೃತಿಯ ಪೋಷಕರು ಆಕೆಗೆ ಮೈಸೂರಿನ ವಿಜಯನಗರ ಮೊದಲ ಹಂತದಲ್ಲಿ ಮೂರು ಅಂತಸ್ತಿನ ಮನೆಯನ್ನು ನೀಡಿದ್ದರು. ಮದುವೆಯಾದ ಕೆಲವೇ ದಿನಗಳಲ್ಲಿ ಆ ಮನೆಯನ್ನು ತನ್ನ ಹೆಸರಿಗೆ ಬರೆದು ಕೊಡುವಂತೆ ಸೋಮಶೇಖರ್ ಪತ್ನಿಯನ್ನು ಪೀಡಿಸುತ್ತಿದ್ದ. ಆತನ ಕಿರುಕುಳ ಹೆಚ್ಚಾದಾಗ ಕೆಲವೊಮ್ಮೆ ರಾಜೀ ಪಂಚಾಯ್ತಿಗಳು ನಡೆದಿತ್ತು. ಈ ನಡುವೆ ಶೃತಿ ತಂದೆ ಷಣ್ಮುಖಸ್ವಾಮಿ ಮತ್ತು ತಾಯಿ ರಾಜೇಶ್ವರಿ ಅವರುಗಳು ಎರಡು ವರ್ಷದ ಅಂತರದಲ್ಲಿ ನಿಧನರಾಗಿದ್ದಾರೆ. ಅದು ಮಾತ್ರವಲ್ಲದೆ, ಈ ದಂಪತಿಯ ಮತ್ತೋರ್ವ ಪುತ್ರಿ ಸುಷ್ಮಿತಾ ಕೂಡ ಅದಾದ ಆರೇ ತಿಂಗಳಲ್ಲಿ ನಿಧನ ಹೊಂದಿದ ಕಾರಣ ಷಣ್ಮುಖಸ್ವಾಮಿಯವರ ಸಂಪೂರ್ಣ ಆಸ್ತಿ ಶೃತಿ ಹೆಸರಿಗೆ ವರ್ಗಾವಣೆಯಾಗಿತ್ತು. ಕೋಟ್ಯಾಂತರ ರೂ. ಮೌಲ್ಯದ ಆಸ್ತಿಯನ್ನು ತನ್ನದಾಗಿಸಿಕೊಳ್ಳಬೇಕೆಂಬ ಉದ್ದೇಶದಿಂದ ಸೋಮಶೇಖರ್ ತನ್ನ ಪತ್ನಿಗೆ ನಿರಂತರವಾಗಿ ಕಿರುಕುಳ ನೀಡುತ್ತಿದ್ದ. ಆದರೆ ಆಕೆ ಯಾವುದೇ ಕಾರಣಕ್ಕೂ ಪತಿಯ ಹೆಸರಿಗೆ ● 7ನೇ ಪುಟಕ್ಕೆ



ಸೋಮಶೇಖರ್

ವಾಲ್ಮೀಕಿ ರಸ್ತೆಯಲ್ಲಿ ಬಿರ್ಸಾ ಮುಂಡಾ ಜಯಂತಿ



ಮೈಸೂರು,ನ.15–ಬುಡಕಟ್ಟು ಹೋರಾಟಗಾರ ಭಗವಾನ್ ಬಿರ್ಸಾ ಮುಂಡಾರವರ 148ನೇ ಜಯಂತಿಯನ್ನು ಪಡುವಾರಹಳ್ಳಿಯ ಸ್ನೇಹ ಬಳಗದ ವತಿಯಿಂದ ವಾಲ್ಮೀಕಿ ರಸ್ತೆಯಲ್ಲಿ ಆಚರಿಸಲಾಯಿತು.

ಬಿರ್ಸಾ ಮುಂಡಾರವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಮೈಸೂರು ಜಿಲ್ಲಾ ಕೈಗಾರಿಕಾ ಮತ್ತು ವಾಣಿಜ್ಯ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು, 'ಅಬುವಾ ರಾಜ್ ಎತೆ ಜನ, ಮಹಾರಾಣಿ ರಾಜ್ ತುಂಡು ಜನ್' ಅಂದರೆ ರಾಣಿಯ ರಾಜ್ಯವು ಕೊನೆಗೊಳ್ಳಲಿ ಮತ್ತು ನಮ್ಮ ರಾಜ್ಯವನ್ನು ಸ್ಥಾಪಿಸಲಿ ಎಂಬ ಬ್ರಿಟಿಷ್ ರಾಜ್‌ಗೆ ಬೆದರಿಕೆಯೊಡ್ಡುವ ಬಿರ್ಸಾ ಮುಂಡಾ ಅವರ ಘೋಷಣೆ ಉತ್ತರದ ರಾಜ್ಯದ ಮನೆಮಾತಾಗಿತ್ತು. ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರ ವಿರುದ್ಧ ಹೋರಾಟದಲ್ಲಿ ಮಡಿದ ಮಹನೀಯರ ಸ್ಮರಣೆ ನಮ್ಮ ಆದ್ಯ ಕರ್ತವ್ಯ ಆಗಿದೆ. ಭಗವಾನ್ ಬಿರ್ಸಾ ಮುಂಡಾರವರು ಬ್ರಿಟಿಷರ ಬುಡಕಟ್ಟು ಜನರ ಶೋಷಣೆ ತೆರಿಗೆ ನೀತಿ ಹಾಗೂ ಮತಾಂತರದ ವಿರುದ್ಧ ಜನಜಾಗೃತಿ ಮೂಡಿಸುವ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿದ್ದು, ಕೇವಲ 25ನೇ ವಯಸ್ಸಿನಲ್ಲಿ ಮಡಿದ ವೀರಪುತ್ರರಾಗಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಮಹಾರಾಣಿ ಕಾಲೇಜಿನ ಪ್ರಾಂಶುಪಾಲ ಸೋಮಣ್ಣ, ಮೈಮುಲ್ ಮಾಜಿ ಅಧ್ಯಕ್ಷರಾದ ಕೆ.ಉಮಾಶಂಕರ್, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಭೂಮಿಗಿರಿ ಪ್ರಕಾಶನದ ಎನ್.ಬೆಟ್ಟೇಗೌಡ, ಮಾಜಿ ನಗರಪಾಲಿಕೆ ಸದಸ್ಯ ಎಂ.ಚಿಕ್ಕವೆಂಕಟು, ಸಿ.ಡಿ.ಕುಮಾರ್, ಸಂತೋಷ್, ಕೇಬಲ್ ಕಿಟ್ಟಿ, ಗೋಕುಲಂ ನಾಗ, ರಾಘವ್ ಎಂ.ಗೌಡ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ಬಿಜೆಪಿ ಶಾಸಕಾಂಗ ಪಕ್ಷದ ಸಭೆ

ಬೆಂಗಳೂರು: ನ.17ರಂದು ಬಿಜೆಪಿ ಶಾಸಕಾಂಗ ಪಕ್ಷದ ಸಭೆ ಕರೆಯಲಾಗಿದೆ.



ಈ ಸಭೆಗೆ ಇಬ್ಬರು ವೀಕ್ಷಕರು ಬರಲಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಬುಧವಾರ ಹೇಳಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ವಿಜಯೇಂದ್ರ, ಶುಕ್ರವಾರ ಸಂಜೆ 6 ಗಂಟೆಗೆ ಶಾಸಕಾಂಗ ಪಕ್ಷದ ಸಭೆ ನಿಗದಿಯಾಗಿದೆ. ಬಿಜೆಪಿ ಶಾಸಕಾಂಗ ಪಕ್ಷದ ಸಭೆಗೆ ಇಬ್ಬರು ವೀಕ್ಷಕರು ಬರಲಿದ್ದಾರೆ. ವೀಕ್ಷಕರಾಗಿ ಯಾರು ಬರುತ್ತಾರೆ ಎಂಬುದು ನಾಳೆ ಗೊತ್ತಾಗುತ್ತದೆ ಎಂದರು. ಸಮಾವೇಶದ ಬಗ್ಗೆ ಹಿರಿಯರ ಜೊತೆ ಚರ್ಚಿಸಿದ ನಂತರ ತೀರ್ಮಾನ ಮಾಡಲಾಗುವುದು. ಇನ್ನು ಪ್ರತಿಪಕ್ಷ ನಾಯಕನ ಆಯ್ಕೆ ವಿಚಾರವಾಗಿ ಶಾಸಕರ ಅಭಿಪ್ರಾಯ ಮುಖ್ಯ. ಶಾಸಕರ ಸಮ್ಮುಖದಲ್ಲಿ ಪ್ರತಿಪಕ್ಷ ನಾಯಕನನ್ನು ಘೋಷಣೆ ಮಾಡುವ ಸಾಧ್ಯತೆ ಇದೆ ಎಂದರು. ಬಿಜೆಪಿಯಲ್ಲಿ ರಾಜ್ಯಾಧ್ಯಕ್ಷರನ್ನು ಆಯ್ಕೆ ಮಾಡಿದ ಬೆನ್ನಲ್ಲೇ ಪ್ರತಿಪಕ್ಷ ನಾಯಕನ ಆಯ್ಕೆ ಕಸರತ್ತು ನಡೆಯುತ್ತಿದ್ದು, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಶಾಸಕರಾದ ಬಸನಗೌಡ ಪಾಟೀಲ್ ಯತ್ನಾಳ್, ಡಾ. ಸಿ.ಎನ್.ಅಶ್ವತ್ಥ ನಾರಾಯಣ್, ಆರ್.ಅಶೋಕ್ ರೇಸ್‌ನಲ್ಲಿದ್ದಾರೆ.

ಹೊತ್ತಿ ಉರಿದ ರೈಲಿನ ಬೋಗಿಗಳು; 8 ಮಂದಿಗೆ ಗಾಯ

ಲಕ್ನೋ, ನ.15– ದೆಹಲಿ–ದರ್ಭಾಂಗ ರೈಲಿನ ನಾಲ್ಕು ಬೋಗಿಗಳಿಗೆ ಬುಧವಾರ ಬೆಂಕಿ ಹೊತ್ತಿಕೊಂಡ ಪರಿಣಾಮ ಎಂಟು ಮಂದಿ ಗಾಯಗೊಂಡಿದ್ದಾರೆ.

ಉತ್ತರ ಪ್ರದೇಶದ ಇಟಾವಾ ಬಳಿ 02570 ದೆಹಲಿ–ದರ್ಬಂಗಾ ಕ್ಲೋನ್ ಸ್ಪೆಷಲ್‌ನ ಎಸ್1 (ಸ್ಲೀಪರ್) ಕೋಚ್‌ನಲ್ಲಿ ಬೆಂಕಿ ಕಾಣಿಸಿಕೊಂಡಿತು. ರೈಲು ಸರಾಯ್ ಭೋಪಾಟ್ ನಿಲ್ದಾಣದ ಮೂಲಕ ಹಾದು ಹೋಗುತ್ತಿದ್ದಾಗ ಹೊಗೆ ಕಾಣಿಸಿಕೊಂಡು ಈ ಅವಘಡ ಸಂಭವಿಸಿತು. ಕೋಚ್‌ಗಳಲ್ಲಿ ಒಂದಕ್ಕೆ ಭಾರಿ ಬೆಂಕಿ ಆವರಿಸಿದ ವೇಳೆ ಪ್ರಯಾಣಿಕರು ಮತ್ತು ಅಧಿಕಾರಿಗಳು ಸುತ್ತಲೂ ನಿಂತಿದ್ದರು. ಈ ದೃಶ್ಯ ವೀಡಿಯೋದಲ್ಲಿ ಸೆರೆಯಾಗಿದೆ. ಛತ್ ಹಬ್ಬದ ಕಾರಣ ಬಿಹಾರಕ್ಕೆ ಹೋಗುವ ಎಲ್ಲಾ ರೈಲುಗಳು ತುಂಬಿ ತುಳುಕುತ್ತಿವೆ. ಗಾಯಗೊಂಡವರನ್ನು ಇಟಾವಾದಲ್ಲಿರುವ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ರೈಲ್ವೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜೆಡಿಎಸ್ ಈಗ ಬರೀ ಕುಟುಂಬ ಪಾರ್ಟಿ

● ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕೆ ● ಜೆಡಿಎಸ್‌ನ ಮಾಜಿ ಶಾಸಕರಾದ ಗೌರಿಶಂಕರ್, ಮಂಜುನಾಥ್ ಕಾಂಗ್ರೆಸ್ ಸೇರ್ಪಡೆ



ಬೆಂಗಳೂರು, ನ.15(ಕೆಎಂಶಿ)– ಜೆಡಿಎಸ್ ಈಗ ತನ್ನ ಸ್ವರೂಪದಲ್ಲಿ ಜನಸಮುದಾಯದ ರಾಜಕೀಯ ಪಕ್ಷವಾಗಿ ಉಳಿದಿಲ್ಲ. ಕೇವಲ ಕುಟುಂಬಕ್ಕೆ ಸೀಮಿತವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಟೀಕಿಸಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ತುಮಕೂರು ಗ್ರಾಮಾಂತರ ಕ್ಷೇತ್ರದ ಮಾಜಿ ಶಾಸಕರಾದ ಗೌರಿಶಂಕರ್ ಮತ್ತು ದಾಸರಹಳ್ಳಿ ಮಂಜುನಾಥ್ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಯಾದ ನಂತರ ಮಾತನಾಡಿದ ಮುಖ್ಯಮಂತ್ರಿ ಅವರು, ಜೆಡಿಎಸ್‌ನ ಡಬಲ್ ಗೇಮ್ ಅನ್ನು ಸರಿಯಾಗಿ ಅರ್ಥ ಮಾಡಿಕೊಂಡಿರುವ ಇವರೂ ಸೇರಿದಂತೆ ಬಹಳಷ್ಟು ಮಂದಿ ಕಾಂಗ್ರೆಸ್ ಕದ ತಟ್ಟಿದ್ದಾರೆ ಎಂದರು.

ನಾವಿದ್ದಾಗ ಜನತಾದಳ ಸೆಕ್ಯುಲರ್ ಆಗಿತ್ತು. ಈಗ 'ಎಸ್' ಕಿತ್ತೋಗಿ ಕೇವಲ ಜನತಾದಳ ಆಗಿ ಉಳಿದಿದೆ. ಹಿಂದೆಯೂ ಬಿಜೆಪಿ ಜತೆ ಕೈ ಜೋಡಿಸಿದ್ದ ಕಾರಣಕ್ಕೆ ಜನತಾ ಪರಿವಾರದಲ್ಲಿ ಸೆಕ್ಯುಲರ್ ಸಿದ್ಧಾಂತದವರೆಲ್ಲಾ ಪ್ರತ್ಯೇಕವಾಗಿ ಉಳಿದೆವು.

ಈಗ ಜೆಡಿಎಸ್ ಮತ್ತೆ ಬಿಜೆಪಿ ಜತೆ ಬೆರೆಯುತ್ತಿದೆ. ನಾನು ಈ ಜೆಡಿಎಸ್ ಅನ್ನು ಬಿಜೆಪಿಯ 'ಬಿ' ಟೀಮ್ ಅಂದಿದ್ದಕ್ಕೆ ಸಿಟ್ಟಾಗಿದ್ದರು. ಅಂದು ನಾನು ಹೇಳಿದ್ದನ್ನು ಇಂದು ಅವರೇ ಸಾಬೀತು ಪಡಿಸಿದ್ದಾರೆ ಎಂದು ಸಮರ್ಥಿಸಿಕೊಂಡರು.

ನಾವು ಗ್ಯಾರಂಟಿ ಕಾರ್ಯಕ್ರಮಗಳನ್ನು ಕೊಟ್ಟಾಗ ಅವನ್ನು ಟೀಕಿಸಿದ್ದ ಪ್ರಧಾನಿಗಳು ಈಗ 'ಮೋದಿ ಗ್ಯಾರಂಟಿ' ಹೆಸರಿನಲ್ಲಿ ಪ್ರಚಾರ ಮಾಡುತ್ತಿದ್ದಾರೆ. ಪ್ರಧಾನಿ ಮೋದಿಯವರೇ, ನಿಮಗೆ ನಾಚಿಕೆ ಆಗುತ್ತೋ ಇಲ್ವೋ ಎಂದು ಪ್ರಶ್ನಿಸಿದರು. ರಾಜ್ಯದ, ಕನ್ನಡ ನಾಡಿನ ಜನತೆಯ ಹಣ ಇರುವ ಸರ್ಕಾರದ ಕಾರ್ಯಕ್ರಮಗಳನ್ನು, ಮೋದಿಯವರು ತಮ್ಮ ಕಾರ್ಯಕ್ರಮ ಎಂದು ಬಿಂಬಿಸಿ ಪ್ರಚಾರ ಪಡೆಯುತ್ತಿರುವುದು ನಾಚಿಕೆಗೇಡಿನ ಸಂಗತಿ. ಇದಕ್ಕೆ ರಾಜ್ಯದ ಜನತೆಯ ಮತ್ತು ನಮ್ಮಗಳ ಬೆಂಬಲ ಇಲ್ಲ ಎಂದು ಸ್ಪಷ್ಟಪಡಿಸಿದರು.

ನಿಧನ

ಪೈಕೇರ ಡಿ. ಚೀಯಣ



ಮೈಸೂರು,ನ.15–ಮೈಸೂರಿನ ಗೋಕುಲಂ 3ನೇ ಹಂತದ ನಿವಾಸಿ ಪೈಕೇರ ಡಿ.ಚೀಯಣ(81) ಬುಧವಾರ ಬೆಳಗ್ಗೆ ನಿಧನರಾದರು. ಮೂಲತಃ ಕೊಡಗು ಜಿಲ್ಲೆ ನಾಪೋಕ್ಲು ಸಮೀಪದ ಪಾಲೂರು ಗ್ರಾಮದವರು. ಇವರು ಪುತ್ರಿ ರೂಪಾ, ಪುತ್ರ ದೇವಯ್ಯ, ಅಳಿಯ ಕುಪುಡೀರ ಕುಟ್ಟಪ್ಪ, ಸೊಸೆ ಗೀತಾ ದೇವಯ್ಯ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನ ಚಿರಶಾಂತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಣಾ ಬಹದ್ದೂರ್



ಮೈಸೂರಿನ ಗಂಗೋತ್ರಿ ಬಡಾವಣೆ ನಿವಾಸಿ ಹಾಗೂ ನಿವೃತ್ತ ಆರ್‌ಐಇ ಸಿಬ್ಬಂದಿ ರಾಣಾ ಬಹದ್ದೂರ್ (81) ಅವರು ಬುಧವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗ, ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಜಯನಗರದ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಿ.ಧರ್ಮರಾಜು



ಕೆ.ಆರ್.ನಗರ ಪಟ್ಟಣದ ನಿವಾಸಿ ಬಿ.ಧರ್ಮರಾಜು (70) ಅವರು ನವೆಂಬರ್ 11ರಂದು ನಿಧನರಾದರು. ಮೃತರು ಪತ್ನಿ ಶ್ರೀಮತಿ ಸುಬ್ಬಲಕ್ಷ್ಮಮ್ಮ, ಮೂವರು ಪುತ್ರಿಯರು, ಅಳಿಯಂದಿರು, ಮಕ್ಕಳು ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ.

ಭರದಿಂದ ಸಾಗಿದೆ ತಾರಾಲಯ ನಿರ್ಮಾಣ ಕಾರ್ಯ






ಮೈಸೂರು,ನ.15–ಮೈಸೂರು ವಿಶ್ವವಿದ್ಯಾನಿಲಯದ ಚಾಮುಂಡಿ ಬೆಟ್ಟದ ತಪ್ಪಲಿನ ಕ್ಯಾಂಪಸ್‌ನಲ್ಲಿ ಅತ್ಯಾಧುನಿಕ ತಾರಾಲಯ ನಿರ್ಮಾಣ ಕಾರ್ಯ ತ್ವರಿತವಾಗಿ ಸಾಗಿದೆ. ಕೇಂದ್ರ ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು ಕಾಸ್ಮಾಲಜಿ ಶಿಕ್ಷಣ ಮತ್ತು ಸಂಶೋಧನಾ–ತರಬೇತಿ ಕೇಂದ್ರದ ಯೋಜನೆಗಾಗಿ ತಮ್ಮ ಸಂಸದರ ನಿಧಿಯಲ್ಲಿ 5 ಕೋಟಿ ರೂ.ಗಳನ್ನು ನೀಡಿದ್ದಾರೆ. ಕಳೆದ 2022ರ ಮಾರ್ಚ್‌ನಲ್ಲಿ ಶಿಲಾನ್ಯಾಸ ನೆರವೇರಿತ್ತು.

ಕರ್ನಾಟಕದ ಯುವಜನರಲ್ಲಿ ಬಾಹ್ಯಾಕಾಶ ಮತ್ತು ವಿಶ್ವವಿಜ್ಞಾನದ ಬಗ್ಗೆ ಆಸಕ್ತಿಯನ್ನು ಬೆಳೆಸಲು ಡಿಜಿಸ್ಟಾರ್ 7 ತಾರಾಲಯವನ್ನು ಸ್ಥಾಪಿಸುವ ಕಲ್ಪನೆಯಲ್ಲಿ ಅವರು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಎಲ್‌ಇಡಿ ಗುಮ್ಮಟವನ್ನು ಕೊನಿಕಾ–ಮಿನೋಲ್ಟಾ (ಜಪಾನ್), ಆರ್‌ಎಸ್‌ಎ–ಕಾಸ್ಮೊಸ್ (ಫ್ರಾನ್ಸ್), ಮತ್ತು ಮೆಸರ್ಸ್ ಆರ್ಬಿಟ್–ಅನಿಮೇಟ್ (ಇಂಡಿಯಾ) ಕನ್ಸೋರ್ಟಿಯಂ ಅಭಿವೃದ್ಧಿ ಪಡಿಸುತ್ತಿವೆ. ಎಲ್‌ಇಡಿ ಡೋಮ್‌ನ ಅಭಿವೃದ್ಧಿ ಮತ್ತು ಸಿವಿಲ್ ನಿರ್ಮಾಣ ಕಾರ್ಯ ಭರದಿಂದ ಸಾಗಿದೆ.







8ಕೆ ರೆಸಲ್ಯೂಶನ್ ಹೊಂದಿರುವ ಹೈಟೆಕ್ 15–ಮೀಟರ್ ಎಲ್‌ಇಡಿ ಗುಮ್ಮಟ ತಾರಾಲಯವು ವಿಶ್ವದ ಮೊದಲ ಗುಮ್ಮಟ ತಾರಾಲಯ ಎಂಬ ಪ್ರಸಿದ್ಧಿಗೆ ಪಾತ್ರವಾಗಲಿದೆ. 86 ಕೋಟಿ ರೂಪಾಯಿಗಳ ಬಜೆಟ್ ಅಂದಾಜಿನೊಂದಿಗೆ ಈ ಯೋಜನೆಯು ನಿರ್ಮಾಣ ಮತ್ತು ಕಾರ್ಯಾಚರಣೆಗಾಗಿ ಮೈಸೂರು ವಿಶ್ವವಿದ್ಯಾನಿಲಯದೊಂದಿಗೆ ಒಪ್ಪಂದ ಮಾಡಿಕೊಂಡಿದ್ದು, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್ (ಐಐಎ) ಮೂಲಕ ಕಾರ್ಯಗತಗೊಳಿಸಲಾಗಿದೆ. ಕಾಸ್ಮೊಸ್ ಮೈಸೂರು ಯೋಜನೆ ಅನುಷ್ಠಾನವನ್ನು ಪ್ರಧಾನ ವೈಜ್ಞಾನಿಕ ಸಲಹೆಗಾರರ ಮಾರ್ಗದರ್ಶನದಲ್ಲಿ ಮತ್ತು ನೀತಿ ಆಯೋಗ ಮತ್ತು ಸದಸ್ಯರ ಸಹ–ಅಧ್ಯಕ್ಷತೆಯ ಸಲಹಾ ಮಂಡಳಿಯ ಅಡಿಯಲ್ಲಿ ಕೈಗೊಳ್ಳಲಾಗುತ್ತಿದೆ.

ಪಟಾಕಿ ಸಿಡಿಸುವಾಗ ಲಘು ಗಾಯ: ಕೆ.ಆರ್.ಆಸ್ಪತ್ರೆಯಲ್ಲಿ 9 ಮಂದಿಗೆ ಚಿಕಿತ್ಸೆ

ಮೈಸೂರು,ನ.15(ಆರ್‌ಕೆ)–ದೀಪಾವಳಿ ಹಬ್ಬದಂದು ಪಟಾಕಿ ಸಿಡಿಸುವಾಗ ಸಣ್ಣಪುಟ್ಟ ಸುಟ್ಟ ಗಾಯಗಳಾದ 9 ಮಂದಿ ಕೆ.ಆರ್.ಆಸ್ಪತ್ರೆಯಲ್ಲಿ ಹೊರ ರೋಗಿಗಳಾಗಿ ಚಿಕಿತ್ಸೆ ಪಡೆದಿದ್ದಾರೆ. ಪಟಾಕಿ ಸಿಡಿದು ಕಣ್ಣಿಗೆ ಗಾಯವಾದ 7 ಮಂದಿಗೆ ಕಣ್ಣಿನ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿದ ಬಳಿಕ ಸುಟ್ಟಗಾಯಗಳ ವಿಭಾಗದಲ್ಲಿ ಸೂಕ್ತ ಚಿಕಿತ್ಸೆ ನೀಡಿ ಕಳುಹಿಸಲಾಗಿದೆ. ಕಳೆದ 3 ದಿನಗಳಲ್ಲಿ ಒಟ್ಟು 9 ಮಂದಿ ಪಟಾಕಿ ಸಿಡಿಸುವ ವೇಳೆ ಗಾಯಗಳಾಗಿ ಬಂದಿದ್ದರು. ಸಣ್ಣಪುಟ್ಟ ಗಾಯವಾದ್ದರಿಂದ ಎಲ್ಲರೂ ಹೊರರೋಗಿಗಳಾಗಿ ಚಿಕಿತ್ಸೆ ಪಡೆದಿದ್ದಾರೆ ಎಂದು ಪ್ಲಾಸ್ಟಿಕ್ ಸರ್ಜರಿ ವಿಭಾಗದ ಮುಖ್ಯಸ್ಥ ಡಾ.ಮೋಹನ್ ತಿಳಿಸಿದ್ದಾರೆ.



ಮೈಸೂರಿನ ದಕ್ಷ ಕಾಲೇಜಿನ ಸಂಸ್ಥಾಪಕ ಅಧ್ಯಕ್ಷ ಪಿ.ಜಯಚಂದ್ರರಾಜು ಅವರನ್ನು ಬೆಂಗಳೂರಿನ ಸೆಂಟ್ ಫ್ರಾನ್ಸಿಸ್ ಕಾಲೇಜಿನಲ್ಲಿ ಆತ್ಮಶ್ರೀ ಕನ್ನಡ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ನಡೆದ 'ಭಾರತ ಸಂವಿಧಾನ' ಕುರಿತ ವಿಚಾರ ಸಂಕಿರಣದಲ್ಲಿ ಸನ್ಮಾನಿಸಲಾಯಿತು. ಈ ವೇಳೆ ಕಾಲೇಜಿನ ನಿರ್ದೇಶಕ ಫಾ.ಪೀಟರ್, ಪ್ರತಿಷ್ಠಾನದ ಅಧ್ಯಕ್ಷ ಡಾ.ಗುಣವಂತ ಮಂಜು, ಸಾಹಿತಿ ಟಿ.ಸತೀಶ್ ಜವರೇಗೌಡ, ವಕೀಲ ಕೆ.ಆರ್. ವೆಂಕಟೇಶ್‌ಗೌಡ, ಪ್ರಾಂಶುಪಾಲ ಡಾ.ಸುಬ್ಬರಾವ್, ಉಪನ್ಯಾಸಕಿ ಡಾ.ಪೂರ್ಣಿಮಾ ಜೋಗಿ ಇದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ನ.15– ಮಾನಸೀನಗರ



ಮತ್ತು ರಾಧಕೃಷ್ಣ ಫೀಡರ್‌ನಲ್ಲಿ ತುರ್ತು ನಿರ್ವಹಣಾ ಕಾಮಗಾರಿ ನಿಮಿತ್ತ ನ.16 ರಂದು ಬೆಳಗ್ಗೆ 10ರಿಂದ ಸಂಜೆ 5:30 ರವರೆಗೆ ಮಾನಸೀನಗರ 'ಬಿ' ವಲಯ, ಮಾನಸೀನಗರ, ಬಿ.ಎಸ್.ಎನ್.ಎಲ್ ಬಡಾವಣೆ, ಆಶ್ರಿತ ಬಡಾವಣೆ, ಆರೋಗ್ಯ ಬಡಾವಣೆ, ವೆಂಕಟೇಶ್ವರ ಬಡಾವಣೆ, ವಾಣಿ ವಿಲಾಸ ಬಡಾವಣೆ, ಪ್ಯಾರಡೈಸ್ ಬಡಾವಣೆ, ದೇವೇಗೌಡ ವೃತ್ತ, ವಿದ್ಯಾಶಂಕರ ಬಡಾವಣೆ, ಪ್ರಶಾಂತ್ ಬಡಾವಣೆ, ಶಕ್ತಿನಗರ, ಟೀಚರ್ ಬಡಾವಣೆ, ಯರಗನಹಳ್ಳಿ, ರಾಜ್‌ಕುಮಾರ್ ರಸ್ತೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಸೆಸ್ಕ್ ಪ್ರಕಟಣೆ ತಿಳಿಸಿದೆ.

ಪ್ರಕೃತಿ ಚಿಕಿತ್ಸಾ ಶಿಬಿರ; ಅರಿವು ಕಾರ್ಯಕ್ರಮ

ಮೈಸೂರು, ನ.15– ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ವತಿಯಿಂದ 6ನೇ ರಾಷ್ಟ್ರೀಯ ಪ್ರಕೃತಿ ಚಿಕಿತ್ಸಾ ದಿನಾಚರಣೆಯ ಪ್ರಯುಕ್ತ ನವೆಂಬರ್ 17 ಮತ್ತು 18 ರಂದು ಸಮಗ್ರ ಆರೋಗ್ಯಕ್ಕಾಗಿ ಪ್ರಕೃತಿ ಚಿಕಿತ್ಸೆ ಎಂಬ ಶೀರ್ಷಿಕೆ ಅಡಿಯಲ್ಲಿ ಸಾರ್ವಜನಿಕರಿಗೆ ಮತ್ತು ಮೈಸೂರಿನ ಸುತ್ತಮುತ್ತಲಿನ ಶಾಲಾ–ಕಾಲೇಜಿನ ವಿದ್ಯಾರ್ಥಿಗಳಿಗೆ ಪ್ರಕೃತಿ ಚಿಕಿತ್ಸೆಯ ಮೂಲಕ ರೋಗಗಳ ನಿವಾರಣೆ ಬಗ್ಗೆ ಅರಿವು ಮೂಡಿಸಲು ಹಾಗೂ ಬಿಎಂವೈಎಸ್ ಪದವಿ ಬಗ್ಗೆ ಮಾಹಿತಿ ನೀಡಲು ಓಪನ್ ಡೇ ಪ್ರಯುಕ್ತ ವಸ್ತು ಪ್ರದರ್ಶನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮಹಾವಿದ್ಯಾಲಯದ ಆಸ್ಪತ್ರೆಯಲ್ಲಿ ಸಾರ್ವಜನಿಕರಿಗೆ ಪ್ರಕೃತಿ ಚಿಕಿತ್ಸಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ರಣಹದ್ದು ಸಂರಕ್ಷಣೆ ಕುರಿತು ವಿದ್ಯಾರ್ಥಿಗಳಿಗೆ ಜಾಗೃತಿ



ಮೈಸೂರು, ನ.15 (ಎಂಟಿವೈ)– ನಂಜನಗೂಡು ತಾಲೂಕಿನ ಹೆಡಿಯಾಲ ಸರ್ಕಾರಿ ಪ್ರೌಢಶಾಲೆಯಲ್ಲಿ ವೈಲ್ಡ್ ಲೈಫ್ ಕನ್ಸರ್ವೇಷನ್ ಫೌಂಡೇಷನ್ ವತಿಯಿಂದ ರಣಹದ್ದುಗಳ ಸಂರಕ್ಷಣೆ ಕುರಿತು ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಜಾಗೃತಿ ಕಾರ್ಯಕ್ರಮದಲ್ಲಿ ವೈಲ್ಡ್ ಲೈಫ್ ಕನ್ಸರ್ವೇಷನ್ ಫೌಂಡೇಷನ್ ಮುಖ್ಯಸ್ಥ ರಾಜ್‌ಕುಮಾರ್ ಅರಸ್ ರಣಹದ್ದುಗಳ ಸಂತತಿ ಸಂರಕ್ಷಣೆ, ಅವುಗಳಿಂದಾಗುವ ಪ್ರಯೋಜನ ಕುರಿತು ಉಪನ್ಯಾಸ ನೀಡಿದರು.

ಶಾಲಾ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರಾತ್ಯಕ್ಷಿಕೆ ಮೂಲಕ ವಿವರಣೆ ನೀಡಿದ ಅವರು, ಪ್ರಕೃತಿಯಲ್ಲಿ ಪ್ರತಿಯೊಂದು ಜೀವರಾಶಿಯೂ ತನ್ನದೇ ಆದ ಕೆಲಸದ ಮೂಲಕ ಸಮತೋಲನ ಕಾಪಾಡಿಕೊಳ್ಳಲು ಶ್ರಮಿಸುತ್ತವೆ. ಎಲ್ಲಾ ಪ್ರಾಣಿ, ಪಕ್ಷಿಗಳಿಗೂ ತಮ್ಮದೇ ಆದ ಜವಾಬ್ದಾರಿ ನಿಭಾಯಿಸುವುದರಿಂದಲೇ ಉತ್ತಮ ಪರಿಸರ ಕಾಣಬಹುದು. ಆದರೆ, ಪ್ರತಿಯೊಂದು ಹಂತದಲ್ಲೂ ಮಾನವನ ಹಸ್ತಕ್ಷೇಪ ಹೆಚ್ಚಾಗುತ್ತಿದ್ದು, ಅಪರೂಪದ ಪ್ರಾಣಿ ಹಾಗೂ ಪಕ್ಷಿಗಳ ಸಂಕುಲಕ್ಕೆ ಸಂಚಕಾರ ಒದಗಿ ಬರುತ್ತಿದೆ ಎಂದು ವಿಷಾದಿಸಿದರು.

ಭಾರತದಲ್ಲಿ ಈ ಹಿಂದೆ ರಣಹದ್ದು ಸಂತತಿ ಉತ್ತಮವಾಗಿತ್ತು. ಆದರೆ, ಇಂದು ರಣಹದ್ದುಗಳ ಸಂತತಿ ಶೋಚನೀಯ ಸ್ಥಿತಿಗೆ ದೂಡಲ್ಪಟ್ಟಿದೆ. ದೇಶದಲ್ಲಿ ಈ ಹಿಂದೆ ಕೆಂಪುತಲೆ ರಣಹದ್ದು, ಬಿಳಿಬೆನ್ನಿನ ರಣಹದ್ದು, ಭಾರತೀಯ ರಣಹದ್ದು ಹಾಗೂ ಈಜಿಪ್ಟಿಯನ್ ರಣಹದ್ದು ಎಂಬ ನಾಲ್ಕು ಬಗೆಯ ರಣಹದ್ದುಗಳನ್ನು ಕಾಣಬಹುದಾಗಿತ್ತು. ಆದರೆ, ಜಾನುವಾರುಗಳಿಗೆ ಈ ಹಿಂದೆ ಚಿಕಿತ್ಸೆ ನೀಡುವಾಗ ಬಳಸಿದ ಭಾರಿ ಪ್ರಮಾಣದ ನೋವು ನಿವಾರಕ ಡೈಕ್ಲೋಫಿನಾಕ್ ಔಷಧ ರಣಹದ್ದುಗಳ ಸಂತತಿಯನ್ನು ವಿನಾಶಕ್ಕೆ ದೂಡಿದೆ. ಈ ಔಷಧಿಯ ಅಂಶವಿರುವ ಜಾನುವಾರುಗಳ ಕಳೇಬರ ಭಕ್ಷಿಸಿ, ರಣಹದ್ದುಗಳು ತನ್ನ ವಂಶವಾಹಿನಿಯನ್ನೇ ಕಳೆದುಕೊಂಡಿವೆ. ಇದರಿಂದ ಪ್ರಸ್ತುತ ರಣಹದ್ದುಗಳ ಸಂಖ್ಯೆ ಶೇ.1ರಷ್ಟು ಮಾತ್ರ ಇದ್ದು, ಉಳಿದ ಶೇ.99ರಷ್ಟು ರಣಹದ್ದುಗಳು ನಾಶವಾಗಿವೆ ಎಂದು ಕಳವಳ ವ್ಯಕ್ತಪಡಿಸಿದರು.

ಅರಣ್ಯ ಪ್ರದೇಶಗಳಲ್ಲಿ ವಿವಿಧ ಕಾರಣದಿಂದ ಮೃತಪಡುವ ವನ್ಯಜೀವಿಗಳ ಕಳೇಬರ ಹಾಗೂ ಕೆಲವೆಡೆ ಜಾನುವಾರುಗಳು ಮೃತಪಟ್ಟಾಗ ಹೊಲ, ಹಳ್ಳ, ಮೈದಾನದಲ್ಲಿ ಎಸೆದಿದ್ದ ಕಳೇಬರ ತಿಂದು ವೈರಾಣು, ಸೂಕ್ಷ್ಮಾಣು ಜೀವಿಗಳನ್ನು ಜೀರ್ಣಿಸಿಕೊಂಡು ಸಾಂಕ್ರಾಮಿಕ ರೋಗ ಹರಡದಂತೆ ಶ್ರಮಿಸುತ್ತಿದ್ದವು. ಪರಿಸರ ಸ್ವಚ್ಛತಾ ಕರ್ಮಿಯಾಗಿ ಕಾರ್ಯ ನಿರ್ವಹಿಸುತ್ತವೆ. ರಣಹದ್ದುಗಳು ನಿಸರ್ಗ ಸಮತೋಲನ ಹಾಗೂ ಆರೋಗ್ಯಕರ ಪರಿಸರಕ್ಕಾಗಿ ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಹೊಣೆಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಡಬ್ಲ್ಯೂಸಿಎಫ್ ಸದಸ್ಯರಾದ ಮಾರ್ಕ್‌ಸ್ಟೀವ್, ಜಗದೀಶ್, ವೀ ಟು ಸಾಫ್ಟ್ ಸಂಸ್ಥೆಯ ನಿಧಿ, ಕಾರ್ತೀಕೇಯನ್, ಗೀತಾ, ಇಸಾನ್, ಶಾಲಾ ಶಿಕ್ಷಕರಾದ ಪಣಿರಾಜ್ ಕೆ.ವಿ, ವೆಂಕಟೇಶ್, ಬೋಗರಾಜ್, ಪ್ರಮೋದ್, ಪುಟ್ಟರಾಜು, ಪ್ರೀತಿ, ರೆಹನಾಬೇಗಂ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.11.2023 ಗುರುವಾರ, ಮಳೆ ನಕ್ಷತ್ರ: ವಿಶಾಖ, 07.11.2023ರಿಂದ 19.11.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತೀಕ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಮೂಲ, ರಾಹುಕಾಲ: ಮಧ್ಯಾಹ್ನ 1.30ರಿಂದ 3ವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ

■ **ಜೆಎಸ್‌ಎಸ್ ನರ್ಸಿಂಗ್ ಕಾಲೇಜು:** ನರ್ಸಿಂಗ್ ವಿದ್ಯಾರ್ಥಿಗಳ ಸಮರ್ಪಣಾ ಸಮಾರಂಭ, ಉಪಸ್ಥಿತರು: ಜಾನೆಟ್ ಮಥಾಯ್ಸ್, ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್, ಕಾಲೇಜು ಪ್ರಿನ್ಸಿಪಾಲ್ ಪ್ರೊ.ಅಶ್ವಿನಿದೇವಿ, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 11ಕ್ಕೆ.

■ **ಭರತ ಪ್ರಕೃತಿ ಚಿಕಿತ್ಸಾ, ಸಸ್ಯೌಷಧ ಮತ್ತು ಯೋಗ ಶಿಕ್ಷಣ ಸಂಶೋಧನಾ ಸಂಸ್ಥೆ, ಸಾಯನ್ ಹರ್ಬಲ್ ಕೇರ್, ಗೌಂಡಿಯಾ, ಮಹಾರಾಷ್ಟ್ರ:** ಉಚಿತ ಆರೋಗ್ಯ ತಪಾಸಣೆ ಶಿಬಿರ, ಶುದ್ಧ ಸಸ್ಯ ಪೂರಕ ಪ್ರತ್ಯಾಹಾರ ಚಿಕಿತ್ಸೆ, ಸ್ಥಳ: ಸಂಸ್ಥೆಯ ಆವರಣ, ಕೆ.ಜಿ.ಕೊಪ್ಪಲು–ಜಯನಗರ ಜಂಕ್ಷನ್, ಬೆಳಗ್ಗೆ 11.30ಕ್ಕೆ.

■ **ಶಾರದಾ ವಿಲಾಸ ಕಾಲೇಜು, ಯೂತ್ ರೆಡ್ ಕ್ರಾಸ್ ಯೂನಿಟ್:** ಮಾದಕ ವ್ಯಸನ ಜಾಗೃತಿ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಡಾ. ವೆಂಕಟಕೃಷ್ಣ ಕೂಡಲಿ, ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ. ಬಿ.ಎಂ.ಸುಬ್ರಾಯ, ಕಾರ್ಯದರ್ಶಿ ಎನ್.ಚಂದ್ರಶೇಖರ್, ರೆಡ್ ಕ್ರಾಸ್ ಸೊಸೈಟಿ ಕಾರ್ಯದರ್ಶಿ ಎಸ್.ಎಸ್.ವೈದ್ಯನಾಥ, ಅಧ್ಯಕ್ಷತೆ: ಶಾರದಾ ವಿಲಾಸ ಕಾಲೇಜು ಪ್ರಿನ್ಸಿಪಾಲ್ ಡಾ.ಎಂ.ದೇವಿಕಾ, ಸ್ಥಳ: ಲೆಕ್ಚರ್ ಹಾಲ್, ಮ. 12.30ರಿಂದ.

■ **ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗ :** ನುಡಿ ಸಂಭ್ರಮ, ಅಧ್ಯಕ್ಷತೆ : ವಾಣಿ ವಿದ್ಯಾಮಂದಿರ ಆಡಳಿತಾಧಿಕಾರಿ ಹೆಚ್.ಕೆ.ರಾಘವೇಂದ್ರರಾವ್, ಮುಖ್ಯ ಅತಿಥಿಗಳು: ಸಾಹಿತಿ ಬನ್ನೂರು ಕೆ.ರಾಜು, ಲೇಖಕಿ ಡಾ.ಜಮುನಾರಾಣಿ ಮಿರ್ಲೆ, ಶ್ರೀಮತಿ ಎನ್.ಕೆ.ಕಾವೇರಿಯಮ್ಮ, ಪರಶುರಾಮೇಗೌಡ, ಪ್ರತಿಷ್ಠಾನ ಅಧ್ಯಕ್ಷ ಎ.ಸಂಗಪ್ಪ, ಸ್ಥಳ: ವಾಣಿ ವಿದ್ಯಾಮಂದಿರ, ವಿದ್ಯಾರಣ್ಯಪುರಂ, ಮಧ್ಯಾಹ್ನ 3ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ವಿದ್ವಾನ್ ಖೇಡ ವೇದವ್ಯಾಸಚಾರ್ಯ ಅವರಿಂದ ಉಪನಿಷದ್‌ಗಳ ಬಗ್ಗೆ ಪ್ರವಚನ, ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಚಿನ್ಮಯ ಮಿಷನ್ :** ಪಂಡಿತ್ ಕೃಷ್ಣರಾವ್ ಪ್ರಕಾಶ್ ಅವರಿಂದ ಪತಂಜಲಿಯ ಯೋಗ ಸೂತ್ರಗಳು–ಸಮಾಧಿ ಪಾದ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿನ್ಮಯ ಮಿಷನ್, ಮೈಸೂರು ಆಶ್ರಮದ ದತ್ತ ಸನ್ನಿಧಿ, ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ.

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟೆಬಲ್ ಟ್ರಸ್ಟ್ :** ವಿದ್ವಾನ್ ವಿದ್ಯಾ ನಟರಾಜ್ ಅವರಿಂದ ಗಾಯನ, ಕು. ಪೃಥ್ವಿ ಭಾಸ್ಕರ್–ಪಿಟೀಲು, ವಿದ್ವಾನ್ ಜಿ.ಎಸ್. ರಾಮಾನುಜನ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ: ವೀಣೆ ಶೇಷಣ್ಣ ಭವನ, ಗಾನಭಾರತೀ, ಸಂಜೆ 6ಕ್ಕೆ.

ಸುತ್ತೂರು ಶ್ರೀ ಕ್ಷೇತ್ರದಲ್ಲಿಂದು, ನಂಜನಗೂಡು ತಾ.

■ **ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ :** ಕಾರ್ತಿಕಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಸುತ್ತೂರು ಶ್ರೀ ಕ್ಷೇತ್ರ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿನ ಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ– ಮೈಸೂರಿನ ಎನ್. ರವಿಶಂಕರ್, 6.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರ ಕುಮಾರ್, 6.45 ಕಲ್ಯಾಣ ಕರೆದಿದೆ ಕಲ್ಯಾಣ–ಪ್ರಾಯೋಜಿತ ಕಾರ್ಯಕ್ರಮ, 6.50 ರೈತರಿಗೆ ಸಲಹೆ, 8.30 ಆರೋಗ್ಯಾಮೃತ–ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖಾ ಪ್ರಾಯೋಜಿತ ಕಾರ್ಯಕ್ರಮ, 10.00 ವಿ.ಕೆ.ರಾಮನ್–ವೇಣುವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 1.20 ಭಾವಗೀತೆ, 1.30 ಕೊಲ್ಕತ್ತಾದಲ್ಲಿ ನಡೆಯಲಿರುವ ಐಸಿಸಿ ವಿಶ್ವಕಪ್ ಎರಡನೇ ಸೆಮಿಫೈನಲ್ ಪಂದ್ಯದ ವೀಕ್ಷಕ ವಿವರಣೆ.

ನ್ಯಾಯಾಧೀಶ ಜಿ.ಎಸ್.ಸಂಗ್ರೇಶಿ ಅವರಿಗೆ ಬೀಳ್ಕೊಡುಗೆ



ಮೈಸೂರು, ನ.15– ರಾಜ್ಯ ಕಾನೂನು ಕಾರ್ಯದರ್ಶಿಗಳಾಗಿ ವರ್ಗಾವಣೆಯಾದ ಮೈಸೂರು ಜಿಲ್ಲಾ ಮತ್ತು ಸತ್ರ ಪ್ರಧಾನ ನ್ಯಾಯಾಧೀಶರಾಗಿದ್ದ ಜಿ.ಎಸ್. ಸಂಗ್ರೇಶಿ ಅವರನ್ನು ಮೈಸೂರು ವಕೀಲರ ಸಂಘದ ವತಿಯಿಂದ ಆತ್ಮೀಯವಾಗಿ ಅಭಿನಂದಿಸಿ, ಬೀಳ್ಕೊಡಲಾಯಿತು.

ಕಳೆದ ಒಂಭತ್ತು ತಿಂಗಳಿನಿಂದ ಮೈಸೂರು ಜಿಲ್ಲಾ ಮತ್ತು ಸತ್ರ ಪ್ರಧಾನ ನ್ಯಾಯಾಧೀಶರಾಗಿ ಜನಸ್ನೇಹಿಯಾಗಿ ಹಾಗೂ ವಕೀಲರು ನ್ಯಾಯಾಲಯದ ಸಿಬ್ಬಂದಿ ಜೊತೆ ಉತ್ತಮ ಸಮನ್ವಯತೆಯೊಂದಿಗೆ ಕರ್ತವ್ಯ ನಿರ್ವಹಿಸಿದ್ದರು. ಮೈಸೂರು ಜಿಲ್ಲಾ ವಕೀಲರ ಸಂಘದ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ನ್ಯಾಯಾಧೀಶರಾದ ಜಿ.ಎಸ್.ಸಂಗ್ರೇಶಿ ಹಾಗೂ ಅವರ ಪತ್ನಿ ಶ್ರೀಮತಿ ಅನಸೂಯ ಅವರಿಗೆ ಮೈಸೂರುಪೇಟ ತೊಡಿಸಿ, ಗಂಧದ ಹಾರ, ಶಾಲು ಹೊದಿಸಿ ಗೌರವ ಸಮರ್ಪಿಸಲಾಯಿತು.

ಕಾರ್ಯಕ್ರಮದಲ್ಲಿ ಒಂದನೇ ಹೆಚ್ಚುವರಿ ನ್ಯಾಯಾಧೀಶರಾದ ಪುಟ್ಟಸ್ವಾಮಿ, ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀಮತಿ ಸುಧಾ ಸೇತುರಾಂ, ಮೈಸೂರು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ ಕಾರ್ಯದರ್ಶಿ ಉಮೇಶ್, ಉಪಾಧ್ಯಕ್ಷ ಪುಟ್ಟಸಿದ್ದೇಗೌಡ, ರಾಜ್ಯ ವಕೀಲರ ಪರಿಷತ್ ಸದಸ್ಯ ಚಂದ್ರಮೌಳಿ ಸೇರಿ ನೂರಾರು ಹಿರಿಯ ಕಿರಿಯ ವಕೀಲರು ಭಾಗಿಯಾಗಿದ್ದರು.



ಬಿಜೆಪಿ ರಾಜ್ಯಾಧ್ಯಕ್ಷರಾಗಿ ಬುಧವಾರ ಅಧಿಕಾರ ವಹಿಸಿಕೊಂಡ ಬಿ.ವೈ.ವಿಜಯೇಂದ್ರ ಅವರನ್ನು ಮಾಜಿ ಮೇಯರ್ ಸಂದೇಶ್ ಸ್ವಾಮಿ ಅಭಿನಂದಿಸಿದರು. ಈ ವೇಳೆ ಮಾಜಿ ಶಾಸಕ ಎಲ್.ನಾಗೇಂದ್ರ, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಆರ್.ರಘು ಕೌಟಿಲ್ಯ, ಅಶೋಕ್ ಇನ್ನಿತರರಿದ್ದರು.

ಹಾಸನದ 61 ಎಕರೆ ಅರಣ್ಯ ಭೂಮಿ ಅಕ್ರಮ ಮಾರ್ಪಾಡು

ವರದಿಗೆ ರಾಜ್ಯಕ್ಕೆ ನಿರ್ದೇಶನ

ನವದೆಹಲಿ: 61.32 ಎಕರೆ ಅರಣ್ಯ ಭೂಮಿಯನ್ನು ಕಂದಾಯ ಭೂಮಿಗೆ ಅಕ್ರಮವಾಗಿ ಮಾರ್ಪಡಿಸಿದ ಕುರಿತು ಹಾಸನ ಉಪವಿಭಾಗಾಧಿಕಾರಿ ಬಿ.ಎ. ಜಗದೀಶ್ ವಿರುದ್ಧ ಮಾಡಿರುವ ಆರೋಪಗಳ ಕುರಿತು ವರದಿ ಸಲ್ಲಿಸುವಂತೆ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ಕರ್ನಾಟಕ ಅರಣ್ಯ ಇಲಾಖೆಗೆ ಸೂಚಿಸಿದೆ.

ಈ ಸಂಬಂಧ ನ.6ರಂದು ಅರಣ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಅರಣ್ಯ ಪಡೆಯ ಮುಖ್ಯಸ್ಥರಿಗೆ (ಪಿಸಿಸಿಎಫ್) ಪತ್ರ ಬರೆದಿರುವ ಸಚಿವಾಲಯದ ಉಪ ಮಹಾನಿರೀಕ್ಷಕ ಎಂ.ಕೆ. ಶಂಭು, ಅರಣ್ಯ ಸಂರಕ್ಷಣಾ ಕಾಯ್ದೆ ಉಲ್ಲಂಘನೆ ಹಾಗೂ ಭೂ ಅಕ್ರಮದ ಬಗ್ಗೆ ಹಾಸನದ ಡಿಸಿಎಫ್ ವರದಿ ನೀಡಿದ್ದಾರೆ. ಈ ಸಂಬಂಧ ತಿಂಗಳ ಒಳಗೆ ವಾಸ್ತವಾಂಶದ ವರದಿ ಸಲ್ಲಿಸಬೇಕು. ಇಲ್ಲದಿದ್ದರೆ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ. ಈ ಅಕ್ರಮದ ಬಗ್ಗೆ ವರದಿ ಸಲ್ಲಿಸುವಂತೆ ಅರಣ್ಯ ಇಲಾಖೆಗೆ 2022ರ ಮಾ.4ರಂದು ಸಚಿವಾಲಯ ಸೂಚಿಸಿತ್ತು.

ಉದ್ಯಮಶೀಲತೆ ತರಬೇತಿಗಾಗಿ ಅರ್ಜಿ ಆಹ್ವಾನ

ಮೈಸೂರು,ನ.15–ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2023–24ನೇ ಸಾಲಿಗೆ ಪರಿಶಿಷ್ಟ ಜಾತಿಯ ಯುವ ಜನರಿಗೆ ಉದ್ಯಮಶೀಲತೆ ತರಬೇತಿ ನೀಡಲು ಸಿಡಾಕ್ ಸಂಸ್ಥೆಯ ಮೂಲಕ ಪರಿಶಿಷ್ಟ ಜಾತಿಯ ಉದ್ಯಮಶೀಲತೆಯ ಬಗ್ಗೆ ಹತ್ತು ದಿನಗಳ ಉಚಿತ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಆಸಕ್ತರು https://www.scsptsp.karnataka.gov.in/BMS/CDOC/EDPRegistrationForm.aspx ಮೂಲಕ ನ.30ರೊಳಗೆ ಅರ್ಜಿ ಸಲ್ಲಿಸಬೇಕು. 21 ವರ್ಷ ಮೇಲ್ಪಟ್ಟ ಹಾಗೂ ಗರಿಷ್ಠ 50 ವರ್ಷ ವಯೋಮಿತಿ ಇರುವ, ಪಿಯುಸಿ ಅಥವಾ ಅದಕ್ಕಿಂತ ಮೇಲ್ಪಟ್ಟ ಶೈಕ್ಷಣಿಕ ಅರ್ಹತೆ ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ಮೈಸೂರಲ್ಲಿ ಸ್ಥಾಪನೆಯಾಗುತ್ತಿದೆ ಲಂಡನ್ 'ಬಿಗ್ ಬೆನ್' ಮಾದರಿ ಗಡಿಯಾರ ಗೋಪುರ!



ಉದಯಗಿರಿಯ ಮದೀನಾ ಮಸೀದಿ ವೃತ್ತದಲ್ಲಿ ಪಾಲಿಕೆಯಿಂದ 31 ಲಕ್ಷ ವೆಚ್ಚದಲ್ಲಿ 38 ಅಡಿ ಸ್ಥಾಪನೆ

ಮೈಸೂರು, ನ.15(ಜಿಎ)–ರಾಜರ ಕಾಲದಲ್ಲಿ ನಿರ್ಮಿಸಲಾಗಿದ್ದು, ಈಗ ಅತ್ಯಧಿಕ ಪ್ರವಾಸಿಗರನ್ನು ಆಕರ್ಷಿಸುತ್ತಿರುವ ಮೈಸೂರಿನ ಪುರಭವನ ಮುಂಭಾಗವಿರುವ ದೊಡ್ಡ ಗಡಿಯಾರ ಹಾಗೂ ದೇವರಾಜ ಮಾರುಕಟ್ಟೆ ಮುಂಭಾಗವಿರುವ ಚಿಕ್ಕ ಗಡಿಯಾರದ ಜೊತೆಗೆ ಮೈಸೂರಿನಲ್ಲಿ ಲಂಡನ್‌ನ 'ಬಿಗ್ ಬೆನ್' ಮಾದರಿಯ ಆಕರ್ಷಕವಾದ ಮತ್ತೊಂದು ದೊಡ್ಡ ಗಡಿಯಾರ ತಲೆಯೆತ್ತುತ್ತಿದೆ.

ಈಗಾಗಲೇ ಪಶ್ಚಿಮ ಬಂಗಾಳದಲ್ಲಿ ಬಿಗ್ ಬೆನ್ ಮಾದರಿಯ ದೊಡ್ಡ ಗಡಿಯಾರ ಸ್ಥಾಪನೆಯಾಗಿದ್ದು, ಅಲ್ಲಿಗೆ ತೆರಳಿದ್ದ ಮೈಸೂರು ಪಾಲಿಕೆ ಅಧಿ ಕಾರಿಗಳು ವಿವರಗಳನ್ನು ಪಡೆದು ಉದಯಗಿರಿಯ ಮದೀನಾ ಮಸೀದಿ ವೃತ್ತದಲ್ಲಿ 31 ಲಕ್ಷ ರೂ. ವೆಚ್ಚದಲ್ಲಿ 38 ಅಡಿ ಎತ್ತರದ ಬಿಗ್ ಬೆನ್ ಮಾದರಿ ಆಕರ್ಷಕ ಗಡಿಯಾರ ಸ್ಥಾಪಿಸುವ ಕಾರ್ಯವನ್ನು ಆರಂಭಿಸಿದ್ದಾರೆ.

> ಲಂಡನ್‌ನ ಬಿಗ್ ಬೆನ್ ಮಾದರಿಯ ಗಡಿಯಾರ ನಿರ್ಮಾಣದ ಕಾಮಗಾರಿ ಕಳೆದ 10 ದಿನಗಳಿಂದ ನಡೆಯುತ್ತಿದೆ. ಈ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಸಣ್ಣಪುಟ್ಟ ಕೆಲಸಗಳು ಮಾತ್ರ ಬಾಕಿ ಇವೆ. ಮುಂದಿನ ವಾರದೊಳಗೆ ಈ ಕ್ಲಾಕ್ ಟವರ್‌ನ ಕಾಮಗಾರಿ ಪೂರ್ಣಗೊಳ್ಳಲಿದ್ದು ಉದ್ಘಾಟನೆಗೆ ಸಿದ್ಧವಾಗುತ್ತದೆ. ಮೈಸೂರಿನಲ್ಲಿ ಇದೇ ರೀತಿಯ ಕ್ಲಾಕ್ ಟವರ್ ಸ್ಥಾಪಿಸುವ ಚಿಂತನೆ ಮೈಸೂರು ಮಹಾನಗರಪಾಲಿಕೆಗಿದೆ.
>
> **–ನದೀಂ ಅಹಮದ್, ಪಾಲಿಕೆ ವಲಯ ಕಚೇರಿ–8ರ ಎಂಜಿನಿಯರ್**

ಇದಕ್ಕಾಗಿ ಪಶ್ಚಿಮ ಬಂಗಾಳದಿಂದ 38 ಅಡಿ ಎತ್ತರದ ಗ್ಲಾಸ್ ಫೈಬರ್ ಬಲವರ್ಧಿತ ಕಾಂಕ್ರೀಟ್ (GRC–Glass Fiber Reniforced Concrete) ನಿಂದ ತಯಾರಿಸಲಾದ ಕ್ಲಾಕ್ ಟವರ್ ಅನ್ನು ಈಗಾಗಲೇ ಮೈಸೂರಿಗೆ ತರಲಾಗಿದೆ. 1 ಮೀಟರ್ ಎತ್ತರದ ಬೇಸ್‌ಮೆಂಟ್ ಮೇಲೆ ಈ ಕ್ಲಾಕ್ ಟವರ್ ಅನ್ನು ಸ್ಥಾಪಿಸಲಾಗಿದೆ. ಕ್ಲಾಕ್ ಟವರ್‌ನ ಮೇಲ್ಭಾಗದ ನಾಲ್ಕೂ ಕಡೆಯೂ ವೃತ್ತಾಕಾರದ ರೋಮನ್ ಅಂಕಿಯ 2.5 ಡಯಾಮೀಟರ್‌ನ ಬೃಹತ್ ಗಡಿಯಾರಗಳನ್ನು ಅಳವಡಿಸಲಾಗುತ್ತಿದ್ದು, ಈ ಗಡಿಯಾರಗಳು ದೆಹಲಿಯ ಮೆಡಿವೆಲ್ ಇಂಡಿಯಾ ಕಂಪನಿಯಲ್ಲಿ ತಯಾರಾಗುತ್ತಿವೆ. ಈ ಗಡಿಯಾರಗಳು ಸಮಯವನ್ನು ತೋರಿಸುವುದರ ಜೊತೆಗೆ ಪ್ರತಿ ಗಂಟೆಗೊಮ್ಮೆ ಸುಮಾರು 1 ಕಿ.ಮೀ.ನಷ್ಟು ದೂರ ಕೇಳಿಸುವಂತೆ ಹಿತಕಾರಿ ನಾದವುಳ್ಳ ಗಂಟೆ ಬಾರಿಸಲಿದೆ. ಅಲ್ಲದೇ ರಾತ್ರಿ ವೇಳೆಯೂ ಕೂಡ ಸಮಯವನ್ನು ನೋಡಲು ಅನುವಾಗುವಂತೆ ಗಡಿಯಾರಕ್ಕೆ ರೇಡಿಯಂ ಅಳವಡಿಸಲಾಗುತ್ತಿದೆ.

ಈ ಕ್ಲಾಕ್ ಟವರ್‌ಗೆ ಮತ್ತಷ್ಟು ಮೆರಗು ನೀಡಲು ಮುಂದಾಗಿರುವ ನಗರ ಪಾಲಿಕೆ, ಇದರ ಸುತ್ತಲೂ ವಿದ್ಯುದ್ದೀಪಗಳನ್ನು ಅಳವಡಿಸಲು ಮುಂದಾಗಿದೆ. ಈ ವಿದ್ಯುದ್ದೀಪಗಳು ಸ್ವಯಂ ಚಾಲಿತವಾಗಿ ಆನ್ ಅಂಡ್ ಆಫ್ ಆಗುತ್ತವೆ. ಪ್ರಕೃತಿಯ ವ್ಯತಿರಿಕ್ತ ಪರಿಣಾಮದಿಂದ ಕ್ಲಾಕ್ ಟವರ್ ಅನ್ನು ರಕ್ಷಿಸುವ ಸಲುವಾಗಿ ಅದರ ಮೇಲೆ ಸಿಡಿಲು ನಿರೋಧಕವನ್ನು ಅಳವಡಿಸಲಾಗುತ್ತಿದೆ. ಮೈಸೂರಿನಲ್ಲಿ ರಾಜರ ಕಾಲದಲ್ಲಿ ಟೌನ್ ಹಾಲ್ ಮುಂಭಾಗ ನಿರ್ಮಿಸಿದ್ದ ದೊಡ್ಡ ಗಡಿಯಾರವೂ ಕೂಡ ಈ ಹಿಂದೆ ಪ್ರತಿ ಗಂಟೆಗೊಮ್ಮೆ ಗಂಟೆ ಬಾರಿಸುತ್ತಿತ್ತು. ಆದರೆ ನಿರ್ವಹಣೆ ಕೊರತೆಯಿಂದಾಗಿ ಈ ಗಡಿಯಾರದ ಶಬ್ದ ನಿಂತಿದೆ. ಶತಮಾನದ ಇತಿಹಾಸವುಳ್ಳ ಎರಡು ಗಡಿಯಾರಗಳ ಜೊತೆ ಉದಯಗಿರಿಯಲ್ಲಿ ಮತ್ತೊಂದು ಆಕರ್ಷಕ ದೊಡ್ಡ ಗಡಿಯಾರ ನಿರ್ಮಾಣವಾಗುತ್ತಿರುವುದು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ.

ಮೈಸೂರಿನಲ್ಲೇ 'ಅಯೋಧ್ಯೆ ಶ್ರೀರಾಮಮಂದಿರ' ದರ್ಶನ ಭಾಗ್ಯ!

● ಮಂದಿರದ ಪ್ರತಿಕೃತಿ ದರ್ಶಿಸುವ ಸೌಭಾಗ್ಯ ● ನ.17ರಿಂದ ಶ್ರೀ ಸಪ್ತಮಾತೃಕಾ ಚೌಡೇಶ್ವರಿ ದೇವಸ್ಥಾನದಲ್ಲಿ ದರ್ಶನಕ್ಕೆ ಲಭ್ಯ



ಮೈಸೂರು ಒಂಟಿಕೊಪ್ಪಲಿನ ಶ್ರೀ ಚಂದ್ರಮೌಳೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ ಅಯೋಧ್ಯೆ ರಾಮಮಂದಿರದ ಪ್ರತಿಕೃತಿಯೊಂದಿಗೆ ವಿನಯ್ ರಾಮ್.

ಮೈಸೂರು, ನ.15 (ಪಿಎಂ)– ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ನಿರ್ಮಾಣಗೊಂಡು ಶೀಘ್ರದಲ್ಲಿ ಉದ್ಘಾಟನೆಯಾಗಲಿರುವ 'ಭವ್ಯ ಶ್ರೀರಾಮ ಮಂದಿರ'ದ ದರ್ಶನವನ್ನು ಇದೀಗ ಮೈಸೂರಿನಲ್ಲೇ ಪಡೆಯಬಹುದು!

ಹೌದು, ಅಯೋಧ್ಯೆಯ ಶ್ರೀರಾಮ ಮಂದಿರದ ಪ್ರತಿಕೃತಿ (ಮಾದರಿ) ದರ್ಶನ ಸದ್ಯ ಮೈಸೂರಿನಲ್ಲೇ ದೊರೆಯಲಿದೆ. ಶ್ರೀರಾಮನ ಮೇರು ವ್ಯಕ್ತಿತ್ವ ಮತ್ತು ತತ್ವಾದರ್ಶಗಳನ್ನು ಪರಿಚಯಿಸುವ ಮಹದುದ್ದೇಶದೊಂದಿಗೆ ಬೆಂಗಳೂರು ನಿವಾಸಿ ವಿನಯ್ ರಾಮ್ 'ಶ್ರೀರಾಮ ಮಂದಿರ'ದ ಮಾದರಿಯನ್ನು ಸ್ವತಃ ಸಿದ್ಧಪಡಿಸಿ, 108 ಸ್ಥಳಗಳಲ್ಲಿ ಪ್ರದರ್ಶನಕ್ಕಿಡುವ ಸಂಕಲ್ಪದೊಂದಿಗೆ ಪಯಣ ಆರಂಭಿಸಿ, ಇದೀಗ ಮೈಸೂರಿಗೆ ಆಗಮಿಸಿದ್ದಾರೆ.

ಮೂಲತಃ ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನ ಬಿದರೆಯವರಾದ ಇವರು, 15X15 ಅಡಿ (ಉದ್ದ ಮತ್ತು ಅಗಲ) ವಿಸ್ತೀರ್ಣ ಮತ್ತು 10 ಅಡಿ ಎತ್ತರದ ಈ ಪ್ರತಿಕೃತಿ ಸಿದ್ಧಪಡಿಸಿದ್ದಾರೆ. ಮಂದಿರದ ಮಾದರಿಯನ್ನು ಸ್ವತಃ ತಾವೇ ಸಿದ್ಧಪಡಿಸಿದ್ದಾಗಿ ತಿಳಿಸಿರುವ ಅವರು, ಎರಡೂವರೆ ತಿಂಗಳ ಕಾಲ ಇದನ್ನು ಸಿದ್ಧಪಡಿಸುವ ಕಾಯಕದಲ್ಲಿ ತೊಡಗಿಸಿಕೊಂಡಿದ್ದೆ ಎನ್ನುತ್ತಾರೆ.

ಮಾದರಿಯು ಎಲ್ಲವನ್ನೂ ಥರ್ಮೋಕೋಲ್‌ನಲ್ಲಿ ಮಾಡಿರುವ ಹಿನ್ನೆಲೆಯಲ್ಲಿ ಇದನ್ನು ಸೂಕ್ಷ್ಮವಾಗಿ ನಿರ್ವಹಿಸಬೇಕು. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕೊಂಡೊಯ್ದು ಜೋಡಣೆ ಮಾಡುವಾಗ ಅತ್ಯಂತ ಜಾಗರೂಕತೆಯಿಂದ ನಿರ್ವಹಣೆ ಮಾಡಬೇಕು ಎನ್ನುವ ಅವರು, ಇದರ ಕರ್ತೃ ನಾನೇ.

ಥರ್ಮೋಕೋಲ್ ಜೊತೆಗೆ ಫೆವಿಕಾಲ್, ಗುಂಡು ಪಿನ್ನು ಹಾಗೂ ಬಣ್ಣ ಬಳಸಿ ಈ ಮಾದರಿ ಸಿದ್ಧಪಡಿಸಲಾಗಿದೆ ಎಂದು ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಒಂಟಿಕೊಪ್ಪಲಿನ ಶ್ರೀ ಚಂದ್ರಮೌಳೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ ಶ್ರೀರಾಮ ಮಂದಿರ ಪ್ರದರ್ಶನಕ್ಕಿಟ್ಟಿದ್ದ ಅವರನ್ನು ಬುಧವಾರ 'ಮೈಸೂರು ಮಿತ್ರ' ಭೇಟಿ ಮಾಡಿತು. ಈ ದೇವಸ್ಥಾನದ ಆವರಣದಲ್ಲಿ ಇಂದು ಮಂದಿರದ ಪ್ರದರ್ಶನದ ಕೊನೆ ದಿನವಾಗಿದೆ.

ನಾಳೆ ಮೈಸೂರಿನ ವಿಜಯನಗರದ 3ನೇ ಹಂತದಲ್ಲಿರುವ ಶ್ರೀ ಸಪ್ತಮಾತೃಕಾ ಚೌಡೇಶ್ವರಿ ದೇವಸ್ಥಾನದ (ಪ್ರದರ್ಶನದ 44ನೇ ಸ್ಥಳ) ಆವರಣದಲ್ಲಿ ಮಂದಿರದ ಮಾದರಿಯ ಜೋಡಣೆ ಮಾಡಲಿದ್ದೇನೆ. ಇಲ್ಲಿ ಶುಕ್ರವಾರದಿಂದ (ನ.17ರಿಂದ) ವಾರ ಕಾಲ ಮಂದಿರದ ಮಾದರಿ ದರ್ಶನ ಪಡೆಯಬಹುದು. ದೇವಸ್ಥಾನ ತೆರೆದಿರುವ ಸಮಯದಲ್ಲಿ ಸಾರ್ವಜನಿಕರು ಭೇಟಿ ನೀಡಿ ವೀಕ್ಷಣೆ ಮಾಡಬಹುದು ಎಂದು ಹೇಳಿದರು.

ಸನಾತನ ಧರ್ಮದ ಬಗ್ಗೆ ಅರಿವು ಮೂಡಿಸುವ ಜೊತೆಗೆ ಶ್ರೀರಾಮನ ಮೇರು ವ್ಯಕ್ತಿತ್ವ ಮತ್ತು ಆದರ್ಶ ಪರಿಚಯ ಮಾಡಿಸಬೇಕೆಂಬ ಉದ್ದೇಶದಿಂದ ಮಂದಿರದ ಪ್ರದರ್ಶನದ ಪಯಣ ನಡೆಸುತ್ತಿದ್ದೇನೆ. ಎಷ್ಟೋ ವಯೋವೃದ್ಧರು ಅಯೋಧ್ಯೆಗೆ ಭೇಟಿ ನೀಡುವುದು ಕಷ್ಟವಾಗಬಹುದು. ಹಾಗಾಗಿ ಅಂತಹವರು ಇದನ್ನಾದರೂ ನೋಡಿದರೆ ಅವರ ಮನಸ್ಸಿಗೆ ಒಂದಿಷ್ಟು ಸಮಾಧಾನ ದೊರೆಯಬಹುದು. ಅದೇ ರೀತಿ ಅದೆಷ್ಟೋ ಮಕ್ಕಳು, ಯುವ ಜನರು, ಮಧ್ಯ ವಯಸ್ಕರು ಇದನ್ನು ನೋಡಿ ಅಯೋಧ್ಯೆಯ ರಾಮ ಮಂದಿರಕ್ಕೆ ಭೇಟಿ ನೀಡಬೇಕೆಂಬ ಸಂಕಲ್ಪ ಮಾಡಲೂಬಹುದು. ಈ ಎಲ್ಲಾ ಉದ್ದೇಶದ ಹಿನ್ನೆಲೆಯಲ್ಲಿ ಈ ಮಾದರಿ ನಿರ್ಮಿಸಿದ್ದೇನೆ ಎನ್ನುತ್ತಾರೆ ವಿನಯ್ ರಾಮ್.

ಶಾಲಾ–ಕಾಲೇಜು, ಆಶ್ರಮ, ಅಪಾರ್ಟ್‌ಮೆಂಟ್, ಆಧ್ಯಾತ್ಮಿಕ ಕೇಂದ್ರ ಸೇರಿದಂತೆ ಆಹ್ವಾನ ದೊರೆಯುವ ಸ್ಥಳಗಳಲ್ಲಿ ಪ್ರದರ್ಶಿಸಲು ಸಂಕಲ್ಪ ಮಾಡಿದ್ದೇನೆ. ಬೆಂಗಳೂರಿನಲ್ಲಿ 36 ಸ್ಥಳಗಳಲ್ಲಿ ಪ್ರದರ್ಶನಕ್ಕಿಡಲಾಗಿತ್ತು. ಅಂಜನಾದ್ರಿ ಬೆಟ್ಟ ಮತ್ತು ಮಂತ್ರಾಲಯದ ರಾಯರ ಮಠದಲ್ಲೂ ಪ್ರದರ್ಶನಕ್ಕೆ ಇಡಲಾಗಿತ್ತು. ಮೈಸೂರಿನಲ್ಲಿ ಈಗಾಗಲೇ ಮೂರು ಸ್ಥಳಗಳಲ್ಲಿ ಪ್ರದರ್ಶನ ಮಾಡಲಾಗಿದೆ. ಇಂದಿಗೆ ಒಟ್ಟು 43 ಸ್ಥಳಗಳಲ್ಲಿ ಪ್ರದರ್ಶನ ಪೂರ್ಣಗೊಳ್ಳುತ್ತಿದೆ. ಇದು ನನ್ನ ಸ್ವಯಂಪ್ರೇರಿತ ದೇವರ ಕಾರ್ಯವಾಗಿದ್ದು, ಯಾವುದೇ ಸಂಘ–ಸಂಸ್ಥೆಗಳಿಗೆ ಸಂಬಂಧಿಸಿದ್ದಲ್ಲ ಎಂದರು.

ಮಂದಿರದ ಮಾದರಿಯಲ್ಲಿ ಸುಮಾರು 40 ಬಿಡಿ ಭಾಗಗಳು ಇದ್ದು, ಅವುಗಳನ್ನು ಕಳಚಿ ಒಂದು ಜಾಗದಿಂದ ಮತ್ತೊಂದು ಜಾಗದಲ್ಲಿ ಜೋಡಣೆ ಮಾಡುತ್ತಿದ್ದೇನೆ. ಬೆಂಗಳೂರಿನ ಖಾಸಗಿ ಶಾಲೆಯ ಆವರಣದಲ್ಲಿ ಈ ಮಾದರಿಯನ್ನು ಎರಡೂವರೆ ತಿಂಗಳ ಅವಧಿಯಲ್ಲಿ ತಯಾರು ಮಾಡಿದ್ದೇನೆ. 2022ರ ಡಿ.31ರಿಂದ ಪ್ರದರ್ಶನದ ಪಯಣ ಪ್ರಾರಂಭ ಮಾಡಿದ್ದೇನೆ. ಗೂಗಲ್ ಮೂಲಕ ಮೂಲ ಶ್ರೀ ರಾಮಮಂದಿರ ವಿನ್ಯಾಸ ಅಧ್ಯಯನ ಮಾಡಿ ಮಾದರಿ ಸಿದ್ಧಪಡಿಸಿದೆ. ದೈವ ಪ್ರೇರಣೆಯಿಂದ ಈ ಕಾಯಕ ಕೈಗೆತ್ತಿಕೊಂಡಿದ್ದೇನೆ ಎಂದರು.

ಒಂದೊಂದು ಸ್ಥಳದಲ್ಲಿ ಒಂದು ವಾರ ಕಾಲ ಪ್ರದರ್ಶನಕ್ಕೆ ಇಡುತ್ತಿದ್ದೇನೆ. ಸನಾತನ ಧರ್ಮ, ರಾಮನ ಆದರ್ಶದ ಬಗ್ಗೆಯೂ ವೀಕ್ಷಣೆಗೆ ಬರುವ ಭಕ್ತರಿಗೆ ವಿವರಣೆ ನೀಡುತ್ತಿದ್ದೇನೆ. ಮುಂದಿನ ಬುಧವಾರದವರೆಗೆ ವಿಜಯನಗರದ ಶ್ರೀ ಸಪ್ತಮಾತೃಕಾ ದೇವಾಲಯದಲ್ಲಿ ರಾಮ ಮಂದಿರದ ಮಾದರಿಯ ದರ್ಶನ ಪಡೆಯಲು ಅವಕಾಶವಿದೆ ಎಂದು ವಿವರಿಸಿದರು.

ನಕ್ಕರೆ ಅದೇ ಸ್ವರ್ಗ

ಆತ : "ನನ್ನ ಹೆಂಡತಿ ಎಸೆದ ಪಾತ್ರೆಯಿಂದ ಗಾಯ ಆಯ್ತು ಕಣಯ್ಯ"
ಈತ : "ಆಕೆ ಪಾತ್ರೆ ಎಸೆದದ್ದೇಕೆ?"
ಆತ : "ಅದು ಅವಳ ಮಾಮೂಲು ಕೆಲಸ.
ಆದರೆ ಅದು ಇಂದು ಗುರಿಮುಟ್ಟಿತಯ್ಯ!"

ಮೈಸೂರು ಮಿತ್ರ
ಗುರುವಾರ, 16 ನವೆಂಬರ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನಮ್ಮ ವಿಚಾರ ಮತ್ತು ಸಮಯ ಕಳೆಯುವ ರೀತಿಯ ಮೇಲೆ ನಮ್ಮ ಚರಿತ್ರೆ ರೂಪುಗೊಳ್ಳುತ್ತದೆ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಗ್ನಿ ಇದ್ದರೆ ಯಜ್ಞ ಕಾರ್ಯ, ವಿಘ್ನೇಶ್ವರನಿದ್ದರೆ ಶುಭ ಕಾರ್ಯ

ನಿಮ್ಮ ಪತ್ರಗಳು

ನೊಂದ ಕಲಾವಿದರಿಗೆ ಆಸರೆ ಮೈಸೂರು ಜಯರಾಂ

ಮಾನ್ಯರೇ,


ಮೈಸೂರು ಜಯರಾಂ

ಡಾ.ರಾಜ್‌ಕುಮಾರ್ ಕಲಾ ಸೇವಾ ಟ್ರಸ್ಟ್ ವತಿಯಿಂದ ಇತ್ತೀಚೆಗೆ ಮೈಸೂರಿನ ಕಲಾಮಂದಿರದಲ್ಲಿ ಆಶಕ್ತ ಹಾಗೂ ನೊಂದ ಕಲಾವಿದರ ಸಹಾಯಾರ್ಥವಾಗಿ 'ಹಂಸಗೀತೆ' ಎಂಬ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ನಾದಬ್ರಹ್ಮ ಹಂಸಲೇಖರವರು ರಚಿಸಿ, ಸಂಗೀತ ನಿರ್ದೇಶಿಸಿರುವ ಗೀತೆಗಳನ್ನು ನೈಜ ವಾದ್ಯಗೋಷ್ಠಿಯೊಂದಿಗೆ ಪ್ರಸ್ತುತಪಡಿಸಲಾಯಿತು. ಇದರ ಮೂಲ ಉದ್ದೇಶ ಎಷ್ಟೋ ಜನ ಹಿರಿಯ ಕಲಾವಿದರು ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದು, ಅವರಿಗೆ ವೈದ್ಯಕೀಯ ವೆಚ್ಚವನ್ನೂ ಭರಿಸಲು ಸಾಧ್ಯವಾಗದ ಸ್ಥಿತಿಯಲ್ಲಿರುವುದನ್ನು ಕಂಡ ಟ್ರಸ್ಟ್‌ನ ಅಧ್ಯಕ್ಷ ಮೈಸೂರು ಜಯರಾಂ ಇವರ ಪೈಕಿ ಕೆಲವರನ್ನು ಗುರುತಿಸಿ ಅವರಿಗೆ ಸಹಾಯಹಸ್ತವನ್ನು ಚಾಚಿರುವುದು ನಿಜಕ್ಕೂ ಮಾನವೀಯತೆಯ ಸಂದೇಶ ಸಾರುತ್ತದೆ. ಬ್ರೈನ್ ಟ್ಯೂಮರ್ ಕಾಯಿಲೆಯಿಂದ ಬಳಲುತ್ತಿರುವ ಹಿರಿಯ ಕಲಾವಿದ ಕೇಶವಮೂರ್ತಿ ಹಾಗೂ ಕ್ಯಾನ್ಸರ್ ರೋಗಕ್ಕೆ ತುತ್ತಾಗಿ ಬಳಲುತ್ತಿರುವ ಗೋವಿಂದರಾಜು ಅವರಿಗೆ ತಲಾ 30,000 ರೂ. ಗಳನ್ನು ಸ್ಥಳದಲ್ಲೇ ವಿತರಿಸಲಾಯಿತು.

ಮತ್ತೋರ್ವ ಕಲಾವಿದ ಆಲ್ಬರ್ಟ್ ಅವರಿಗೆ ಔಷಧೋಪಚಾರ ವೈದ್ಯಕೀಯ ಖರ್ಚುಗಳಿಗಾಗಿ 5,000 ರೂ.ಗಳನ್ನು ನೀಡಲಾಯಿತು. ಜಯರಾಂ ಅಪೇಕ್ಷೆಗಿಂತ ಕಡಿಮೆ ಸಂಖ್ಯೆಯಲ್ಲಿ ಟಿಕೆಟ್‌ಗಳು ಮಾರಾಟವಾಗಿ, ಸಭಾಂಗಣದ ಕಾಲು ಭಾಗದಷ್ಟು ಮಂದಿ ಮಾತ್ರ ಪ್ರೇಕ್ಷಕರು ಆಗಮಿಸಿದ್ದರು. ಆದರೂ ಜಯರಾಂ ಧೃತಿಗೆಡದೇ ತಮ್ಮ ಕೈಯಿಂದ ಹಣವನ್ನು ಇವರುಗಳಿಗೆ ಅರ್ಪಿಸಿದ್ದಾರೆ. ಮೈಸೂರು ಜಯರಾಂರವರಿಗೆ ಕಲಾವಿದರ ಮೇಲೆ ಇರುವ ಅತ್ಯಂತ ಪ್ರೀತಿ ಮತ್ತು ಗೌರವ ಹಾಗೂ ನೊಂದ ಕಲಾವಿದರಿಗೆ ಮರುಗುವ ವ್ಯಕ್ತಿತ್ವವೇ ಸಾಕ್ಷಿ. ಅವರಿಂದ ಈ ರೀತಿ ನೊಂದ ಕಲಾವಿದರುಗಳಿಗೆ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚು ಸೇವೆ ಮಾಡುವ ಶಕ್ತಿ ಭಗವಂತ ಕಲ್ಪಿಸಲಿ.

– ವಿದುಷಿ ಸರ್ವಮಂಗಳ, ರಾಮಕೃಷ್ಣನಗರ, ಮೈಸೂರು

ಬರ : ಅಧ್ಯಯನಕ್ಕೆ ಸೀಮಿತವಾಗದಿರಲಿ

ಮಾನ್ಯರೆ,

ಈ ವರ್ಷ ಮುಂಗಾರು ಮಳೆ ಕೈ ಕೊಟ್ಟ ಕಾರಣ ರೈತಾಪಿ ವರ್ಗ ಸಂಕಷ್ಟಕ್ಕೆ ಸಿಲುಕಿದೆ. ರಾಜ್ಯದಲ್ಲಿ ಬರ ಪರಿಸ್ಥಿತಿ ಎದುರಾಗಿದ್ದು, ಇದರ ಅಧ್ಯಯನಕ್ಕಾಗಿ ಆಡಳಿತ ಪಕ್ಷಕ್ಕಿಂತ ವಿರೋಧ ಪಕ್ಷಗಳೇ ಮುಂದೆ ನಿಂತು ನಾ ಮುಂದು ತಾ ಮುಂದು ಎಂದು ಪ್ರಚಾರ ಪಡೆಯುತ್ತಿವೆ.

ಚಾಮರಾಜನಗರ ಜಿಲ್ಲೆಯಲ್ಲಿ ಯತ್ನಾಳ್, ಮೈಸೂರಿನಲ್ಲಿ ಜೆಡಿಎಸ್ ಶಾಸಕ ಜಿ.ಟಿ ದೇವೇಗೌಡರು ಸೇರಿದಂತೆ ಬರ ಅಧ್ಯಯನಕ್ಕಾಗಿ ಹಲವು ಮುಖಂಡರು ಫೀಲ್ಡ್‌ಗೆ ಇಳಿದಿದ್ದಾರೆ. ಈ ಕಾರ್ಯ ಮೆಚ್ಚುವಂತಹದ್ದು ಹೌದು. ಆದರೆ ಪ್ರಚಾರಕ್ಕಾಗಿ ಮತ ಗಳಿಕೆಗಾಗಿ ಮಾಡಿದರೆ ಫಲವಿಲ್ಲ. ಮಾಜಿ ಸಿಎಂ ಕುಮಾರಸ್ವಾಮಿಯವರು ಈಗಾಗಲೇ ಮೈತ್ರಿ ವಿಷಯವನ್ನು ಬಿಜೆಪಿ ಜೊತೆ ಕುದುರಿಸಿದ್ದಾರೆ. ಆದ್ದರಿಂದ ಕೇಂದ್ರ ನಾಯಕರಿಗೆ ಬರ ಪರಿಸ್ಥಿತಿ ಮನವರಿಕೆ ಮಾಡಿಕೊಟ್ಟು ಹಣ ಬಿಡುಗಡೆ ಮಾಡಿಸಿದರೆ ಈ ಅಧ್ಯಯನಕ್ಕೆ ಒಂದು ಅರ್ಥ ಬರುತ್ತದೆ. ನೆಪ ಮಾತ್ರಕ್ಕೆ ಅಧ್ಯಯನ ಮಾಡಿದರೆ ಪ್ರಯೋಜನವಿಲ್ಲ. ಜೊತೆಗೆ ರಾಜ್ಯ ಸರ್ಕಾರದ ಕಿವಿ ಹಿಂಡುವ ಕೆಲಸ ಮಾಡಿದರೆ ರೈತರಿಗೆ ಬರ ಪರಿಹಾರ ಕೊಡಿಸಬಹುದು. ಇದರಿಂದ ಸಂಕಷ್ಟದಲ್ಲಿರುವ ರೈತರು ಸ್ವಲ್ಪ ಮಟ್ಟಿಗೆ ಚೇತರಿಸಿಕೊಳ್ಳಬಹುದು.

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ

ಮಹದೇಶ್ವರ ಬೆಟ್ಟದಲ್ಲಿ ಹೆಚ್ಚುವರಿ ಕೌಂಟರ್ ಬೇಕು

ಮಾನ್ಯರೆ,

ಜಾನಪದ ತವರೂರಾದ ಚಾಮರಾಜನಗರ ಜಿಲ್ಲೆಯಲ್ಲಿ ಬರುವ ಶ್ರೀ ಮಹದೇಶ್ವರ ಬೆಟ್ಟಕ್ಕೆ ರಾಜ್ಯದ ಭಕ್ತರು ಸೇರಿದಂತೆ ಅಂತರರಾಜ್ಯದಿಂದಲೂ ಸಹ ಆಗಮಿಸುತ್ತಾರೆ. ಬೆಟ್ಟಕ್ಕೆ ಹಬ್ಬ, ಅಮಾವಾಸ್ಯೆ, ಹುಣ್ಣಿಮೆ, ಇತರ ವಿಶೇಷ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುವುದರಿಂದ ವಿಶೇಷ ಪೂಜೆ ಸಲ್ಲಿಸುವುದಕ್ಕೆ ಟಿಕೆಟ್ ಪಡೆಯಲು ಸೂಚಿಸಿರುವ ಆಡಳಿತ ಮಂಡಳಿಯ ಸೂಚನೆಯಂತೆ ಮಹಿಳೆಯರು, ಪುರುಷರು, ಹಿರಿಯ ನಾಗರಿಕರು, ವೃದ್ಧರು ಪ್ರತ್ಯೇಕ ಸಾಲುಗಳಿಲ್ಲದೆ ಒಂದೇ ಸರತಿ ಸಾಲಿನಲ್ಲಿ ನಿಲ್ಲುವಂತಾಗಿದೆ. ಇದರಿಂದಾಗಿ ಒಬ್ಬರ ಮೇಲೆ ಮತ್ತೊಬ್ಬರು ಬೀಳುವ ಸ್ಥಿತಿ ನಿರ್ಮಾಣವಾಗಿ ಕಿರಿಕಿರಿ ಜೊತೆಗೆ ಗಲಾಟೆಗಳಾಗುತ್ತಿವೆ. ಟಿಕೆಟ್ ಕೌಂಟರ್‌ಗಳು ಒಂದಕ್ಕಿಂತ ಹೆಚ್ಚಿದ್ದರೂ ಒಂದೇ ಕೌಂಟರ್ ತೆರೆದಿರುವುದರಿಂದ ಸಮಸ್ಯೆ ಹೆಚ್ಚಾಗಿದೆ. ಕೂಡಲೇ ಸಂಬಂಧಪಟ್ಟ ಮುಜರಾಯಿ ಇಲಾಖೆಯ ಅಧಿಕಾರಿಗಳು ಪ್ರತ್ಯೇಕ ಟಿಕೆಟ್ ಕೌಂಟರ್ ತೆರೆದು ಅನುಕೂಲ ಮಾಡಿಕೊಡುವ ಮೂಲಕ ಸಮಸ್ಯೆಗೆ ನಾಂದಿಯಾಡಲು ಮುಂದಾಗಬೇಕು. –ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ಇನ್ನೂ ಪೂರ್ಣಗೊಳ್ಳದ ಡಾ. ಅಂಬೇಡ್ಕರ್ ಭವನ

ಮಾನ್ಯರೆ,

ಸರ್ಕಾರಗಳು, ಸಚಿವರು ಬಂದು ಹೋದರು. ಆದರೆ ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್‌ರವರ ಭವನಕ್ಕೆ ಮಾತ್ರ ಮುಕ್ತಿ ಸಿಕ್ಕಿಲ್ಲ.

ಈ ಶೀರ್ಷಿಕೆ ಅಡಿಯಲ್ಲಿ 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ದಿನಾಂಕ 8.11.2023 ರಂದು ಪ್ರಕಟವಾದ ಲೇಖನ ಸಮಯೋಚಿತವಾಗಿ ಮೂಡಿಬಂದಿದೆ. ಹೆಚ್ಚು ಅರ್ಥಪೂರ್ಣವಾಗಿದೆ. ಎಲ್ಲಾ ಅಧಿಕಾರಿಗಳ, ಜನಪ್ರತಿನಿಧಿಗಳ ಹಾಗೂ ಜನತೆಯ ಕಣ್ಣು ತೆರೆಸಿದೆ. ಈ ಮೂಲಕ 'ಮೈಸೂರು ಮಿತ್ರ' ಬೆಳಕು ಚೆಲ್ಲಿದೆ. ಒಂದು ನಿಯೋಜಿತ ಭವನ ನಿರ್ಮಾಣ ಮಾಡೋಕೆ ಒಂದು ದಶಕ ಬೇಕೆ?

ಒಂದು ಕಾಮಗಾರಿಗೆ ಚಾಲನೆ ನೀಡಿದರೆ ಅದು ಇಂತಿಷ್ಟು ಅವಧಿಯಲ್ಲಿ ಪೂರ್ಣಗೊಳಿಸಬೇಕೆಂಬ ನೀತಿ ಸಂಹಿತೆ ಇಲ್ಲವೆ? ಹೆಚ್ಚು ಹಣ ಖರ್ಚು ಮಾಡಿದರೆ ಅದರಿಂದ ಜನತೆಗೆ ಉಪಯೋಗಕ್ಕೆ ಬರೋದು ಬೇಡವೇ? ಉಪಯೋಗಕ್ಕೆ ಬರಬಾರದೆಂಬ ನಿಲುವು ಇವರಿಗೆ ಇದ್ದಂತೆ ಕಾಣುತ್ತದೆ. ಈ ವಿಳಂಬ ಧೋರಣೆ ಇನ್ನಾದರೂ ನೀಗಬೇಕಾಗಿದೆ. ಆದಷ್ಟು ಬೇಗ ಈ ಭವನದ ಕಾಮಗಾರಿ ಪೂರ್ಣಗೊಂಡು ಇದರ ಉದ್ಘಾಟನೆ ನೆರವೇರಲಿ. ಇದರಿಂದ ಮೈಸೂರು ಜನತೆಗೆ ಉಪಯೋಗವಾಗಲಿ. ಕರ್ನಾಟಕ ಕಲಾಮಂದಿರ ಮೈಸೂರಿಗೆ ಕಳಸಪ್ರಾಯವಾಗಿದೆ. ಅದೇ ರೀತಿ ಡಾ. ಅಂಬೇಡ್ಕರ್ ಭವನವೂ ಉಪಯೋಗಕ್ಕೆ ಸಜ್ಜುಗೊಳ್ಳಬೇಕಿದೆ. ಸಂಬಂಧಪಟ್ಟವರು ಈ ಕಾರ್ಯದಲ್ಲಿ ಭಾಗಿಯಾಗಬೇಕೆಂದು ಕೋರುತ್ತೇನೆ.

ದೆಹಲಿಯಲ್ಲಿ ಹೊಸದಾದ ಭವ್ಯವಾದ ಸಂಸತ್ ಭವನ, ಜಿ20 ರಾಷ್ಟ್ರಗಳ ಸಮಾವೇಶಕ್ಕೆ ಸಿದ್ಧಗೊಂಡ ನೂತನ ಭವನಗಳು ಎಷ್ಟು ಬೇಗ ನಿರ್ಮಾಣಗೊಂಡವು. ಈ ಭವನಕ್ಕೆ ಯಾಕೆ ಈ ರೀತಿಯ ತಾತ್ಸಾರ, ವಿಳಂಬ ಧೋರಣೆ.

–ಆರ್. ರಂಗಸ್ವಾಮಿ ಶಾಂತ, ಅಶೋಕಪುರಂ, ಮೈಸೂರು.



ಆರ್.ಪಿ.ಜಗದೀಶ್
ಹಿರಿಯ ಪತ್ರಕರ್ತರು
ಮೊ: 9845048051

ಸಕಾಲಿಕ

ವಿಜಯೇಂದ್ರ ಅಪ್ಪನಿಗೆ ತಕ್ಕ ಮಗ





ಕಳೆದ ಆರೇಳು ತಿಂಗಳುಗಳಿಂದ ಗಜಗರ್ಭದಂತಾಗಿದ್ದ ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನಕ್ಕೆ ಯುವ ನಾಯಕ ಬಿ.ವೈ.ವಿಜಯೇಂದ್ರ ಅವರಿಗೆ ಹೈಕಮಾಂಡ್ ಪಟ್ಟಾಭಿಷೇಕ ಮಾಡುವ ಮೂಲಕ ಟೀಕಾಕಾರರ ಬಾಯಿಗೆ ಬೀಗ ಹಾಕಿದೆ.

ಪಟ್ಟು ಬಿಡದ ತ್ರಿವಿಕ್ರಮನಂತೆ ರಾಜ್ಯದ ಪ್ರತಿಷ್ಠಿತ ನಾಯಕರಾದ ಬಿ.ಎಸ್.ಯಡಿಯೂರಪ್ಪನವರು ಕೊನೆಗೂ ಮಗ ವಿಜಯೇಂದ್ರ ಅವರ ಬಗ್ಗೆ ಹೈಕಮಾಂಡ್ ಮಣಿಯುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಬಿ.ಎಸ್.ಯಡಿಯೂರಪ್ಪ ಅಂದರೂ ಒಂದೇ ಬಿಜೆಪಿ ಅಂದರೂ ಅದೇ. ಎರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಕೆಟ್ಟ ಮೇಲೆ ಬುದ್ಧಿ ಬಂತು ಎಂಬಂತೆ ಹೈಕಮಾಂಡ್ ನೈಜ ಸ್ಥಿತಿ ಅರಿತು ವಿಜಯೇಂದ್ರ ಅವರಿಗೆ ಮಣೆ ಹಾಕಿದ್ದು ಬಹುಜನ ಆಕಾಂಕ್ಷಿಗಳ ನಿರೀಕ್ಷೆಯನ್ನು ತಲೆಕೆಳಗು ಮಾಡಿದಂತೆ.

ರಾಜ್ಯದಲ್ಲೀಗ ಬಿಜೆಪಿಗೆ ಬಿ.ಎಸ್.ಯಡಿಯೂರಪ್ಪ ಹಾಗೂ ವಿಜಯೇಂದ್ರ, ಕಾಂಗ್ರೆಸ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಜೆಡಿಎಸ್‌ಗೆ ಅದರ ಪಿತಾಮಹ ಹೆಚ್.ಡಿ.ದೇವೇಗೌಡರು ಹಾಗೂ ಪುತ್ರ ಹೆಚ್.ಡಿ.ಕುಮಾರಸ್ವಾಮಿ ಸಾರಥಿಗಳು. ಉಳಿದವರು ಅಪ್ರಸ್ತುತ ಎಂದರ್ಥವಲ್ಲ. ಅವರೆಲ್ಲಾ ಸೇನಾಪತಿಗಳು.

ಸೌಮ್ಯ ಸ್ವಭಾವ, ನಗುಮುಖ, ಗಂಭೀರ, ರಾಜಕೀಯ ಚಾಣಾಕ್ಷ ಎಂದೇ ಯುವಕರಲ್ಲಿ ಜನಪ್ರಿಯವಾಗಿರುವ ವಿಜಯೇಂದ್ರ, ಹಿರಿಯರ ಮನ ಗೆಲ್ಲುವಲ್ಲೂ ಯಶಸ್ವಿಯಾಗಿದ್ದಾರೆ. ಇದಕ್ಕೆ ಸಾಕ್ಷಿ ಎಂಬಂತೆ ಪಕ್ಷದ ವರಿಷ್ಠರಾದ ಪ್ರಧಾನಿ ನರೇಂದ್ರ ಮೋದಿ, ಪಕ್ಷದ ಅಧ್ಯಕ್ಷ ನಡ್ಡಾ ಹಾಗೂ ಅಮಿತ್ ಶಾ ಅವರಂತಹ ತ್ರಿಮೂರ್ತಿಗಳಿಗೂ ನೀಲಗಣ್ಣಿನ ಹುಡುಗ ಆಗಿದ್ದಾರೆ.

ರಾಜ್ಯದ ಮೂಲೆ ಮೂಲೆಯಲ್ಲೂ ಸುತ್ತಾಡಿ ಪಕ್ಷ ಸಂಘಟನೆ ಮಾಡಿದ ಅಪ್ಪನ ಹೋರಾಟದ ಹಾದಿಯನ್ನು ಕಣ್ಣಾರೆ ಕಾಣುತ್ತಿದ್ದರು ವಿಜಯೇಂದ್ರರು. ಪಕ್ಷದ ಅಧ್ಯಕ್ಷ, ವಿರೋಧ ಪಕ್ಷದ ನಾಯಕ ಮೂರು ಬಾರಿ ಮುಖ್ಯಮಂತ್ರಿ ಆಗಿದ್ದ ಅಪ್ಪ ಯಡಿಯೂರಪ್ಪನವರ ನಡೆ–ನುಡಿ, ರಾಜಕೀಯವನ್ನು ಮೈಗೂಡಿಸಿಕೊಂಡು ಬೆಳೆದವರು. ರಾಜಕೀಯ ಇವರಿಗೆ ರಕ್ತಗತವಾಗಿ ಬಂದಿದೆ ಎಂದರೆ ಅತಿಶಯೋಕ್ತಿಯಲ್ಲ.

> "ರಾಜ್ಯ ರಾಜಕೀಯದಲ್ಲಿ ಹೋರಾಟಗಾರ ಛಲದಂಕ ಮಲ್ಲ ಎನಿಸಿರುವ ಬಿ.ಎಸ್.ಯಡಿಯೂರಪ್ಪ ಅವರ ರಾಜಕೀಯದ ಏಳು–ಬೀಳು, ಕೋರ್ಟು–ಕಚೇರಿ ಅಲೆದಾಟ, ಬೆಂಗಳೂರು–ದೆಹಲಿ ಹಾರಾಟ ಇವನ್ನೆಲ್ಲಾ ಕಂಡು ತಂದೆಗೆ ಬೆನ್ನೆಲುಬಾಗಿ ನಿಂತು ತಂದೆಗೆ ತಕ್ಕ ಮಗ ಎನಿಸಿಕೊಂಡಿದ್ದರು. ಅವರ ಈ ಶ್ರಮ ಅಧ್ಯಕ್ಷ ಸ್ಥಾನದ ಮೂಲಕ ಪ್ರತಿಫಲ ನೀಡಿದೆ. ಚಿಕ್ಕ ವಯಸ್ಸಿನಲ್ಲಿಯೇ ದೊಡ್ಡ ಹುದ್ದೆಗೆ ಲಗ್ಗೆ ಹಾಕಿದ ಚಾಣಾಕ್ಷ.

ರಾಜ್ಯ ರಾಜಕೀಯದಲ್ಲಿ ಹೋರಾಟಗಾರ ಛಲದಂಕ ಮಲ್ಲ ಎನಿಸಿರುವ ಬಿ.ಎಸ್.ಯಡಿಯೂರಪ್ಪ ಅವರ ರಾಜಕೀಯದ ಏಳು–ಬೀಳು, ಕೋರ್ಟು–ಕಚೇರಿ ಅಲೆದಾಟ, ಬೆಂಗಳೂರು–ದೆಹಲಿ ಹಾರಾಟ ಇವನ್ನೆಲ್ಲಾ ಕಂಡು ತಂದೆಗೆ ಬೆನ್ನೆಲುಬಾಗಿ ನಿಂತು ತಂದೆಗೆ ತಕ್ಕ ಮಗ ಎನಿಸಿಕೊಂಡಿದ್ದರು. ಅವರ ಈ ಶ್ರಮ ಅಧ್ಯಕ್ಷ ಸ್ಥಾನದ ಮೂಲಕ ಪ್ರತಿಫಲ ನೀಡಿದೆ. ಚಿಕ್ಕ ವಯಸ್ಸಿನಲ್ಲಿಯೇ ದೊಡ್ಡ ಹುದ್ದೆಗೆ ಲಗ್ಗೆ ಹಾಕಿದ ಚಾಣಾಕ್ಷ. ಶಿವಮೊಗ್ಗ ಲೋಕಸಭಾ ಕ್ಷೇತ್ರದ ಹಾಲಿ ಸಂಸದ ಬಿ.ವೈ. ರಾಘವೇಂದ್ರ ಹಾಗೂ ವಿಜಯೇಂದ್ರ ಅವರುಗಳು ಬಿ.ಎಸ್. ಯಡಿಯೂರಪ್ಪ ಅವರ ಎರಡು ಕಣ್ಣುಗಳಿದ್ದಂತೆ.

ಬಿ.ಎಸ್.ಯಡಿಯೂರಪ್ಪ ಆಡಳಿತದ ಸಮಯದಲ್ಲಿ ವಿಜಯೇಂದ್ರ ಹಸ್ತಕ್ಷೇಪದ ಬಗ್ಗೆ ಹಲವು ಮಂದಿ ನಾನಾ ರೀತಿಯ ಟೀಕೆ–ಟಿಪ್ಪಣಿ ಮಾಡಿದರು. ಇದಕ್ಕೆಲ್ಲಾ ಕುಗ್ಗದೆ–ಜಗ್ಗದೆ, ತಂದೆಯ ಬಲಗೈ ಭಂಟನಂತೆ ತೆರೆಮರೆಯಲ್ಲಿ ಅಪ್ಪನ ಭಾರ ಹೊತ್ತ ವಿಜಯೇಂದ್ರರಿಗೆ ದೊರೆತದ್ದು ದೊಡ್ಡ ಬಳುವಳಿಯೇ. ಪಕ್ಷ ಅಧಿಕಾರದಲ್ಲಿದ್ದಾಗ ಬಂದ ಉಪ ಚುನಾವಣೆಗಳಲ್ಲಿ ಎದುರಾಳಿಗಳನ್ನು ಸೋಲಿಸಿ ತಮ್ಮ ಪಕ್ಷದ ಅಭ್ಯರ್ಥಿಗಳನ್ನು ಜಯಶೀಲರನ್ನಾಗಿ ಮಾಡಿದ ಕೀರ್ತಿ ವಿಜಯೇಂದ್ರ ಅವರಿಗೆ ಸೇರಿದ್ದು. ಇದೇ ಅವರಿಗೆ ವರದಾನವಾಗಿ ಈ ಉನ್ನತ ಹುದ್ದೆಗೇರಿಸಿದೆ.

ಕರ್ನಾಟಕದಲ್ಲಿ ಬಿ.ಎಸ್.ಯಡಿಯೂರಪ್ಪ ಎಷ್ಟು ಪ್ರಭಾವಿ ನಾಯಕ ಎಂಬುದು ವರಿಷ್ಠರಿಗೆ ಈಗ ಅರ್ಥವಾದಂತಿದೆ. 'ಕೆಟ್ಟ ಮೇಲೆ ಬುದ್ಧಿ ಬಂತು' ಎಂಬಂತೆ ಯಡಿಯೂರಪ್ಪನವರಿಗೆ ಮಾಡಿದ ಅನ್ಯಾಯವನ್ನು ಸರಿಪಡಿಸುವಂತೆ ಮಗ ವಿಜಯೇಂದ್ರರಿಗೆ ಪಟ್ಟ ಕಟ್ಟಿದೆ. ಅದಕ್ಕೆ ವಿಜಯೇಂದ್ರರ ಸಂಘಟನಾ ಚಾತುರ್ಯ ಬಹುಮಟ್ಟಿಗೆ ಕಾರಣ. ಹೈಕಮಾಂಡ್ ದೃಷ್ಟಿಯಲ್ಲಿ ಈಗ ಕರ್ನಾಟಕದಲ್ಲಿ ಯುವ ನಾಯಕ ವಿಜಯೇಂದ್ರ ಪಕ್ಷಕ್ಕೆ ಹೊಸ ಬೆಳಕು ಎನ್ನುವ ಆಶಾಭಾವನೆ ಹುಟ್ಟಿಸಿದೆ.

ಬಿ.ಎಸ್.ಯಡಿಯೂರಪ್ಪ ಆಡಳಿತವಿದ್ದಾಗ ಮಗನಿಂದ ಅಪ್ಪ ಹಾಳಾದ ಎಂದು ಮೂಗು ಮುರಿಯುತ್ತಿದ್ದವರ ಬಾಯಿಗೆ ಬೀಗ ಬಿದ್ದಂತಾಗಿದೆ. ಜೊತೆಗೆ ಕಾಂಗ್ರೆಸ್‌ನ ಆಟಗಳಿಗೆಲ್ಲಾ ಕಡಿವಾಣ ಬೀಳಲಿದೆ. ರಾಜ್ಯ ಬಿಜೆಪಿಯಲ್ಲೀಗ ಹೊಸ ಅಲೆ ಏಳಲಿದೆ. ಜೊತೆಗೆ ಚಿಕ್ಕ ವಯಸ್ಸಿಗೆ ದೊಡ್ಡ ಹುದ್ದೆ ದೊರೆತ ಬಗ್ಗೆ ಪಕ್ಷದಲ್ಲಿಯೇ ಅಪಸ್ವರ ಎತ್ತಿದೆ. ಇದೆಲ್ಲಾ ಕ್ಷಣಿಕ. ಅಲ್ಲದೆ ಹೈಕಮಾಂಡ್ ತೂಗುಕತ್ತಿ ಇದ್ದೇ ಇದೆ.

ಹಿಂದೆ ಹೇಗೆ 'ಇಂಡಿಯಾ ಎಂದರೆ ಇಂದಿರಾ' ಎನ್ನುವಂತಿತ್ತೋ ಹಾಗೆ ಮತ್ತೊಮ್ಮೆ ಮೋದಿ ಎಂಬ ಅಲೆ ಎದ್ದಿದೆ. ಇದಕ್ಕೆ ಧ್ವನಿಯಾಗಿ ವಿಜಯೇಂದ್ರ ಸಾರಥ್ಯದ ಬಿರುಗಾಳಿ ಏಳಿಸುವ ಸುಳಿವು ಕಾಣುತ್ತಿದೆ.

ಆಂಧ್ರದಲ್ಲಿ ಯುವ ಮುಖ್ಯಮಂತ್ರಿ ಜಗನ್ ಮೋಹನ್ ರೆಡ್ಡಿ ಹಾಗೂ ತಮಿಳುನಾಡಿನಲ್ಲಿ ಸ್ಟಾಲಿನ್ ಇರುವಂತೆ ಕರ್ನಾಟಕದಲ್ಲಿ ಯುವ ನಾಯಕತ್ವ ಬೆಳೆದರೆ ಆಶ್ಚರ್ಯವಿಲ್ಲ. ವಿಜಯೇಂದ್ರ ಅಪ್ಪನ ಕರ್ಮಭೂಮಿ ಶಿಕಾರಿಪುರ ಕ್ಷೇತ್ರದಲ್ಲಿ ಅಪ್ಪನ ಪ್ರತಿನಿಧಿಯಾಗಿ ಮೊದಲ ಬಾರಿಗೆ ವಿಧಾನಸಭಾ ಚುನಾವಣೆಯಲ್ಲಿ ನಿಂತು ಜಯಶಾಲಿಯಾದರು. ಆದರೆ ಮೊದಲ ಬಾರಿ ಶಾಸಕರಾಗಿ ಇನ್ನೂ 6–7 ತಿಂಗಳು ಕಳೆದಿಲ್ಲ. ಆಗಲೇ ದೊಡ್ಡ ಪಕ್ಷದ ಅಧ್ಯಕ್ಷ ಗಾದಿಗೆ ಏರಿದ್ದು ಅವರ ಅದೃಷ್ಟ ಎನ್ನಲೇಬೇಕು.

ಅಪ್ಪನ ಮಾರ್ಗದರ್ಶನದಲ್ಲಿ ಹಾಗೂ ಬಿಜೆಪಿ ವರಿಷ್ಠರ ನಿರೀಕ್ಷೆಗೆ ತಕ್ಕಂತೆ ಲೋಕಸಭಾ ಚುನಾವಣೆ ಹೊಣೆ ವಿಜಯೇಂದ್ರರ ಮೇಲೆ ಬಿದ್ದಿದೆ. ಅಲ್ಲದೆ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ದಿನದಿಂದ ತಾವು ಬಿ.ಎಸ್. ಯಡಿಯೂರಪ್ಪ ಮಗನೆಂಬ ಲೇಬಲ್ ಕಿತ್ತುಹಾಕಬೇಕು. ಮಾತು ಮಾತಿಗೆ ಅವರ ಬಾಲಂಗೋಚಿಯಂತೆ ನಡೆದುಕೊಳ್ಳಬಾರದು. ಅವರು ಪಕ್ಷದ ಅತ್ಯಂತ ಹಾಗೂ ಪ್ರಭಾವಶಾಲಿ ನಾಯಕ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಅವರ ಮಾರ್ಗದರ್ಶನ ಪಡೆಯಬೇಕೇ ಹೊರತು ಅವರೇ ಅಧ್ಯಕ್ಷರು ಎಂಬ ಭಾವನೆ ಬರಬಾರದು.

ಜೊತೆಗೆ ಪಕ್ಷದ ಹಿರಿಯ, ಕಿರಿಯ, ಅತೃಪ್ತರ ವಿವಿಧ ಗುಂಪುಗಳ ಸದಸ್ಯರು, ಇವರನ್ನೆಲ್ಲಾ ಒಂದುಗೂಡಿಸಿಕೊಂಡು ಸಮನ್ವಯ ಸಾಧಿಸುವ ದೊಡ್ಡ ಜವಾಬ್ದಾರಿ ಇವರ ಮೇಲಿದೆ. ಜತೆಗೆ ಮುಂಬರುವ ಲೋಕಸಭಾ ಚುನಾವಣಾ ಫಲಿತಾಂಶ ತಮ್ಮ ಮುಂದಿನ ಭವಿಷ್ಯವನ್ನು ನಿರ್ಧರಿಸುತ್ತದೆ ಎಂಬ ಎಚ್ಚರವಿರಲಿ. ನಿಮಗೆ ಒಲಿದಿರುವ ಅಧ್ಯಕ್ಷಗಾದಿ 'ಅಗ್ನಿ ಪರೀಕ್ಷೆ'ಯೇ ಹೊರತು ಹೂವಿನ ಹಾಸಿಗೆಯಲ್ಲ. ಎಚ್ಚರಿಕೆಯಿಂದ ಹೆಜ್ಜೆ ಇಡಬೇಕು ಎಂಬುದನ್ನು ಮರೆಯಬಾರದು.

ಜನರ ಅಭಿಲಾಷೆಗೆ ತಕ್ಕಂತೆ ನಡೆದು ತಮ್ಮ ನಾಯಕತ್ವ ಪ್ರದರ್ಶಿಸಲು ಒಳ್ಳೆ ಅವಕಾಶ.

ಗುತ್ತಿಗೆದಾರ ಷರತ್ತು ಉಲ್ಲಂಘಿಸಿ 51.64 ಲಕ್ಷ ರೂ. ಬಾಕಿ ಉಳಿಸಿಕೊಂಡಿದ್ದರೂ

ಹೆಬ್ಬಾಳು ನಾಲ್ವಡಿ ಕೃಷ್ಣರಾಜ ಒಡೆಯರ್ ಕನ್ವೆನ್ಷನ್ ಹಾಲ್ ಗುತ್ತಿಗೆ ಅವಧಿ ವಿಸ್ತರಿಸಿದ ಮುಡಾ

- ಕೋವಿಡ್ ನೆಪದಲ್ಲಿ 2 ವರ್ಷದ 72 ಲಕ್ಷ ರೂ. ಗುತ್ತಿಗೆ ಹಣ ಮನ್ನಾ
- ಗುತ್ತಿಗೆದಾರನಿಗೆ ಅನುಕೂಲ ಮಾಡಿಕೊಡಲು ಅವಧಿ ವಿಸ್ತರಣೆ

■ ಎಸ್.ಟಿ.ರವಿಕುಮಾರ್

ಮೈಸೂರು, ನ. 15– ಮದುವೆಯೂ ಸೇರಿದಂತೆ ನಾನಾ ಶುಭ ಸಮಾರಂಭಗಳಿಗೆ ಸಾರ್ವಜನಿಕರಿಗೆ ಕೈಗೆಟಕುವ ದರದಲ್ಲಿ ಬಾಡಿಗೆಗೆ ನೀಡಲೆಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ವು 5.5 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಕನ್ವೆನ್ಷನ್ ಹಾಲ್ ಗುತ್ತಿಗೆ ಪಡೆದಿರುವ ಪ್ರಭಾವಿ ವ್ಯಕ್ತಿ, 51,64,285 ರೂ. ಗುತ್ತಿಗೆ ಬಾಕಿ ಹಣ ಪಾವತಿಸದೇ ಇದ್ದರೂ ಇನ್ನು ಎರಡು ವರ್ಷ ಕಾಲ ಗುತ್ತಿಗೆ ನವೀಕರಿಸಲು ಮುಡಾ ಸಮ್ಮತಿಸಿ, ಮತ್ತೊಂದು ವಿವಾದಕ್ಕೆ ಕಾರಣವಾಗಿದೆ.

ಹೆಬ್ಬಾಳು 2ನೇ ಹಂತದ ಡಾ. ಅಂಬರೀಶ್ ರಸ್ತೆಯಲ್ಲಿರುವ ಕಲ್ಯಾಣ ಮಂಟಪದ ಗುತ್ತಿಗೆ ಮೊತ್ತ 40,85,378 ರೂ., ಬಡ್ಡಿ 10,78,907 ರೂ. ಸೇರಿ ಒಟ್ಟು 51,64,285 ರೂ. ಬಾಕಿ ಪಾವತಿಸುವಂತೆ ಮುಡಾ ವಲಯ–4ರ ವಲಯಾಧಿಕಾರಿ ಸಂಪತ್‌ಕುಮಾರ್ ಹಲವು ಬಾರಿ ನೋಟಿಸ್ ಜಾರಿ ಮಾಡಿದ್ದರೂ ಗುತ್ತಿಗೆದಾರ, ಬೆಂಗಳೂರಿನ ಬಿಟಿಎಂ ಲೇಔಟ್‌ನ ಮೆ॥ ಸರ್ಕಾರ್ ಕನ್‌ಸ್ಟ್ರಕ್ಷನ್ಸ್ ಮಾಲೀಕ ಎಸ್.ಸಿದ್ದರಾಜಪ್ಪ ಯಾವುದಕ್ಕೂ ಕೇರ್ ಮಾಡಿಲ್ಲ.

ಮಾಹಿತಿ ಹಕ್ಕು ಅಧಿನಿಯಮದಡಿ ಆರ್‌ಟಿಐ ಕಾರ್ಯಕರ್ತ ಬಿ.ಎನ್. ನಾಗೇಂದ್ರ ಈ ಬಗ್ಗೆ ಮಾಹಿತಿ ಪಡೆದು, ಸಾರ್ವಜನಿಕರ ತೆರಿಗೆ ಹಣದಿಂದ ನಿರ್ಮಿಸಿದ ಕಲ್ಯಾಣ ಮಂಟಪ ಹೇಗೆ ಖಾಸಗಿ ವ್ಯಕ್ತಿಗೆ ಲಾಭ ತಂದುಕೊಡುತ್ತಿದೆ ಎಂಬುದನ್ನು ಬೆಳಕಿಗೆ ತಂದಿದ್ದಾರೆ.

ಕಲ್ಯಾಣ ಮಂಟಪವನ್ನು 'ಎಕ್ಸ್‌ಪ್ರೆಷನ್ ಆಫ್ ಇಂಟರೆಸ್ಟ್' ಆಧಾರದ ಮೇಲೆ 2019ರ ಮಾರ್ಚ್ 7ರಂದು ಬೆಂಗಳೂರಿನ ಎಸ್. ಸಿದ್ದರಾಜಪ್ಪ ಎಂಬುವರಿಗೆ ವಾರ್ಷಿಕ 36 ಲಕ್ಷ ರೂ. ಗುತ್ತಿಗೆ ಮೊತ್ತ ನಿಗದಿ ಮಾಡಿ, 3 ವರ್ಷದ ಅವಧಿಗೆ ವಹಿಸಲಾಗಿತ್ತು. ಮೊದಲ ಒಂದು ವರ್ಷ ಬಾಡಿಗೆ ಮೊತ್ತವನ್ನಷ್ಟೇ ಪಾವತಿಸಿದ ಗುತ್ತಿಗೆದಾರ, 2020–21 ಮತ್ತು 2021–22ನೇ ಸಾಲಿನ ಗುತ್ತಿಗೆ ಹಣವನ್ನು ಕೋವಿಡ್–19ನಿಂದಾಗಿ ನಷ್ಟಕ್ಕೀಡಾಗಿದ್ದು, ಈ ಅವಧಿಯ ಗುತ್ತಿಗೆ ಹಣ ಮನ್ನಾ ಮಾಡಿ, ಗುತ್ತಿಗೆ ಅವಧಿಯನ್ನು ಮತ್ತೆ 5 ವರ್ಷಗಳಿಗೆ ವಿಸ್ತರಿಸಬೇಕೆಂದು ಕೋರಿದ್ದರು.


ಹೆಬ್ಬಾಳು ಎರಡನೇ ಹಂತದ ನಾಲ್ವಡಿ ಕೃಷ್ಣರಾಜ ಒಡೆಯರ್ ಕನ್ವೆನ್ಷನ್ ಹಾಲ್.

ಆ ವಿಷಯ ಸಂಬಂಧ 2022ರ ಜೂನ್ 22ರಂದು ನಡೆದ ಮುಡಾ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ 2020–21 ಮತ್ತು 2021–22ನೇ ಸಾಲಿನ ಗುತ್ತಿಗೆ ಮೊತ್ತದಲ್ಲಿ ವಿನಾಯಿತಿ ನೀಡಿ, ಗುತ್ತಿಗೆ ಅವಧಿಯನ್ನು ಮತ್ತೆ 2 ವರ್ಷ ವಿಸ್ತರಿಸಲು ತೀರ್ಮಾನಿಸಲಾಗಿದೆ. ಕೋವಿಡ್ ನೆಪದಲ್ಲಿ 2 ವರ್ಷಗಳ 72 ಲಕ್ಷ ರೂ. ಗುತ್ತಿಗೆ ಹಣ ಮನ್ನಾ ಮಾಡಿದ್ದಾಗ್ಯೂ ಗುತ್ತಿಗೆದಾರ ಇನ್ನೂ 51,64,285 ರೂ. ಗುತ್ತಿಗೆ ಬಾಕಿ ಮೊತ್ತ ಪಾವತಿಸದೇ ಸಬೂಬು ಹೇಳುತ್ತಿರುವುದರಿಂದ ನವೆಂಬರ್ 6ರಂದು ವಲಯಾಧಿಕಾರಿ ಸಂಪತ್‌ಕುಮಾರ್, ಸಿದ್ದರಾಜಪ್ಪ ಅವರಿಗೆ ತಿಳುವಳಿಕೆ ಪತ್ರ ಬರೆದು, ಬಾಕಿ ಮೊತ್ತ ಪಾವತಿಸದಿದ್ದರೆ ಗುತ್ತಿಗೆ ಕರಾರು ಪತ್ರದ ಕ್ರಮ ಸಂಖ್ಯೆ 6ರ ಷರತ್ತಿನಂತೆ ಕಲ್ಯಾಣ ಮಂಟಪ ಕಟ್ಟಡವನ್ನು ಕೂಡಲೇ ಪ್ರಾಧಿಕಾರದ ವಶಕ್ಕೆ ಪಡೆಯಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ. ಒಂದು ಮದುವೆ ಕಾರ್ಯಕ್ಕೆ 1,50,000 ರೂ. ಬಾಡಿಗೆ ನಿಗದಿಪಡಿಸಿದ್ದು, ವರ್ಷಕ್ಕೆ ಸರಾಸರಿ 1 ಕೋಟಿ 80 ಲಕ್ಷ ರೂ. ಬಾಡಿಗೆ ಬರಬಹುದು ಎಂದು ಅಂದಾಜಿಸಲಾಗಿದ್ದು, ಮುಡಾಗೆ 36 ಲಕ್ಷ ರೂ. ಪಾವತಿಸಿದರೂ, 1 ಕೋಟಿ 44 ಲಕ್ಷ ರೂ. ಆದಾಯವಿದೆ. ಅದರಲ್ಲಿ ವಿದ್ಯುತ್, ನೀರಿನ ಬಿಲ್, ಕಂದಾಯ, ನಿರ್ವಹಣೆ ವೆಚ್ಚ ಕಳೆದರೂ 1.2 ಕೋಟಿ ರೂ. ಉಳಿಯಬಹುದು. ನಿಗದಿತ ಗುತ್ತಿಗೆ ಹಣವನ್ನೂ ಸರಿಯಾಗಿ ಪಾವತಿಸದ ಗುತ್ತಿಗೆದಾರ, ಶುಭ ಸಮಾರಂಭವಿಲ್ಲದ ಋತುಮಾನಗಳಲ್ಲಿ ನಾನಾ ರೀತಿಯ ಮಾರಾಟ ಮೇಳಗಳಿಗೆ ಕಲ್ಯಾಣ ಮಂಟಪವನ್ನು ನಿಯಮ ಉಲ್ಲಂಘಿಸಿ, ಬಾಡಿಗೆಗೆ ನೀಡುತ್ತಿದ್ದರೂ, ಮುಡಾ ಅಧಿಕಾರಿಗಳು ಕ್ರಮ ಕೈಗೊಳ್ಳದಿರುವುದು ಅಚ್ಚರಿ ಮೂಡಿಸಿದೆ.

ಗುತ್ತಿಗೆ ಕರಾರು ಷರತ್ತು ಉಲ್ಲಂಘಿಸಿರುವುದರಿಂದ ಕಲ್ಯಾಣ ಮಂಟಪವನ್ನು ವಶಕ್ಕೆ ಪಡೆದು ಮುಡಾದಿಂದಲೇ ನಿರ್ವಹಣೆ ಮಾಡಿದಲ್ಲಿ ಕಡಿಮೆ ದರದಲ್ಲಿ ಸಾರ್ವಜನಿಕರಿಗೆ ಬಾಡಿಗೆಗೆ ನೀಡಿದರೂ ಪೂರ್ಣ ಪ್ರಮಾಣದ ಆದಾಯ ಬರುವುದಲ್ಲದೇ, ಜನರಿಗೂ ಅನುಕೂಲವಾಗಬಹುದು.

ಮೈಸೂರು ನಗರದ ಕೆಲವೆಡೆ 2 ದಿನ ನೀರು ಪೂರೈಕೆಯಲ್ಲಿ ವ್ಯತ್ಯಯ

ಮೈಸೂರು, ನ.15–ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಹೊಂಗಳ್ಳಿ 2ನೇ ಹಾಗೂ 3ನೇ ಹಂತ ಯಂತ್ರಾಗಾರಕ್ಕೆ ವಿದ್ಯುತ್ ಸರಬರಾಜು ಮಾಡುವ ಬೆಳಗೊಳ ಸಬ್ ಸ್ಟೇಷನ್‌ನಲ್ಲಿ ಕೆಪಿಟಿಸಿಎಲ್‌ನಿಂದ ತ್ರೈಮಾಸಿಕ ಕಾರ್ಯ ನಿರ್ವಹಣೆಯನ್ನು ಹಮ್ಮಿಕೊಂಡಿರುವುದರಿಂದ ನ.17 ಮತ್ತು 18ರಂದು ನಗರದ ಕೆಲವೆಡೆ ಪೂರ್ಣ ಪ್ರಮಾಣದಲ್ಲಿ ನೀರು ಸರಬರಾಜು ಇರುವುದಿಲ್ಲ. ಸಿಎಸ್‌ಆರ್ ಮತ್ತು ಹೆಚ್‌ಎಲ್‌ಆರ್ ಪ್ರಾಂತ್ಯಗಳಿಗೆ, ವಾರ್ಡ್ ನಂ.1 ರಿಂದ 7, ವಾರ್ಡ್ ನಂ.20, 23, 38, ವಾರ್ಡ್ ನಂ.42 ರಿಂದ 45, ವಾರ್ಡ್ ನಂ.47ಕ್ಕೆ ಸಂಬಂಧಪಟ್ಟ ಡಿಎಂಎ ಪ್ರದೇಶಗಳಾದ ಹೆಬ್ಬಾಳು, ಕುಂಬಾರಕೊಪ್ಪಲು, ಮಂಚೇಗೌಡನಕೊಪ್ಪಲು, ಕೆ.ಜಿ.ಕೊಪ್ಪಲ್, ಮೇಟಗಳ್ಳಿ, ಲೋಕನಾಯಕನಗರ, ಬೃಂದಾವನ ಬಡಾವಣೆ, ಒಂಟಿಕೊಪ್ಪಲು, ಪಡುವಾರಹಳ್ಳಿ (ವಿನಾಯಕನಗರ), ಮಂಡಿ ಮೊಹಲ್ಲಾ, ಲಷ್ಕರ್ ಮೊಹಲ್ಲಾ, ಶಾರದಾದೇವಿನಗರ, ಸರಸ್ವತಿಪುರಂ, ಬೋಗಾದಿ, ವಿಜಯನಗರ 1, 3ನೇ ಹಂತ, ಗೋಕುಲಂ 1, 2, 3ನೇ ಹಂತ ಹಾಗೂ ಹೊರ ವಲಯಗಳಾದ ಆರ್‌ಎಂಪಿ, ಬಿಇಎಂಎಲ್, ಯಾದವಗಿರಿ, ಬನ್ನಿಮಂಟಪ ಎ,ಬಿ,ಸಿ ಲೇಔಟ್, ಈರನಗೆರೆ, ಸಿದ್ದಿಖಿನಗರ, ಶಿವರಾತ್ರೀಶ್ವರ ನಗರ, ತಿಲಕ್‌ನಗರ, ಬಡೇಮಕಾನ್, ಹಲೀಂನಗರ, ದೇವರಾಜ ಮೊಹಲ್ಲಾ ಭಾಗಶಃ, ಎನ್.ಆರ್.ಮೊಹಲ್ಲಾ ಭಾಗಶಃ ಪ್ರದೇಶಗಳು, ನಜರ್‌ಬಾದ್ ಮೊಹಲ್ಲಾ, ವಿದ್ಯಾರಣ್ಯಪುರಂ, ಕೃಷ್ಣಮೂರ್ತಿಪುರಂ, ಜನತಾನಗರ, ಕೆಹೆಚ್‌ಬಿ ಕಾಲೋನಿ, ಹೂಟಗಳ್ಳಿ, ವಿಜಯನಗರ 2ನೇ ಹಂತ ಹಾಗೂ ಇತ್ಯಾದಿ ಪ್ರದೇಶಗಳಲ್ಲಿ ನೀರು ಸರಬರಾಜು ವ್ಯತ್ಯಯವಾಗಲಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಅತ್ಯಾಚಾರ ಪ್ರಕರಣ: ಮುರುಘಾ ಶರಣರ ಬಿಡುಗಡೆಗೆ ಆದೇಶ



ಚಿತ್ರದುರ್ಗ: ಪೋಕ್ಸೊ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಮುರುಘಾ ಮಠದ ಪೀಠಾಧಿಪತಿ ಶಿವಮೂರ್ತಿ ಮುರುಘಾ ಶರಣರನ್ನು ಜೈಲಿನಿಂದ ಬಿಡುಗಡೆ ಮಾಡಲು ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಬುಧವಾರ ಆದೇಶಿಸಿದೆ.

ಇದೇ ವೇಳೆ, 2ನೇ ಪೋಕ್ಸೊ ಪ್ರಕರಣದಲ್ಲಿ ಶರಣರ ವಿರುದ್ಧ ಹೊರಡಿಸಿದ ಬಾಡಿ ವಾರೆಂಟ್ ಅನ್ನು ನ್ಯಾಯಾಂಗ ಬಂಧನವಾಗಿ ಪರಿವರ್ತನೆ ಮಾಡಬೇಕು ಎಂಬ ಸರ್ಕಾರಿ ವಕೀಲರ ಅರ್ಜಿ ವಿಚಾರಣೆಯನ್ನು ನ್ಯಾಯಾಲಯ ನ.16ಕ್ಕೆ ಮುಂದೂಡಿದೆ. ಇಬ್ಬರು ಪ್ರೌಢಶಾಲಾ ವಿದ್ಯಾರ್ಥಿನಿಯರ ಮೇಲಿನ ಲೈಂಗಿಕ ದೌರ್ಜನ್ಯ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ದಾಖಲಾದ ಪ್ರಕರಣದಲ್ಲಿ ಶಿವಮೂರ್ತಿ ಮುರುಘಾ ಶರಣರಿಗೆ ಹೈಕೋರ್ಟ್ ಈಚೆಗೆ ಜಾಮೀನು ನೀಡಿತ್ತು. ಜಾಮೀನು ಷರತ್ತು ಪೂರೈಸಲು ಶರಣರ ಪರ ವಕೀಲರು ಸೆಷನ್ಸ್ ನ್ಯಾಯಾಲಯದ ಮೊರೆ ಹೋಗಿದ್ದರು. ಇಬ್ಬರು ವ್ಯಕ್ತಿಗಳ ಭದ್ರತಾ ಖಾತರಿ ಪರಿಶೀಲಿಸಿದ ನ್ಯಾಯಾಧೀಶೆ ಬಿ.ಕೆ.ಕೋಮಲಾ ಬಿಡುಗಡೆ ಆದೇಶ ನೀಡಿದರು. 2ನೇ ಪೋಕ್ಸೊ ಪ್ರಕರಣದಲ್ಲಿ ಶರಣರ ವಿರುದ್ಧ ಹೊರಡಿಸಿದ ಬಾಡಿ ವಾರೆಂಟ್ ಅನ್ನು ನ್ಯಾಯಾಂಗ ಬಂಧನದ ಆದೇಶವಾಗಿ ಪರಿವರ್ತಿಸುವಂತೆ ಪ್ರಾಸಿಕ್ಯೂಷನ್ ಪರವಾಗಿ ಸರ್ಕಾರಿ ವಕೀಲರು ಮಾಡಿದ ಮನವಿಯನ್ನು ಪುರಸ್ಕರಿಸಿದ ನ್ಯಾಯಾಲಯಕ್ಕೆ ಶರಣರ ಪರ ವಕೀಲರು ಬುಧವಾರ ತಕರಾರು ಸಲ್ಲಿಸಿದರು. ವಾದ– ಪ್ರತಿವಾದಕ್ಕೆ ನ.16ಕ್ಕೆ ವಿಚಾರಣೆ ನಿಗದಿಪಡಿಸಿ ಕಲಾಪವನ್ನು ಮುಂದೂಡಲಾಯಿತು. 'ಶಿವಮೂರ್ತಿ ಮುರುಘಾ ಶರಣರಿಗೆ ಮೊದಲ ಪ್ರಕರಣದಲ್ಲಿ ನ್ಯಾಯಾಲಯ ಬಿಡುಗಡೆಗೆ ಆದೇಶ ನೀಡಿದೆ. ಆದೇಶ ಪ್ರತಿ ಸಂಜೆ ವೇಳೆಗೆ ಕಾರಾಗೃಹ ತಲುಪಿದರೆ ಬುಧವಾರವೇ ಬಿಡುಗಡೆ ಆಗಲಿದ್ದಾರೆ. ಎರಡನೇ ಪ್ರಕರಣದಲ್ಲಿ ಶರಣರನ್ನು ಬಂಧನ ಮಾಡದೇ ಇರುವುದರಿಂದ ಕಾರಾಗೃಹದಲ್ಲಿ ಇಟ್ಟುಕೊಳ್ಳುವಂತಿಲ್ಲ' ಎಂದು ಶರಣರ ಪರ ವಕೀಲ ಸಂದೀಪ್ ಪಾಟೀಲ್ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯೆ ನೀಡಿದರು. ಸರ್ಕಾರಿ ವಕೀಲ ಜಗದೀಶ್ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿ, 2ನೇ ಪೋಕ್ಸೊ ಪ್ರಕರಣದ ಬಾಡಿ ವಾರೆಂಟ್ ವಿಚಾರಣೆ ನ್ಯಾಯಾಲಯಲ್ಲಿರುವುದರಿಂದ ಬಿಡುಗಡೆ ಸಾಧ್ಯವಿಲ್ಲ. ಜೈಲಿನಿಂದ ಬಿಡುಗಡೆ ಮಾಡದಂತೆ ನಾವೂ ಕಾರಾಗೃಹಕ್ಕೆ ಮನವಿ ಮಾಡಿ ಕೊಳ್ಳಲಿದ್ದೇವೆ. ಅವರನ್ನು ಕಾರಾಗೃಹದಲ್ಲಿ ಇಡಲು ಕಾನೂನಿನಲ್ಲಿ ಅವಕಾಶ ಇದೆ ಎಂದು ಅಭಿಪ್ರಾಯಪಟ್ಟರು.



ಕರ್ನಾಟಕ ರಾಜ್ಯೋತ್ಸವದ ಪ್ರಶಸ್ತಿ ಪುರಸ್ಕೃತರಾದ ಮೈಸೂರಿನ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಅವರನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್, ಸಮಿತಿ ಸದಸ್ಯರಾದ ಶಂಕರ ನಾರಾಯಣ, ಕೆ.ಆರ್.ಸತ್ಯನಾರಾಯಣ, ಜಿ.ಆರ್.ಮೋಹನ್, ಕೆ.ಆರ್.ಯೋಗಾ ನರಸಿಂಹನ್, ಎಸ್.ರವಿಕುಮಾರ್, ವಿಪ್ರ ಮಹಿಳಾ ಸಂಗಮದ ಅಧ್ಯಕ್ಷೆ ಡಾ.ಲಕ್ಷ್ಮೀ ದೇವಿ, ಅರ್‌ಬಿಐ ಬ್ರಾಹ್ಮಣ ಸಂಘದ ಅಧ್ಯಕ್ಷ ಎಸ್.ದಿನೇಶ್ ಅಭಿನಂದಿಸಿದರು.



ರೋಟರಿ ಮೈಸೂರು ಉತ್ತರ ವಿಶ್ವ ಮಧುಮೇಹ ದಿನದ ಅಂಗವಾಗಿ ಐಶ್ವರ್ಯ ಆಸ್ಪತ್ರೆ ಸಹಯೋಗದಲ್ಲಿ ವಾಕಥಾನ್ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಅಧ್ಯಕ್ಷ ಎಂ.ಕೆ.ಶ್ರೀಧರ್, ಕಾರ್ಯದರ್ಶಿ ರಾಜು, ಸಹಾಯಕ ಗವರ್ನರ್ ಎಂ.ಕೆ.ನಂಜಯ್ಯ ಇತರರಿದ್ದರು.

ಉಡುಪಿ: ಒಂದೇ ಕುಟುಂಬದ ನಾಲ್ವರ ಹತ್ಯೆ ಆರೋಪಿಯಿಂದ ತಪ್ಪೊಪ್ಪಿಗೆ



ಪ್ರವೀಣ್ ಚೌಗಲೆ

ಉಡುಪಿ: ಉಡುಪಿಯಲ್ಲಿ ನಾಲ್ವರ ಬರ್ಬರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಪ್ರವೀಣ್ ಚೌಗಲೆ ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿದ್ದಾನೆ ಎಂದು ಉಡುಪಿ ಎಸ್‌ಪಿ ಡಾ.ಕೆ. ಅರುಣ್ ಹೇಳಿಕೆ ನೀಡಿದ್ದಾರೆ.

ಪ್ರಕರಣದ ಕುರಿತು ಉಡುಪಿಯಲ್ಲಿ ಸುದ್ದಿಗೋಷ್ಠಿ ಕರೆದು ಮಾತನಾಡಿದ ಅವರು, ಪ್ರವೀಣ್ ಚೌಗಲೆ ಕೊಲೆಯನ್ನು ಒಪ್ಪಿಕೊಂಡಿದ್ದಾರೆ. ಕೊಲೆಗೆ ಕಾರಣವನ್ನು ವಿಚಾರಣೆಯಲ್ಲಿ ಪಡೆದುಕೊಳ್ಳುತ್ತೇವೆ. ಕೊಲೆಗೆ ಮೂರ್ನಾಲ್ಕು ಕಾರಣಗಳು ಇರುವ ಸಾಧ್ಯತೆ ಇದೆ. ಸಂಪೂರ್ಣ ತನಿಖೆ ಮಾಡದೆ ಕಾರಣ ಹೇಳಲು ಸಾಧ್ಯವಿಲ್ಲ. ಆರೋಪಿ ತಪ್ಪೊಪ್ಪಿಗೆ ಹೇಳಿಕೆ ಕೊಟ್ಟಿದ್ದಾನೆ. ಅವನ ಉದ್ದೇಶ ಅಯ್ನಾಝ್ ಕೊಲೆ ಮಾಡುವುದಾಗಿತ್ತು. ತಪ್ಪಿಸಿಕೊಳ್ಳಲು ಎಲ್ಲರನ್ನೂ ಕೊಲೆ ಮಾಡಿದ್ದಾನೆ. ಕೊಲೆ ಸಾಕ್ಷಿ ನಾಶ ಮಾಡಲು ಮೂವರ ಕೊಲೆ ಮಾಡಿರುವ ಬಗ್ಗೆ ತಪ್ಪೊಪ್ಪಿಕೊಂಡಿದ್ದಾನೆ. ಕೊಲೆ ಮಾಡಲು ಮೂರು ನಾಲ್ಕು ಕಾರಣ ಇರುವ ಸಾಧ್ಯತೆಗಳಿವೆ. ತನಿಖೆಯಿಂದ ಸಂಪೂರ್ಣ ಮಾಹಿತಿ ಸಿಗಲಿದೆ ಎಂದರು.

ಅಯ್ನಾಝ್ ಮತ್ತು ಪ್ರವೀಣ್ ಇಬ್ಬರು ಸಹೋದ್ಯೋಗಿಗಳಾಗಿದ್ದರು. ಆರೋಪಿ ಪ್ರವೀಣ್ ಚೌಗಲೆಗೆ ಬೇರೆ ಯುವತಿ ಜೊತೆ ಮದುವೆಯಾಗಿತ್ತು. ತಾಂತ್ರಿಕ ಸಾಕ್ಷಿಗಳ ಸಂಗ್ರಹ ಮಾಡಿ ಬಂಧಿಸಿದ್ದೇವೆ. ಕುಟುಂಬ ತನಿಖೆಗೆ ಸಂಪೂರ್ಣ ಸಹಕಾರ ನೀಡುತ್ತಿದೆ. ಕೊಲೆಗೆ ಕಾರಣ ಏನು ಎಂಬುದು ಪ್ರಮುಖ. ಅಯ್ನಾಝ್ ಮತ್ತು ಪ್ರವೀಣ್ ಚೌಗಲೆ ನಡುವಿನ ಸಂಬಂಧಗಳ ಬಗ್ಗೆ ತನಿಖೆ ಮಾಡುತ್ತಿದ್ದೇವೆ ಎಂದು ಹೇಳಿದರು. ಈ ಮಧ್ಯೆ ಆರೋಪಿಯನ್ನು ಕೋರ್ಟ್‌ಗೆ ಹಾಜರುಪಡಿಸಲಾಗಿ, 14 ದಿನ ಪೊಲೀಸ್ ಕಸ್ಟಡಿಗೆ ನೀಡಲಾಗಿದೆ.

ಸಹಾರಾ ಗ್ರೂಪ್ ಮುಖ್ಯಸ್ಥ ಸುಬ್ರತಾ ರಾಯ್ ನಿಧನ



ಮುಂಬೈ: ಸಹಾರಾ ಇಂಡಿಯಾ ಗ್ರೂಪ್ ಮುಖ್ಯಸ್ಥ ಸುಬ್ರತಾ ರಾಯ್ ಮಂಗಳವಾರ ನಿಧನರಾದರು. 75 ವರ್ಷದ ಅವರು ಮುಂಬೈನಲ್ಲಿ ಕೊನೆಯುಸಿರೆಳೆದಿದ್ದಾರೆ.

ಸಹಾರಾ ಕುಟುಂಬದ ಮುಖ್ಯಸ್ಥ ಸುಬ್ರತಾ ರಾಯ್ ಬಹಳ ದಿನಗಳಿಂದ ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದು ಮುಂಬೈನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ಸುಬ್ರತಾ ರಾಯ್ ಅವರು 1948ರ ಜೂನ್ 10ರಂದು ಜನಿಸಿದರು. ಭಾರತದ ಪ್ರಮುಖ ಉದ್ಯಮಿ ಮತ್ತು ಸಹಾರಾ ಇಂಡಿಯಾ ಪರಿವಾರದ ಸಂಸ್ಥಾಪಕರಾಗಿದ್ದರು. ಅವರನ್ನು ನಾಡಿನಾದ್ಯಂತ 'ಸಹರಾಶ್ರೀ' ಎಂದೂ ಕರೆಯಲಾಗುತ್ತಿತ್ತು.

ಸುಬ್ರತಾ ರಾಯ್ ನಿಧನಕ್ಕೆ ಸಮಾಜವಾದಿ ಪಕ್ಷ ಸಂತಾಪ ವ್ಯಕ್ತಪಡಿಸಿದ್ದು, ಸುಬ್ರತಾ ರಾಯ್ ಜಿ ಅವರ ನಿಧನದಿಂದ ದುಃಖವಾಗಿದೆ ಎಂದು ಹೇಳಿದೆ. ಅವರ ಆತ್ಮಕೆ ಶಾಂತಿ ಸಿಗಲಿ. ಮೃತರ ಕುಟುಂಬದ ಸದಸ್ಯರಿಗೆ ಈ ಅಪಾರ ದುಃಖವನ್ನು ಭರಿಸುವ ಶಕ್ತಿ ಸಿಗಲಿ. ಭಾವಪೂರ್ಣ ಶ್ರದ್ಧಾಂಜಲಿ ಎಂದು ಟ್ವೀಟ್ ಮಾಡಿದೆ.

ಹಲವು ವರ್ಷಗಳಿಂದ ಜನರ ಹಣವನ್ನು ಪಾವತಿಸದ ಸಹಾರಾ ಇಂಡಿಯಾ ವಿರುದ್ಧ ಪಾಟ್ನಾ ಹೈಕೋರ್ಟ್‌ನಲ್ಲಿ ಪ್ರಕರಣ ನಡೆಯುತ್ತಿದೆ. ಜನರ ಹಣವನ್ನು ಕಂಪನಿಯ ಹಲವು ಯೋಜನೆಗಳಲ್ಲಿ ಹೂಡಿಕೆ ಮಾಡಿದ್ದರು. ಆದರೆ ನಂತರ ಸುಬ್ರತಾ ರಾಯ್‌ಗೆ ಈ ವಿಷಯದಲ್ಲಿ ಸುಪ್ರೀಂ ಕೋರ್ಟ್‌ನಿಂದ ಬಿಗ್ ರಿಲೀಫ್ ಸಿಕ್ಕಿತ್ತು. ಕಳೆದ ವರ್ಷ ಪಾಟ್ನಾ ಹೈಕೋರ್ಟ್‌ನ ಬಂಧನ ಆದೇಶವನ್ನು ತಕ್ಷಣವೇ ಆಲಿಸುವ ಮೂಲಕ ಸುಪ್ರೀಂ ಕೋರ್ಟ್ ಅದಕ್ಕೆ ತಡೆ ನೀಡಿತ್ತು. ಅಲ್ಲದೆ, ಅವರ ವಿರುದ್ಧ ಯಾವುದೇ ಮುಂದಿನ ಕ್ರಮದ ಬಗ್ಗೆ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಆದೇಶ ನೀಡಲಾಯಿತು.

ಸುಬ್ರತಾ ರಾಯ್ ವಿರುದ್ಧ ಇದೇ ರೀತಿಯ ಪ್ರಕರಣ ಈಗಾಗಲೇ ಸುಪ್ರೀಂ ಕೋರ್ಟ್‌ನಲ್ಲಿ ನಡೆಯುತ್ತಿದೆ. ಅವರು ಜಾಮೀನಿನ ಮೇಲೆ ಹೊರಗಿದ್ದಾರೆ. ಅದೇ ಸಮಯದಲ್ಲಿ, ಹೂಡಿಕೆದಾರರ ಹಣವನ್ನು ಹಿಂದಿರುಗಿಸುವ ಬಗ್ಗೆ, ಸಹಾರಾ ಇಂಡಿಯಾ ಅವರು ಸಂಪೂರ್ಣ ಮೊತ್ತವನ್ನು ಸೆಬಿಗೆ ಠೇವಣಿ ಮಾಡಿದ್ದಾರೆ ಎಂದು ಹೇಳಿಕೊಳ್ಳುತ್ತಾರೆ.



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಕುಸಿಯುತ್ತಿರುವ ಕಾಡು; ಹೆಚ್ಚುತ್ತಿರುವ ವನ್ಯಜೀವಿ–ಮಾನವ ಸಂಘರ್ಷ

ಮೊನ್ನೆ ಮೊನ್ನೆ ತಾನೇ ಬಂಡೀಪುರ ಅಭಯಾರಣ್ಯದ ಅಂಚಿನಲ್ಲಿರುವ ಗ್ರಾಮವೊಂದರ ನಿವಾಸಿಯೊಬ್ಬರು ತಮ್ಮ ಭೂಮಿಯಲ್ಲಿ ಜಾನುವಾರುಗಳನ್ನು ಮೇಯಿಸುತ್ತಿದ್ದಾಗ ಹುಲಿಯೊಂದು ದಾಳಿ ಮಾಡಿ, ಆತನ ದೇಹದ ಕೆಲ ಭಾಗಗಳನ್ನು ಭಕ್ಷಿಸಿದ್ದೇ ಅಲ್ಲದೆ ಉಳಿದ ದೇಹದ ಭಾಗವನ್ನು ಕಾಡಿನೊಳಗೆ ಎಳೆದೊಯ್ಯುತ್ತಿದ್ದಾಗ ಸುತ್ತಲಿದ್ದ ಜನರ ಸದ್ದು ಕೇಳಿ ದೇಹವನ್ನು ಅಲ್ಲಿಯೇ ಬಿಟ್ಟು ಹೋದ ಘಟನೆ ಕಾಡಂಚಿನ ಗ್ರಾಮಗಳ ಜನ ಸಮುದಾಯಗಳ ಬದುಕಿನ ಅಸಹಾಯಕತೆಯ ಒಂದು ಮುಖ ದರ್ಶನವಷ್ಟೆ. ಇದಕ್ಕೆ ಕೆಲವೇ ದಿನಗಳ ಹಿಂದೆ ಅಭಯಾರಣ್ಯದ ಆಸುಪಾಸಿನಲ್ಲಿ ಬುಡಕಟ್ಟು ಸಮುದಾಯಗಳ ಇಬ್ಬರು ಸದಸ್ಯರು ಮತ್ತು ಒಬ್ಬ ಅರಣ್ಯ ರಕ್ಷಕರು ಹುಲಿ ದಾಳಿಗೆ ತುತ್ತಾಗಿದ್ದರು. ಅರಣ್ಯ ಇಲಾಖೆ ನೀಡಿದ ಮಾಹಿತಿಯ ಅನ್ವಯ ಕೇವಲ 15 ದಿನಗಳ ಕಾಲ ಮಿತಿಯಲ್ಲಿ 11 ಮಂದಿ ಆನೆ ದಾಳಿಗೆ ತುತ್ತಾಗಿದ್ದರು. ಇಂಥ ಘಟನೆಗಳು ನಡೆದಾಗ ಗ್ರಾಮಸ್ಥರ ಆಕ್ರೋಶಕ್ಕೆ ತುತ್ತಾದ ಅರಣ್ಯ ಇಲಾಖೆಯ ಅಧಿಕಾರಿಗಳು ಗ್ರಾಮಗಳಿಗೆ ಭೇಟಿ ನೀಡುವುದು, ಪರಿಹಾರ ನೀಡುವುದು–ಇವೆಲ್ಲ ಸಾಮಾನ್ಯವಾಗಿ ಬಿಟ್ಟಿವೆ. ಆದರೆ ಸಮಸ್ಯೆ ಮಾತ್ರ ದಿನೇ–ದಿನೆ ಹೆಚ್ಚು ಕ್ಲಿಷ್ಟವಾಗುತ್ತಿದೆ. ಅರಣ್ಯದ ಆಜುಬಾಜಿನಲ್ಲಿರುವ ಗ್ರಾಮವಾಸಿಗಳ ಬದುಕು ದುಸ್ತರವಾಗುತ್ತಿದೆ.

ಅಭಿವೃದ್ಧಿಯ ಹೆಸರಿನಲ್ಲಿ ಹಾಗೂ ತ್ವರಿತವಾಗಿ ಬೆಳೆಯುತ್ತಿರುವ ಜನಸಂಖ್ಯೆಯ ಒತ್ತಡಗಳನ್ನು ತಡೆಯಲಾರದ ಅರಣ್ಯದ ಸಂಪತ್ತು ಕ್ರಮೇಣ ಕಡಿಮೆಯಾಗುತ್ತಿದೆ. ಒಂದು ಅಂದಾಜಿನ ಪ್ರಕಾರ ದೇಶದ ಅರಣ್ಯಗಳ ಸುತ್ತ–ಮುತ್ತ ವಾಸಿಸುತ್ತಿರುವ ಜನಸಂಖ್ಯೆ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ 22ರಷ್ಟಿದ್ದು ಇವರು ಮತ್ತು ವನ್ಯಜೀವಿಗಳ ನಡುವಣ ಒಡನಾಟ ಮತ್ತು ಸಹಬಾಳ್ವೆ ಒಂದು ಅನಿವಾರ್ಯ ಪರಿಸ್ಥಿತಿ. ಅರಣ್ಯ ಪ್ರದೇಶಗಳಲ್ಲಿ ಕೆಲ ವನ್ಯಜೀವಿ ಸಂಕುಲಗಳ ಸಂತತಿ ಹೆಚ್ಚುತ್ತಿದೆ. ಈ ಅಸಮತೋಲಿತ ಬೆಳವಣಿಗೆಯ ಕಾರಣದಿಂದಾಗಿ ವನ್ಯಮೃಗಗಳು ಜನವಸತಿ ಸ್ಥಾನಗಳತ್ತ ಆಹಾರ ಹಾಗೂ ನೀರಿನ ಮೂಲಗಳನ್ನು ಹುಡುಕಿ ಬರುತ್ತಿವೆ. ಒಂದೆಡೆ ಜೀವನ ನಿರ್ವಹಣೆಗಾಗಿ ತಾವು ಬೆಳೆಸಿದ ಬೆಳೆಗಳನ್ನು ನಾಶ ಮಾಡುತ್ತಿರುವ ಕಾಡು ಪ್ರಾಣಿಗಳು, ಮತ್ತೊಂದೆಡೆ ಯಾವ ಗಳಿಗೆಯಲ್ಲಾದರೂ ಅವುಗಳಿಂದ ಆಕ್ರಮಣಕ್ಕೆ ಒಳಗಾಗಬಹುದು ಎಂಬ ಭೀತಿಯಲ್ಲಿ ಜೀವನವನ್ನು ಸವೆಸುತ್ತಿರುವ ಅರಣ್ಯಾವಲಂಬಿ ಸಮುದಾಯಗಳು– ಅರಣ್ಯ ಇಲಾಖೆಗೆ ಇದೊಂದು ಬಿಡಿಸಲಾಗದ ಕಗ್ಗಂಟಾಗಿ ಕಾಡುತ್ತಿದೆ.



ಹೆಚ್ಚುತ್ತಿರುವ ಮಾನವ–ವನ್ಯಜೀವಿ ಸಂಘರ್ಷಕ್ಕೆ ಮುಖ್ಯ ಕಾರಣವೆಂದರೆ ಕ್ರಮೇಣ ಕ್ಷೀಣಿಸುತ್ತಿರುವ ಅರಣ್ಯ ಪ್ರದೇಶ. ಪ್ರತಿ ವರ್ಷವೂ ಕರ್ನಾಟಕ ರಾಜ್ಯವೊಂದರಲ್ಲೇ 3000 ಹೆಕ್ಟೇರ್ ಅರಣ್ಯ ಭೂಮಿ ನಶಿಸುತ್ತಿದೆ. ಅರಣ್ಯಗಳ ಕಣ್ಮರೆ ಒಂದು ಜಾಗತಿಕ ಪಿಡುಗಾಗಿ ಪರಿಣಮಿಸಿದ್ದು 2004–17 ರವರೆಗೆ, ಎಂದರೆ 14 ವರ್ಷಗಳಲ್ಲಿ 4.3 ಕೋಟಿ ಹೆಕ್ಟೇರ್ ಅರಣ್ಯ ಪ್ರದೇಶ ನಮ್ಮ ದೇಶದಲ್ಲಿ ನಲುಗಿ ಹೋಗಿದೆ ಎಂದು ವರ್ಲ್ಡ್ ವೈಲ್ಡ್ ಲೈಫ್ ಫಂಡ್ ಹೇಳಿದೆ. ಕಳೆದ 4 ದಶಕಗಳಲ್ಲಿ ರಾಜ್ಯದಲ್ಲಿ 3660 ಚದರ ಕಿಲೋ ಮೀಟರ್ ನಿತ್ಯಹರಿದ್ವರ್ಣ ಕಾಡು ಮತ್ತು ಎಲೆಯುದುರುವ ಅರಣ್ಯ ಪ್ರದೇಶ ನಾಶವಾಗಿದೆ. ರಕ್ಷಿತ ಅರಣ್ಯಗಳ ಸುತ್ತ 270 ಚದರ ಕಿಲೋ ಮೀಟರು ಪ್ರದೇಶದಲ್ಲಿ ಕಟ್ಟಡಗಳು ಎದ್ದು ನಿಂತಿವೆ. ಇದರ ಅರ್ಥವೇನು? ನಾವು ಪ್ರಾಣಿಗಳ ವಾಸಸ್ಥಾನಗಳನ್ನು ಆಕ್ರಮಿಸಿಕೊಳ್ಳುತ್ತಿದ್ದೇವೆ, ತಮ್ಮ ಸಹಜ ನೆಲೆಗಳಿಂದ ಆಚೆ ಎಸೆಯಲ್ಪಟ್ಟ ವನ್ಯಜೀವಿಗಳು ತಮ್ಮ ಮೂಲ ನೆಲೆಗಳನ್ನು ಹುಡುಕಿಕೊಂಡು ಅಥವಾ ಆಹಾರದ ಅನ್ವೇಷಣೆಯಲ್ಲಿ ಜನವಸತಿ ಸ್ಥಾನಗಳತ್ತ ಧಾವಿಸುತ್ತಿವೆ. ಭಾರತದ ಭೂಪ್ರದೇಶದಲ್ಲಿ ಶೇಕಡಾ 25ರಷ್ಟಿರುವ ಅರಣ್ಯಗಳು ಪ್ರತಿ ವರ್ಷವೂ ಕಾಣೆಯಾಗುತ್ತಿರುವ ಪ್ರಮಾಣ ಮಾತ್ರ ಭಯ ಹುಟ್ಟಿಸುವಂತಹುದು. ಅರಣ್ಯಗಳ ಕುಗ್ಗುವಿಕೆಯ ಬಗ್ಗೆ ಕೈಗೊಳ್ಳಲಾಗುತ್ತಿರುವ ಅಧ್ಯಯನಗಳ ಪ್ರಕಾರ 1990–2000ದವರೆಗೆ ನಶಿಸಿ ಹೋಗಿರುವ 384,000 ಹೆಕ್ಟೇರು ಅರಣ್ಯ ಪ್ರದೇಶ ಮತ್ತು 2015–2020 ರವರೆಗೆ ನಶಿಸಿ ಹೋಗಿರುವ 668,400 ಹೆಕ್ಟೇರು ಅರಣ್ಯ ಪ್ರದೇಶವನ್ನು ಮತ್ತೆ ಬೆಳೆಸಬೇಕಾದರೆ ದಶಕಗಳೇ ಕಳೆದು ಹೋಗುತ್ತವೆ.

ಇತ್ತೀಚಿನ ದಿನಗಳಲ್ಲಿಯಂತೂ ಆನೆಗಳ ದಾಳಿಗೆ ಒಳಗಾಗುತ್ತಿರುವ ಜನರ ಸಂಖ್ಯೆ ಹೆಚ್ಚುತ್ತಲೇ ಹೋಗುತ್ತಿದೆ. ಅದರಲ್ಲೂ ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಇರುವ ಗ್ರಾಮಗಳು, ಕೊಡಗಿನ ಕಾಫಿ ತೋಟಗಳು ಆನೆಗಳ ಆಕ್ರಮಣಕ್ಕೆ ಸುಲಭದಲ್ಲಿ ಬಲಿಯಾಗುವಂಥ ಪ್ರದೇಶಗಳು. ರಾಜ್ಯದಲ್ಲಿ ಏಳು ಆನೆ ಕಾರ್ಯಪಡೆಗಳಿದ್ದು ಅವುಗಳಿಗೆ ಆನೆಗಳ ಆಕ್ರಮಣದಿಂದ ರಕ್ಷಣೆ ಒದಗಿಸಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ಆನೆಗಳ ಚಲನ–ವಲನಗಳು ಬದಲಾಗುತ್ತಿವೆ, ಯಾವಾಗ–ಎಲ್ಲಿ ಅವು ಪ್ರತ್ಯಕ್ಷವಾಗುತ್ತವೆ ಎಂಬ ಸುಳಿವು ದೊರೆಯುತ್ತಿಲ್ಲ. ಮೊನ್ನೆ–ಮೊನ್ನೆ ತಾನೇ ತಮ್ಮ ಕೊಡಗಿನ ಕಾಫಿ ತೋಟದಲ್ಲಿ ದಿನದ ಅಭ್ಯಾಸದಂತೆ ವಾಕಿಂಗ್ ಹೋಗಿದ್ದ ನಮ್ಮ ಸ್ನೇಹಿತರು ಇದ್ದಕ್ಕಿದ್ದ ಹಾಗೆ ಪ್ರತ್ಯಕ್ಷವಾದ ಆನೆಯ ದಾಳಿಗೆ ತುತ್ತಾಗಿ ತಮ್ಮ ಪ್ರಾಣವನ್ನೇ ತೆತ್ತ ಘಟನೆ ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ.

ಇದನ್ನು ತಡೆಗಟ್ಟಲು ಏನಾದರೂ ಮಾಡಲು ಸಾಧ್ಯವೇ? ಭಾರತೀಯ ವಿಜ್ಞಾನ ಸಂಸ್ಥೆ ಕೈಗೊಂಡಿರುವ ಒಂದು ಅಧ್ಯಯನದ ಪ್ರಕಾರ ಮಾನವ ವಾಸ ಸ್ಥಾನಗಳ ಒಳಗೆ ಆನೆಗಳ ಪ್ರವೇಶದ ಮೇಲೆ ನಿರ್ಬಂಧ ಹೇರಲು ರೈಲ್ವೆ ಬ್ಯಾರಿಕೇಡ್ ಅತ್ಯಂತ ಪರಿಣಾಮಕಾರಿ ತಡೆಯಾಗಿದೆ. ಕರ್ನಾಟಕ ರಾಜ್ಯದ ಆನೆ ತಾಣಗಳಲ್ಲಿ ಇದನ್ನು ಅಳವಡಿಸಬೇಕಾದರೆ 640 ಕಿಲೋಮೀಟರ್ ಉದ್ದದ ಬ್ಯಾರಿಕೇಡ್ ಅಗತ್ಯವಿದೆ. ಒಂದು ಕಿಲೋಮೀಟರ್‌ಗೆ ಇದನ್ನು ಹಾಕಲು ತಗಲುವ ವೆಚ್ಚ 1.5 ಕೋಟಿ. ಇಡೀ ರಾಜ್ಯಕ್ಕೆ ಬೇಕಾಗುವುದು 500 ಕೋಟಿ ರೂಪಾಯಿಗಳು. ಆದರೆ ಇದುವರೆಗೂ ಅರ್ಧದಷ್ಟು ಭಾಗಕ್ಕೆ ಮಾತ್ರ ಕೆಲಸವಾಗಿದ್ದು, ಇಡೀ ದೇಶದಲ್ಲೇ ಅತ್ಯಂತ ಹೆಚ್ಚಿನ ಸಂಖ್ಯೆಯ ಆನೆಗಳನ್ನು (ಸುಮಾರು 6500 ರಷ್ಟು) ಹೊಂದಿರುವ ನಮ್ಮ ರಾಜ್ಯದಲ್ಲಿ ಆನೆ ಕೇಂದ್ರಿತ ಅರಣ್ಯ ಪ್ರದೇಶಗಳಲ್ಲೆಲ್ಲ ಇದನ್ನು ಅಳವಡಿಸುವುದು ಅರಣ್ಯ ಇಲಾಖೆಗೆ ಇದು ಸವಾಲಾಗಿ ಪರಿಣಮಿಸಿದೆ.

ಅರಣ್ಯ ಪ್ರದೇಶಗಳ ಕುಗ್ಗುವಿಕೆ ಕೇವಲ ಭಾರತಕ್ಕಾಗಲಿ, ಕರ್ನಾಟಕಗಾಗಲಿ ಸೀಮಿತವಾಗಿಲ್ಲ. ವರ್ಲ್ಡ್ ರಿಸೋರ್ಸಸ್ ಇನ್ಸ್ಟಿಟ್ಯೂಟ್ ಪ್ರಕಾರ ಪ್ರಪಂಚ ಈಗಾಗಲೇ ತನ್ನ ಅರ್ಧ ಭಾಗದಷ್ಟು ಅರಣ್ಯ ಹೊದಿಕೆಯನ್ನು ಕಳೆದುಕೊಂಡಿದೆ. ಪ್ರತಿ ವರ್ಷವೂ 15 ಮಿಲಿಯನ್ ಹೆಕ್ಟೇರು ಅರಣ್ಯ ನಶಿಸಿ ಹೋಗುತ್ತಿದೆ. ಈ ಪರಿಸ್ಥಿತಿ ಸೃಷ್ಟಿಯಾಗಲು ಅನೇಕ ವ್ಯಕ್ತಿಗಳು ಮತ್ತು ಸಂಸ್ಥೆಗಳು ನಡೆಸುವ ವಾಣಿಜ್ಯ ಚಟುವಟಿಕೆಗಳೇ ಮುಖ್ಯ ಕಾರಣ. ಅರಣ್ಯದ ಸುತ್ತಮುತ್ತ ಕೃಷಿ ಭೂಮಿಯನ್ನು ಹೊಂದಿರುವ ಸಣ್ಣ ಮತ್ತು ದೊಡ್ಡ ರೈತರನೇಕರು ಮಾಡುವ ಒತ್ತುವರಿ, ಜಾನುವಾರುಗಳನ್ನು ಮೇಯಲು ಅರಣ್ಯದ ಒಳಗೆ ಬಿಡುವುದು, ವನ್ಯ ಮೃಗಗಳನ್ನು ಬೇಟೆಯಾಡುವುದು ಹಾಗೂ ಬೃಹತ್ ಮರಗಳನ್ನು ಕಡಿಯುವುದು–ಇವೇ ಮುಂತಾದ ಪರಿಸರ ವಿರೋಧಿ ಚಟವಟಿಕೆಗಳು ಅನೇಕ ಕಡೆಗಳಲ್ಲಿ ಯಾವುದೇ ಅಡೆತಡೆಗಳಿಲ್ಲದೆ ನಡೆಯುತ್ತಿವೆ. ಇದಕ್ಕೂ, ನಮಗೂ ಸಂಬಂಧವಿಲ್ಲವೆಂಬಂತೆ ಇರುವ ಕೋಟ್ಯಾಂತರ ಮಂದಿಗೆ ಬಿಸಿ ತಟ್ಟುವುದು ಹವಾಮಾನ ಬದಲಾವಣೆ, ಮಳೆಯ ವೈಫಲ್ಯ, ಆರೋಗ್ಯದಲ್ಲಿ ಏರುಪೇರು–ಇವೆಲ್ಲ ಗಂಭೀರ ಸ್ವರೂಪವನ್ನು ತಳೆದಾಗ ಮಾತ್ರ.


> **ಅರಣ್ಯ ಪ್ರದೇಶಗಳ ಕುಗ್ಗುವಿಕೆ ಕೇವಲ ಭಾರತಕ್ಕಾಗಲಿ, ಕರ್ನಾಟಕಗಾಗಲಿ ಸೀಮಿತವಾಗಿಲ್ಲ. ವರ್ಲ್ಡ್ ರಿಸೋರ್ಸಸ್ ಇನ್ಸ್ಟಿಟ್ಯೂಟ್ ಪ್ರಕಾರ ಪ್ರಪಂಚ ಈಗಾಗಲೇ ತನ್ನ ಅರ್ಧ ಭಾಗದಷ್ಟು ಅರಣ್ಯ ಹೊದಿಕೆಯನ್ನು ಕಳೆದುಕೊಂಡಿದೆ. ಪ್ರತಿ ವರ್ಷವೂ 15 ಮಿಲಿಯನ್ ಹೆಕ್ಟೇರು ಅರಣ್ಯ ನಶಿಸಿ ಹೋಗುತ್ತಿದೆ. ಈ ಪರಿಸ್ಥಿತಿ ಸೃಷ್ಟಿಯಾಗಲು ಅನೇಕ ವ್ಯಕ್ತಿಗಳು, ಸಂಸ್ಥೆಗಳು ನಡೆಸುವ ವಾಣಿಜ್ಯ ಚಟುವಟಿಕೆಗಳೇ ಮುಖ್ಯ ಕಾರಣ.**

ಕರ್ನಾಟಕದಲ್ಲಿ ಅರಣ್ಯ ಪ್ರದೇಶಗಳು ಅಪಾಯದಂಚನ್ನು ತಲುಪಲು ಮತ್ತೊಂದು ಪ್ರಮುಖ ಕಾರಣವೆಂದರೆ ಸಂರಕ್ಷಿತ ಪ್ರದೇಶಗಳ ಸುತ್ತ–ಮುತ್ತ ತಲೆಯೆತ್ತಿರುವ ಅನೇಕ ಅನಧಿಕೃತ ಹೋಂಸ್ಟೇಗಳು ಮತ್ತು ರೆಸಾರ್ಟುಗಳು. ರಾಜ್ಯದ ಪ್ರಮುಖ ಅಭಯಾರಣ್ಯಗಳಾದ ಬಂಡೀಪುರ, ಭದ್ರಾ ಹುಲಿ ಸಂರಕ್ಷಿತ ಅರಣ್ಯ, ಬಿಳಿಗಿರಿರಂಗನಾಥ ಹುಲಿ ಸಂರಕ್ಷಿತ ಅರಣ್ಯ, ಕಾಳಿ ಹುಲಿ ಸಂರಕ್ಷಿತ ಪ್ರದೇಶ, ಕುದುರೆಮುಖ ಮುಂತಾದ ಅರಣ್ಯ ಪ್ರದೇಶಗಳಲ್ಲಿ ಹಾಗೂ ಅರಣ್ಯಾವೃತ್ತ ಪ್ರದೇಶಗಳಲ್ಲಿ ನೂರಾರು ಪ್ರವಾಸಿ ತಾಣಗಳು ತಲೆ ಎತ್ತಿವೆ. ಅವುಗಳಲ್ಲಿ ಅನೇಕವು ಅರಣ್ಯ ಕಾಯಿದೆಗಳು ಮತ್ತು ಮತ್ತು ಪ್ರವಾಸೋದ್ಯಮ ಇಲಾಖೆಯ ನಿಯಮಗಳ ನೇರ ಉಲ್ಲಂಘನೆ ಮಾಡಿರುವಂಥವು ಎಂದು ವರದಿಗಳು ಬರುತ್ತಲೇ ಇವೆ. ಆದಾಗ್ಯೂ ಹೊಸ–ಹೊಸ ಹೋಂಸ್ಟೇಗಳಿಗೆ ಅನುಮತಿಯನ್ನು ನೀಡಲಾಗುತ್ತಿದೆ. ಇವುಗಳಲ್ಲಿ ಅನೇಕವು ಪ್ರಭಾವಿ–ಹಣವಂತ ವ್ಯಕ್ತಿಗಳು ಅಥವಾ ಉದ್ಯಮಗಳ ಮಾಲೀಕತ್ವದಲ್ಲಿದ್ದು ಅವುಗಳ ಮೇಲೆ ಕ್ರಮ ಕೈಗೊಳ್ಳುವಲ್ಲಿ ಅರಣ್ಯ ಇಲಾಖೆ ಅಥವಾ ಸಂಬಂಧಪಟ್ಟ ಆಡಳಿತಾತ್ಮಕ ವಲಯ ವಿಫಲವಾಗಿದೆ ಎಂಬುದು ತಿಳಿದ ವಿಷಯವೇ.

ಅರಣ್ಯಗಳ ಸಂರಕ್ಷಣೆ ಮತ್ತು ಮಾನವ–ವನ್ಯಜೀವಿ ಸಂಘರ್ಷವನ್ನು ತಡೆಗಟ್ಟುವುದು–ಈ ಎರಡು ಕಾರ್ಯಕ್ರಮಗಳೂ ಸ್ಥಳೀಯ ಭಾಗವಹಿಸುವಿಕೆ ಮತ್ತು ಅನುಭವಗಳ ಚೌಕಟ್ಟಿನಲ್ಲಿಯೇ ನಡೆಯಬೇಕು. ಎಲ್ಲಕಿಂತ ಮಿಗಿಲಾಗಿ ಅಭಿವೃದ್ಧಿಯ ಹೆಸರಿನಲ್ಲಿ ತನ್ನ ಕಬಂಧ ಬಾಹುಗಳನ್ನು ಎಲ್ಲೆಡೆ ಚಾಚುತ್ತಿರುವ ನವ ಬಂಡವಾಳಶಾಹಿ ಉದ್ಯಮದ ಬೆಳವಣಿಗೆಗೆ ಕಡಿವಾಣ ಹಾಕದಿದ್ದರೆ ಮುಂಬರುವ ವರ್ಷಗಳಲ್ಲಿ ನಮ್ಮ ಪ್ರಾಕೃತಿಕ ಸಂಪತ್ತು ಮತ್ತಷ್ಟು ಕುಗ್ಗುತ್ತದೆ. ಅರಣ್ಯವನ್ನು ಅವಲಂಬಿಸಿ ಬಹುಕಾಲ ದಿಂದ ತಮ್ಮ ಬದುಕನ್ನು ಕಟ್ಟಿಕೊಂಡು ಬಂದಿರುವ ಸಮುದಾಯಗಳು ಪರ್ಯಾಯ ಜೀವನ ನಿರ್ವಹಣಾ ಮಾರ್ಗಗಳಿಲ್ಲದೆ ಅವಸಾನದ ಅಂಚನ್ನು ತಲುಪುತ್ತವೆ. ವನ್ಯಜೀವಿಗಳು ಮತ್ತು ಅರಣ್ಯಾವಲಂಬಿ ಸಮುದಾಯಗಳ ಒಕ್ಕಲೆಬ್ಬಿಸುವಿಕೆ ಒಟ್ಟೊಟ್ಟಿಗೆ ನಡೆಯುತ್ತದೆ.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ, ಕಾಂಗ್ರೆಸ್ ಮುಖಂಡ ಅಬ್ದುಲ್ ಅಜೀಜ್ (ಅಬ್ದುಲ್ಲಾ) ಅವರಿಗೆ ಹುಟ್ಟುಹಬ್ಬದ ಸಂಭ್ರಮ





ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ, ಕಾಂಗ್ರೆಸ್ ಮುಖಂಡ ಅಬ್ದುಲ್ ಅಜೀಜ್ (ಅಬ್ದುಲ್ಲಾ) ಅವರ ಹುಟ್ಟು ಹಬ್ಬವನ್ನು ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಅಭಿಮಾನಿಗಳು ಅದ್ದೂರಿಯಾಗಿ ಆಚರಿಸಿದರು. ದೇವರಾಜ ಮಾರುಕಟ್ಟೆ ವರ್ತಕರ ಸಂಘದ ಅಧ್ಯಕ್ಷ ದಿನೇಶ್, ಉದ್ಯಮಿ ಪ್ರದೀಪ್ ಸಿಂಗ್ ಇನ್ನಿತರರಿದ್ದರು. ಮತ್ತೊಂದು ಚಿತ್ರದಲ್ಲಿ ಅಬ್ದುಲ್ ಅಜೀಜ್ (ಅಬ್ದುಲ್ಲಾ) ಅವರಿಗೆ ಅಭಿಮಾನಿಗಳು ಬೃಹತ್ ಗಾತ್ರದ ಬಾದಾಮಿ ಹಾರ ಹಾಕಿ, ಹುಟ್ಟು ಹಬ್ಬದ ಶುಭಾಶಯ ಕೋರುತ್ತಿರುವುದನ್ನು ಕಾಣಬಹುದು.

ಹಳಿ ಮೇಲೆ ಕಬ್ಬಿಣದ ಸ್ಲೀಪರ್, ಮರದ ದಿಮ್ಮಿ ಇಟ್ಟು ರೈಲು ಅಪಘಾತಕ್ಕೆ ಯತ್ನಿಸಿದ ಮೂವರ ಬಂಧನ

- ಲೋಕೋ ಪೈಲಟ್ ಸಮಯ ಪ್ರಜ್ಞೆಯಿಂದ ತಪ್ಪಿದ ಭಾರೀ ಅನಾಹುತ
- ನಂಜನಗೂಡು–ಕಡಕೊಳ ನಡುವೆ ನ.12ರಂದು ಆಘಾತಕಾರಿ ಘಟನೆ

ಮೈಸೂರು, ನ.15(ಆರ್‌ಕೆ)–ಕುಡಿದ ಅಮಲಿನಲ್ಲಿ ಹಳಿ ಮೇಲೆ ಮರದ ದಿಮ್ಮಿ, ಕಬ್ಬಿಣದ ಸ್ಲೀಪರ್ ಇಟ್ಟು ರೈಲು ಅಪಘಾತಕ್ಕೆ ಯತ್ನಿಸಿದ ಮೂವರನ್ನು ರೈಲ್ವೆ ರಕ್ಷಣಾ ದಳದ ಅಧಿಕಾರಿಗಳು ಬಂಧಿಸಿದ್ದಾರೆ.

ಬಂಧಿತರನ್ನು ಒಡಿಸ್ಸಾದವರೆನ್ನಲಾದ ಸೋಮೇ ಮರಂಡಿ, ಭಜನು ಮುರ್ಮು ಹಾಗೂ ದಸಮತ ಮರಂಡಿ ಎಂದು ಗುರುತಿಸಲಾಗಿದ್ದು, ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಹಳಿ ಮೇಲೆ ಮರದ ದಿಮ್ಮಿ ಇರುವುದು ಕಂಡ ತಕ್ಷಣ ಎಚ್ಚೆತ್ತ ಚಾಮರಾಜನಗರ–ಮೈಸೂರು ಎಕ್ಸ್‌ಪ್ರೆಸ್ ರೈಲುಗಾಡಿ ಸಂಖ್ಯೆ 06275 ಲೋಕೋ ಪೈಲಟ್ ರೈಲನ್ನು ಸುರಕ್ಷಿತವಾಗಿ ನಿಲ್ಲಿಸಿ ಸಂಭವಿಸಬಹುದಾದ ಭಾರೀ ಅನಾಹುತ ತಪ್ಪಿಸಿ ಪ್ರಯಾಣಿಕರನ್ನು ಪ್ರಾಣಾಪಾಯದಿಂದ ರಕ್ಷಿಸುವಲ್ಲಿ ಯಶಸ್ವಿಯಾಗಿದ್ದಾರೆ.

ನವೆಂಬರ್ 12ರಂದು ಸಂಜೆ 6.30 ಗಂಟೆ ವೇಳೆಗೆ ಚಾಮರಾಜನಗರದಿಂದ ಮೈಸೂರಿಗೆ ಬರುತ್ತಿದ್ದ ರೈಲುಗಾಡಿ ಕಡಕೊಳ ಸಮೀಪಿಸುತ್ತಿದ್ದಂತೆಯೇ ಕಿ.ಮೀ. ಸಂಖ್ಯೆ 19/200–300 ಬಳಿ ಮರದ ದಿಮ್ಮಿ ಮತ್ತು ಕಬ್ಬಿಣದ ಸ್ಲೀಪರ್ ಹಳಿ ಮೇಲೆ ಬಿದ್ದಿರುವುದು ಕಂಡಿತು. ತಕ್ಷಣ ಕಾರ್ಯೋನ್ಮುಖರಾದ ಲೋಕೋ ಪೈಲಟ್ ರೈಲನ್ನು ಸಿಗ್ನಲ್ ನೀಡಿ ಸುರಕ್ಷಿತವಾಗಿ ನಿಲ್ಲಿಸಿದರಲ್ಲದೆ, ಅಗತ್ಯ ಸುರಕ್ಷತಾ ಕ್ರಮ ವಹಿಸಿದರು. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಆರ್‌ಪಿಎಫ್ ಅಸಿಸ್ಟೆಂಟ್ ಸೆಕ್ಯೂರಿಟಿ ಕಮಿಷ್ನರ್ ಕೆ.ವಿ.ವೆಂಕಟೇಶ್ ಮತ್ತು ಸಿಬ್ಬಂದಿ, ಕ್ಷಿಪ್ರ ಕಾರ್ಯಾಚರಣೆ ತಂಡ, ಶ್ವಾನ ದಳದ ಸಿಬ್ಬಂದಿ ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡು ಹಳಿಗೆ ಅಡ್ಡಲಾಗಿ ಬಿದ್ದಿದ್ದ ಕಬ್ಬಿಣದ ಸ್ಲೀಪರ್, ಮರದ ದಿಮ್ಮಿಯನ್ನು ತೆರವುಗೊಳಿಸಿದರು. ಪರಿಶೀಲನೆ ವೇಳೆ ಸ್ಥಳದ ಸಮೀಪ ಇದ್ದ ಮೂವರನ್ನು ವಶಕ್ಕೆ ಪಡೆದ ಪೊಲೀಸರು ವಿಚಾರಣೆ ನಡೆಸಿದ ಬಳಿಕ ಮೈಸೂರು ರೈಲ್ವೇ ಪೊಲೀಸರಿಗೆ ಆರೋಪಿಗಳನ್ನು ಒಪ್ಪಿಸಲಾಯಿತು. ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಸಮಯಕ್ಕೆ ಸರಿಯಾಗಿ ಎಚ್ಚೆತ್ತು ಸಂಭವಿಸಬಹುದಾದ ಅವಘಡ ತಪ್ಪಿಸಿ ಪ್ರಯಾಣಿಕರನ್ನು ರಕ್ಷಿಸಿದ ರೈಲಿನ ಲೋಕೊ ಪೈಲಟ್ ಸಮಯ ಪ್ರಜ್ಞೆಯನ್ನು ವಿಭಾಗೀಯ ರೈಲ್ವೇ ವ್ಯವಸ್ಥಾಪಕಿ ಶಿಲ್ಪಿ ಅಗರ್‌ವಾಲ್ ಶ್ಲಾಘಿಸಿದ್ದಾರೆ.



ಕೆಇಎ ನೇಮಕಾತಿ ಪರೀಕ್ಷಾ ಅಕ್ರಮ

ಆರ್.ಡಿ.ಪಾಟೀಲ 9 ದಿನ ಸಿಐಡಿ ಕಸ್ಟಡಿಗೆ

ಕಲಬುರಗಿ: ಬ್ಲೂಟೂತ್ ಸಾಧನ ಬಳಸಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ನೇಮಕಾತಿ ಪರೀಕ್ಷೆ ಬರೆದ ಅಕ್ರಮ ಪ್ರಕರಣದ ಬಂಧಿತ ಪ್ರಮುಖ ಆರೋಪಿ ಆರ್.ಡಿ. ಪಾಟೀಲನನ್ನು ಸಿಐಡಿ ಪೊಲೀಸರು ವಶಕ್ಕೆ ಪಡೆದರು. ನ್ಯಾಯಾಂಗ ಬಂಧನದಲ್ಲಿದ್ದ ಆರೋಪಿಯನ್ನು ಇಲ್ಲಿನ ಜೆಎಂಎಫ್‌ಸಿ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಯಿತು. ಹೆಚ್ಚಿನ ವಿಚಾರಣೆಗಾಗಿ 10 ದಿನಗಳ ಮಟ್ಟಿಗೆ ತಮ್ಮ ವಶಕ್ಕೆ ನೀಡುವಂತೆ ಸಿಐಡಿ ಅಧಿಕಾರಿಗಳು ಮನವಿ ಮಾಡಿದ್ದರು. ನ್ಯಾಯಾಲಯವು 9 ದಿನಗಳ ಮಟ್ಟಿಗೆ ಸಿಐಡಿ ಕಸ್ಟಡಿಗೆ ನೀಡಿದೆ.

ದೂರು ರದ್ದತಿಗೆ ಮನವಿ: ಪ್ರಕರಣ ಸಂಬಂಧ ದಾಖಲಾದ ದೂರುಗಳನ್ನು ರದ್ದು ಮಾಡುವಂತೆ ಕೋರಿ ಹೈಕೋರ್ಟ್‌ನ ಕಲಬುರಗಿ ಪೀಠಕ್ಕೆ ಪಾಟೀಲ ಅರ್ಜಿ ಸಲ್ಲಿಸಿದ್ದ. ದೂರುಗಳ ರದ್ದತಿಗೆ ಅಷ್ಟೊಂದು ಆತುರ ಏನಿದೆ' ಎಂದು ಪ್ರಶ್ನಿಸಿದ ಹೈಕೋರ್ಟ್ ನ್ಯಾಯಮೂರ್ತಿಗಳು, ಅರ್ಜಿ ವಿಚಾರಣೆಯನ್ನು ನ.17ಕ್ಕೆ ಮುಂದೂಡಿದರು.

ಆರ್.ಡಿ.ಪಾಟೀಲ ಆಪ್ತ, ಅಥಣಿಯ ಸಣ್ಣ ನೀರಾವರಿ ಇಲಾಖೆ ಸಹಾಯಕ ಎಂಜಿನಿಯರ್ ರುದ್ರಗೌಡ, ಶಿವಕುಮಾರ್, ಸಿದ್ದರಾಮ, ರವಿಕುಮಾರ್ ಹಾಗೂ ರಹೀಂ ಚೌಧರಿ ಅವರನ್ನು ಬಂಧಿಸಿ, ನ್ಯಾಯಾಲಯದ ಮುಂದೆ ಹಾಜರುಪಡಿಸಿದರು.

ಮೈಸೂರು ಮಿತ್ರ ಗುರುವಾರ 16 ನವೆಂಬರ್ 2023

ಲಕ್ಷ್ಮೀಸಾಗರದಲ್ಲಿ ಅದ್ದೂರಿ ಹುಲಿವಾಹನೋತ್ಸವ



ಪಾಂಡವಪುರ, ನ.15– ತಾಲೂಕಿನ ಮಹದೇಶ್ವರಪುರ ಗ್ರಾಮದಲ್ಲಿ ದೀಪಾವಳಿ ಹಬ್ಬದ ಅಂಗವಾಗಿ ನಡೆಯುವ ಮಹದೇಶ್ವರ ಜಾತ್ರಾ ಮಹೋತ್ಸವದಲ್ಲಿ ಬುಧವಾರ ಲಕ್ಷ್ಮೀಸಾಗರ ಗ್ರಾಮಸ್ಥರು ಅದ್ದೂರಿಯಾಗಿ ಹುಲಿವಾಹನೋತ್ಸವ ನಡೆಸಿದರು.

ಶ್ರೀಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ದೀಪಾವಳಿ ಹಬ್ಬದ ಅಂಗವಾಗಿ ಪ್ರಾರಂಭಗೊಂಡು ಅದ್ದೂರಿಯಾಗಿ ನಡೆಯಲಿದೆ. ಪ್ರತಿವರ್ಷ ಜಾತ್ರಾ ಮಹೋತ್ಸವದಲ್ಲಿ ಸುತ್ತಮುತ್ತಲಿನ ಗ್ರಾಮ ಗ್ರಾಮಸ್ಥರು ಹುಲಿವಾಹನೋತ್ಸವ ನಡೆಸುತ್ತಾರೆ. ಅದರಂತೆ ಬುಧವಾರ ಲಕ್ಷ್ಮೀಸಾಗರ ಗ್ರಾಮಸ್ಥರು ಹುಲಿವಾಹನೋತ್ಸವವನ್ನು ಅದ್ದೂರಿಯಾಗಿ ಮೆರವಣಿಗೆ ನಡೆಸುವ ಮೂಲಕ ಭಕ್ತಿಭಾವ ಪ್ರದರ್ಶಿಸಿದರು. ಗ್ರಾಮದ ಯಜಮಾನರಾದ ಕೃಷ್ಣೇಗೌಡ, ಎಲ್.ಡಿ.ಸಂಜಯ್, ಎಲ್.ಸಿ.ಜಯರಾಮು, ಎಲ್.ಕೆ.ರವಿ, ಎಲ್.ಸಿ.ಚಿಕ್ಕೇಗೌಡ, ವಿಎಸ್ಎಸ್ಎನ್ ಮಾಜಿ ಅಧ್ಯಕ್ಷ ಅಶೋಕ್ ಸೇರಿದಂತೆ ಹಲವು ಮುಖಂಡರು ನೇತೃತ್ವದಲ್ಲಿ ನಡೆದ ಹಲಿವಾನಹೋತ್ಸವದಲ್ಲಿ ಗ್ರಾಮದ ನೂರಾರು ಯುವಕರು, ಗ್ರಾಮಸ್ಥರು ಪಾಲ್ಗೊಂಡು ಹುಲಿವಾಹನವನ್ನು ವಿಜೃಂಭಣೆಯಿಂದ ಮೆರವಣಿಗೆ ನಡೆಸಿ ಸಂಭ್ರಮಿಸಿದರು.

ಜಾತ್ರೆಯ ಅಂಗವಾಗಿ ಲಕ್ಷ್ಮೀಸಾಗರ ಗ್ರಾಮಸ್ಥರು ಗ್ರಾಮದ ಆಂಜನೇಯ ದೇವಸ್ಥಾನದ ಆವರಣದಲ್ಲಿ ಹುಲಿವಾಹನವನ್ನು ಬಣ್ಣಬಣ್ಣದ ಹೂ, ಹಣ್ಣುಗಳಿಂದ ಅಲಂಕರಿಸಿ ಕಣ್ಣುಕುಕ್ಕುವಂತೆ ಸಿಂಗರಿಸಿದರು. ಬಳಿಕ ಗ್ರಾಮದ ಯಜಮಾನರು ಹುಲಿವಾಹನಕ್ಕೆ ಮೊದಲ ಪೂಜೆ ಸಲ್ಲಿಸಿದರು. ನಂತರ ಗ್ರಾಮಸ್ಥರು, ಮಹಿಳೆಯರು ಸರತಿ ಸಾಲಿನಲ್ಲಿ ಆಗಮಿಸಿ ಹುಲಿವಾಹನಕ್ಕೆ ಪೂಜೆ ಸಲ್ಲಿಸಿದರು. ಬಳಿಕ ಮಧ್ಯಾಹ್ನ 1.15 ಗಂಟೆಗೆ ಹುಲಿವಾಹನೋತ್ಸವ ಮೆರವಣಿಗೆಗೆ ಚಾಲನೆ ನೀಡಲಾಯಿತು. ನಂತರ ಗ್ರಾಮದ ಪ್ರಮುಖ ಬೀದಿಗಳಲ್ಲಿ ಹುಲಿವಾಹನವನ್ನು ಹೊತ್ತು ಮೆರವಣಿಗೆ ನಡೆಸಿದ ಯುವಕರು 'ಉಘೇ...ಉಘೇ....ಉಘೇ ಮಾದಪ್ಪ' ಎಂದು ಘೋಷಣೆ ಕೂಗುತ್ತ ಮೆರವಣಿಗೆಯಲ್ಲಿ ಸಾಗಿದರು.

ಹುಲಿವಾಹನದ ಎದುರು ವಿವಿಧ ಸಾಂಸ್ಕೃತಿಕ ಕಲಾ ತಂಡಗಳೊಂದಿಗೆ ಹರಕೆ ಹೊತ್ತ ಮಹಿಳೆಯರು ಬಾಯಿ ಬೀಗ ಹಾಕಿಕೊಂಡು ಹೂ–ಹಣ್ಣಿನ ಆರತಿಯೊಂದಿಗೆ ಸಾಗಿದರು. ಹುಲಿವಾಹನೋತ್ಸವದ ಅಂಗವಾಗಿ ಲಕ್ಷ್ಮೀಸಾಗರ ಗ್ರಾಮದಲ್ಲಿ ಹಬ್ಬದ ವಾತಾವರಣ ಮನೆಮಾಡಿತ್ತು. ಗ್ರಾಮದ ಪ್ರತಿ ಬೀದಿಯೂ ತಳಿರು ತೋರಣಗಳಿಂದ ಶೃಂಗಾರಗೊಂಡಿತ್ತು. ಸುಮಾರು 1 ಗಂಟೆಗೂ ಹೆಚ್ಚುಕಾಲ ಮೆರವಣಿಗೆ ನಡೆಸಿದ ಹುಲಿವಾಹನೋತ್ಸವವನ್ನು ಸಂಜೆ 3 ಗಂಟೆಯ ಸುಮಾರಿಗೆ ಮಹದೇಶ್ವರಪುರ ಗ್ರಾಮದ ಮಹದೇಶ್ವರಸ್ವಾಮಿ ದೇವಸ್ಥಾನಕ್ಕೆ ತಲುಪಿತು. ಹುಲಿವಾಹನೋತ್ಸವದ ಮೆರವಣಿಗೆ ಸಾಗಿಬರುವ ದಾರಿಯುದ್ದಕ್ಕೂ ರಂಗೋಲಿಯನ್ನಿಟ್ಟು ಸಿಂಗರಿಸಲಾಗಿತ್ತು. ಮೆರವಣಿಗೆಯಲ್ಲಿ ಪೂಜಾಕುಣಿತ, ನಂದಿಕಂಬ, ಡೊಳ್ಳುಕುಣಿತ, ಗಾರುಡಿಗೊಂಬೆ, ತಮಟೆ, ನಗಾರಿ, ವಾದ್ಯ ಸೇರಿದಂತೆ ಹಲವು ಕಲಾತಂಡಗಳಿದ್ದವು. ಹುಲಿವಾಹನೋತ್ಸವ ಸಾಗಿಬಂದ ದಾರಿಯುದ್ದಕ್ಕೂ ಭಕ್ತರು ಪಾನೀಯ ಸೇವೆ ನೀಡಿ ಪುನೀತರಾದರು. ನಂತರ ಶ್ರೀಮಹದೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ ಹುಲಿವಾಹನೋತ್ಸವದ ಮೆರವಣಿಗೆ ನಡೆಯಿತು. ದೇವಸ್ಥಾನದ ಸುತ್ತಲು ಮೂರು ಸುತ್ತು ಹುಲಿವಾಹನವನ್ನು ಮೆರವಣಿಗೆ ನಡೆಸಿ ಭಕ್ತಿಭಾವ ಪ್ರದರ್ಶಿಸಿದರು. ಹುಲಿವಾಹನೋತ್ಸವ ಮೆರವಣಿಗೆಗೆ ಮೇಲುಕೋಟೆಯ ಪೊಲೀಸರು ಸೂಕ್ತ ಬಂದೂಬಸ್ತ್ ವ್ಯವಸ್ಥೆ ಕಲ್ಪಿಸಿ ಜಾತ್ರೆಯನ್ನು ನಡೆಸಿಕೊಟ್ಟರು.

ನಾಗಮಂಗಲದಲ್ಲಿ 70ನೇ ಅಖಿಲ ಭಾರತ ಸಹಕಾರ ಸಪ್ತಾಹ



ನಾಗಮಂಗಲ, ನ.15– ರಾಜಕೀಯ ತಾರತಮ್ಯ ಇಲ್ಲದ ಸಹಕಾರ ಕ್ಷೇತ್ರಕ್ಕೆ ನನ್ನ ಸಂಪೂರ್ಣ ಸಹಕಾರವಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ಪಟ್ಟಣದ ಟಿಎಪಿಸಿಎಂಎಸ್ ಆವರಣದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿ, ಮಂಡ್ಯ ಜಿಲ್ಲಾ ಸಹಕಾರ ಒಕ್ಕೂಟ, ಸಹಕಾರ ಇಲಾಖೆ ಮಂಡ್ಯ, ಟಿಎಪಿಸಿಎಂಎಸ್ ನಾಗಮಂಗಲ ಹಾಗೂ ತಾಲೂಕಿನ ಎಲ್ಲಾ ಸಹಕಾರ ಸಂಘಗಳ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ 70ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಹಕಾರಿ ಕ್ಷೇತ್ರದಲ್ಲಿ ಜಾತಿ ಹಾಗೂ ಪಕ್ಷಭೇದವಿಲ್ಲದೆ ದೇಶದ ಪ್ರತಿಯೊಬ್ಬರೂ ಪಾಲ್ಗೊಳ್ಳಬಹುದು. ಪ್ರಮುಖ ಎಂದು ಮಹಿಳೆಯರು ಕೂಡ ಈ ಕ್ಷೇತ್ರದಲ್ಲಿ ಯಾವುದೇ ಸ್ಥಾನವನ್ನು ಅಲಂಕರಿಸಬಹುದು ಎಂದರು.

ಸಹಕಾರ ಕ್ಷೇತ್ರದ ಪರಿಮಿತಿ ಬಹಳ ದೊಡ್ಡದು. ಉತ್ತರ ಕರ್ನಾಟಕದ ಭಾಗದಲ್ಲಿ ಇದರ ಪಾತ್ರ ಹೆಚ್ಚಾಗಿದ್ದು, ಹಳೇ ಮೈಸೂರು ಪ್ರಾಂತ್ಯದಲ್ಲಿ ಸಹಕಾರ ಕ್ಷೇತ್ರದ ಬೆಳವಣಿಗೆ ಕಡಿಮೆ ಇದೆ ಎಂದರು. ತಾಲೂಕಿನ ಎಲ್ಲಾ ಸಹಕಾರಿ ಸಂಘಗಳು ತನ್ನದೇ ಆದಂತಹ ಒಂದು ಮೈಲಿಗಲ್ಲನ್ನು ಮುಟ್ಟಿದಂತಹ ಸಹಕಾರ ಕ್ಷೇತ್ರ ಅತ್ಯಂತ ಪವಿತ್ರವಾದ ಕ್ಷೇತ್ರ ಎಂದು ಭಾವಿಸೋಣ ಎಂದ ಅವರು, ಆ ಕ್ಷೇತ್ರದ ಗೌರವವನ್ನು ಹೆಚ್ಚಿಸುವುದು ಪ್ರತಿಯೊಬ್ಬರ ಕರ್ತವ್ಯ ಎಂದು ನಾವೆಲ್ಲರೂ ಭಾವಿಸಬೇಕಾಗುತ್ತದೆ ಎಂದು ಹೇಳಿದರು. 15 ವರ್ಷದ ಹಿಂದೆ ಡಿಸಿಸಿ ಬ್ಯಾಂಕ್ 1 ಕೋಟಿ 80 ಲಕ್ಷ ಸಾಲ ಕೊಡಿಸುವುದೇ ಒಂದು ದೊಡ್ಡ ಸಾಧನೆ ಎಂಬಂತಿತ್ತು. ಆದರೆ ಇಂದು ತಾಲೂಕಿನ ಡಿಸಿಸಿ ಬ್ಯಾಂಕ್‌ನಲ್ಲಿ 103 ಕೋಟಿ ವಹಿವಾಟು ಇದೆ. ಅದರಲ್ಲಿ ಶೇ.80 ಬಡ್ಡಿ ರಹಿತ ಸಾಲ ಇರುತ್ತದೆ. ಮಾರ್ಜಿನ್ ಅಡಿಯಲ್ಲಿ ಶೇ.20 ಸಾಲ ನೀಡುತ್ತಿದ್ದೇವೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ 5 ಲಕ್ಷದವರೆಗೆ ಬಡ್ಡಿ ರಹಿತ ಸಾಲ ಸೌಲಭ್ಯ ಕಲ್ಪಿಸಿ ಕೊಡುತ್ತಿದ್ದೇವೆ ಎಂದರು.

ಕರ್ನಾಟಕದಲ್ಲಿ 55000 ಸಹಕಾರ ಸಂಘಗಳು ಅಸ್ತಿತ್ವದಲ್ಲಿವೆ. ಭಾರತದಲ್ಲಿ 5 ಲಕ್ಷಕ್ಕೂ ಅಧಿಕ ಸಂಘಗಳು ಸ್ಥಾಪನೆಯಾಗಿವೆ ಹಾಗೂ ಗ್ರಾಮೀಣ ಪ್ರದೇಶದ ಜನರನ್ನು ಆರ್ಥಿಕವಾಗಿ ಸದೃಢಗೊಳಿಸುವಲ್ಲಿ ಸಹಕಾರ ಸಂಘಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದರು.

ಕಾರ್ಯಕ್ರಮದಲ್ಲಿ ಟಿಎಪಿಸಿಎಂಎಸ್ ಅಧ್ಯಕ್ಷ ವಿಜಯಕುಮಾರ್, ಮಂಡ್ಯ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಜೋಗಿ ಗೌಡ, ರಾಜ್ಯ ಸಹಕಾರ ಕೃಷಿ ನಿರ್ದೇಶಕ ತಿಮ್ಮರಾಯ ಗೌಡ, ಮನ್‌ಮುಲ್ ನಿರ್ದೇಶಕರಾದ ನಲ್ಲಿಗೆರೆ ಬಾಲಕೃಷ್ಣ, ಕೋಟಿ ರವಿ, ಟಿಎಪಿಸಿಎಂಎಸ್ ಕಾರ್ಯದರ್ಶಿ ಮೋಹನ್ ಕುಮಾರ್, ತುರುಬನಹಳ್ಳಿ ರಾಜೇಗೌಡ, ಮನ್‌ಮುಲ್ ಮಾಜಿ ನಿರ್ದೇಶಕ ತೂಬಿನಕೆರೆ ಜವರೇಗೌಡ, ಪುರಸಭೆ ನಿರ್ದೇಶಕ ತಿಮ್ಮಪ್ಪ ರಮೇಶ್ ಸೇರಿದಂತೆ ಹಲವಾರು ಸಂಘ ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿ ಹಾಗೂ ನಿರ್ದೇಶಕರು ಉಪಸ್ಥಿತರಿದ್ದರು.

ಕಾವೇರಿ: ಮಂಡ್ಯದಲ್ಲಿ ಮುಂದುವರೆದ ಧರಣಿ

ಮಂಡ್ಯ, ನ.15– ತಮಿಳುನಾಡಿಗೆ ನೀರು ಬಿಡುಗಡೆ ಮಾಡುವಂತೆ ಮತ್ತೆ ಆದೇಶ ಮಾಡಿರುವ ಕಾವೇರಿ ನದಿ ನೀರು ನಿಯಂತ್ರಣಾ ಸಮಿತಿ, ಪ್ರಾಧಿಕಾರ ಹಾಗೂ ಕರ್ನಾಟಕ ರಾಜ್ಯದ ಹಿತ ಕಾಪಾಡದ ಕೇಂದ್ರ– ರಾಜ್ಯ ಸರ್ಕಾರದ ವಿರುದ್ಧ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನಿರಂತರ ಧರಣಿ 72ನೇ ದಿನವೂ ಮುಂದುವರೆಯಿತು.

ನಗರದ ಸರ್‌ಎಂವಿ ಪ್ರತಿಮೆ ಎದುರು ನಿರಂತರ ಧರಣಿಯಲ್ಲಿ ಸಮಿತಿಯ ಮುಖಂಡರು ಭಾಗಿಯಾಗಿ, ಮತ್ತೆ ನೀರು ಬಿಡಲು ಆದೇಶ ಮಾಡಿರುವ ಕಾವೇರಿ ನದಿ ನೀರು ನಿಯಂತ್ರಣಾ ಸಮಿತಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಕಾವೇರಿ ಹೋರಾಟಗಾರರು 19 ರಂದು ನಡೆಯುವ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ ಸಭೆಯಲ್ಲಿ ಕರ್ನಾಟಕ ರಾಜ್ಯದ ಪರ ಆದೇಶ ಬರಲಿ ಎಂದು ಆಶಿಸಿದರು.

ಮುಖಂಡ ನಾರಾಯಣ್, ಸಮಿತಿಯ ಪ್ರಧಾನ ಕಾರ್ಯದರ್ಶಿ ಕೆ.ಬೋರಯ್ಯ, ಸಂಘಟನಾ ಕಾರ್ಯದರ್ಶಿ ಸುನಂದ ಜಯರಾಮ್, ಮಲ್ಲನಾಯಕನ ಕಟ್ಟೆ ಬೋರೇಗೌಡ, ರೈತ ಸಂಘದ ಇಂಡುವಾಳು ಚಂದ್ರಶೇಖರ್, ಮುದ್ದೇಗೌಡ, ಕೃಷ್ಣಪ್ರಕಾಶ್ ಇತರರು ಭಾಗವಹಿಸಿದ್ದರು.

ಬೇಡಿಕೆ ಈಡೇರಿಕೆಗಾಗಿ ಹೊರಗುತ್ತಿಗೆ ಪೌರಕಾರ್ಮಿಕರ ಪ್ರತಿಭಟನೆ



ಮಂಡ್ಯ, ನ.15– ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಹೊರಗುತ್ತಿಗೆ ನೌಕರರನ್ನು ನೇರ ಪಾವತಿಗೆ ಒಳಪಡಿಸಬೇಕು, ಖಾಲಿ ಇರುವ ಪೌರಕಾರ್ಮಿಕ ಹುದ್ದೆಗಳನ್ನು ಭರ್ತಿ ಮಾಡುವಂತೆ ಒತ್ತಾಯಿಸಿ ಮಂಡ್ಯದಲ್ಲಿ ಹೊರಗುತ್ತಿಗೆ ಪೌರಕಾರ್ಮಿಕರು ಬುಧವಾರ ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಹೊರಗುತ್ತಿಗೆ ಪೌರಕಾರ್ಮಿಕರ ಸಂಘದ ಆಶ್ರಯದಲ್ಲಿ ಹೊರಗುತ್ತಿಗೆ ಪೌರಕಾರ್ಮಿಕರು ನಗರಸಭೆ ಆವರಣದಿಂದ ಮೆರವಣಿಗೆ ಹೊರಟು ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಕೆಲ ಕಾಲ ಧರಣಿ ನಡೆಸಿ, ಮನವಿ ಸಲ್ಲಿಸಿದರು.

ಸ್ಥಳೀಯ ಸಂಸ್ಥೆಗಳಲ್ಲಿ ಪೌರಕಾರ್ಮಿಕರ ಜೊತೆಗೂಡಿ ಕರ್ತವ್ಯ ನಿರ್ವಹಿಸುತ್ತಿರುವ ವಾಹನ ಚಾಲಕರು, ನೀರು ಸರಬರಾಜು ಸಹಾಯಕರು, ಲೋಡರ್ಸ್, ಕ್ಲೀನರ್ಸ್, ಒಳ ಚರಂಡಿ ಕಾರ್ಮಿಕರು, ಫ್ಯಾನಿಟರಿ ಸೂಪರ್ ವೈಸರ್ ಸೇರಿ 15 ಸಾವಿರಕ್ಕೂ ಹೆಚ್ಚು ನೌಕರರು ಹೊರಗುತ್ತಿಗೆ ಆಧಾರದ ಮೇಲೆ ದುಡಿಯುತ್ತಿದ್ದಾರೆ. 2017ರಲ್ಲಿ ಪೌರ ಕಾರ್ಮಿಕರನ್ನು ಖಾಯಂಗೊಳಿಸಿ ದಾಗ ಇವರನ್ನು ಹೊರಗುತ್ತಿಗೆಯಲ್ಲಿ ಉಳಿಸಲಾಯಿತು. ಕಾಂಗ್ರೆಸ್ ಪಕ್ಷ ಹೊರ ಗುತ್ತಿಗೆ ನೌಕರರನ್ನು ನೇರಪಾವತಿಗೆ ಒಳಪಡಿಸುವುದಾಗಿ ಆಶ್ವಾಸನೆ ನೀಡಿತ್ತು, ಇದಕ್ಕೆ ಸಂಬಂಧಿಸಿದ ಕಡತ ಹಣಕಾಸು ಇಲಾಖೆಯಲ್ಲಿದ್ದು ಕಡತವನ್ನು ಸಂಪುಟ ಸಭೆಯಲ್ಲಿ ಅಂಗೀಕರಿಸಲು ಮುಂದಾಗಬೇಕು ಎಂದು ಒತ್ತಾಯಿಸಿದರು. ಗುತ್ತಿಗೆ ಪದ್ಧತಿ ಕೈ ಬಿಟ್ಟು ಎಲ್ಲಾ ನೌಕರರನ್ನು ನೇರಪಾವತಿಗೆ ತರಬೇಕು, ಖಾಲಿ ಇರುವ ಪೌರಕಾರ್ಮಿಕ ಹುದ್ದೆಗಳನ್ನು ತುರ್ತಾಗಿ ಭರ್ತಿ ಮಾಡಬೇಕು, ಅದೇ ರೀತಿ ನೀರು ಸರಬರಾಜು ಸಹಾಯಕರು, ಬೀದಿದೀಪ ನಿರ್ವಾಹಕರು ಹಾಗೂ ಸ್ಮಶಾನ ಕಾವಲುಗಾರರನ್ನು ನೇರ ಪಾವತಿಗೆ ಒಳಪಡಿಸಿ ಇವರ ಸೇವೆಯನ್ನು ಖಾಯಂಗೊಳಿಸಬೇಕು ಎಂದು ಒತ್ತಾಯಿಸಿದರು. ಸಂಘದ ರಾಜ್ಯಾಧ್ಯಕ್ಷ ಎಂ.ಬಿ. ನಾಗಣ್ಣಗೌಡ, ಜಿಲ್ಲಾಧ್ಯಕ್ಷ ಎನ್.ನಾಗರಾಜ್, ಉಪಾಧ್ಯಕ್ಷ ಪಳನಿ, ಮಂಜುನಾಥ್, ಲಕ್ಷ್ಮಿ, ಪಾರ್ವತಿ, ಶಿವು, ಡಿ.ನಾಗರಾಜ್, ಶಿವಕುಮಾರ್, ಮಹದೇವ್,ನಾಗರಾಜ್, ಲೋಕೇಶ್ ಭಾಗವಹಿಸಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಭಾರತೀನಗರ, ನ.15– ಭಾರತೀನಗರ ವ್ಯಾಪ್ತಿಯ ಕಾಡುಕೊತ್ತನಹಳ್ಳಿ ವಿರತಣಾ ಕೇಂದ್ರದಿಂದ ಯಡಗನಹಳ್ಳಿ ವರೆಗೆ ಲಿಂಕ್‌ಲೈನ್ ಕಾಮಗಾರಿ ಕೆಲಸ ನಿರ್ವಹಿಸುತ್ತಿರುವುದರಿಂದ ನ.16 ರಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ವ್ಯತ್ಯಾಯ ಉಂಟಾಗಲಿದೆ ಎಂದು ಜೆಇ ಶಿವಕುಮಾರ್ ತಿಳಿಸಿದ್ದಾರೆ. ಬೆಳಗ್ಗೆ 9 ರಿಂದ ಸಂಜೆ 6 ಗಂಟೆಯ ವರೆಗೆ ಕಾಡುಕೊತ್ತನಹಳ್ಳಿ, ಭುಜುವಳ್ಳಿ, ಕಪರೇಕೊಪ್ಪಲು, ಶೆಟ್ಟಹಳ್ಳಿ, ಅರೆಚಾಕನಹಳ್ಳಿ, ಕರಡಕೆರೆ, ಹನುಮಂತನಗರ, ಗೋಪನಹಳ್ಳಿ, ಯಡಗನಹಳ್ಳಿ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ನಾಗಮಂಗಲ, ನ.15– ತಾಲೂಕಿನ ದೇವಲಾಪುರ ಹೋಬಳಿ ಶಾಖಾ ವ್ಯಾಪ್ತಿಯಲ್ಲಿ ನ.16 ರಂದು ಕಸಲಗೆರೆ 66/11 ಕೆ.ವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆ ಕಾರ್ಯ ಹಮ್ಮಿಕೊಂಡಿರುವುದರಿಂದ ಕಸಲಗೆರೆ ಎನ್‌ಜೆವೈ, ನಾಗನಹಳ್ಳಿ ಐಪಿ, ಬಿಂಡೆನಹಳ್ಳಿ ಹಾಗೂ ದೇವಲಾಪುರ ಗ್ರಾಪಂ ವ್ಯಾಪ್ತಿಯ ಗ್ರಾಮಗಳಿಗೆ ಅಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆ ವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ ಎಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಪ್ರಕಟಣೆ ತಿಳಿಸಿದೆ.

ಭಾರತೀನಗರದ ಟಿ.ಬಿ.ರಾಜೇಶ್ ಏಷ್ಯನ್ ಡಾಡ್ಜ್ ಬಾಲ್ ಚಾಂಪಿಯನ್‌ಶಿಪ್‌ಗೆ ಭಾರತ ತಂಡದ ಕೋಚ್

ಭಾರತೀನಗರ, ನ.15– ಸಿಂಗಪುರದ ಅವರ್ ಟಂಪನೀಸ್ ಹಬ್ ಒಳಾಂಗಣ ಕ್ರೀಡಾಂಗಣದಲ್ಲಿ ನ.17 ರಿಂದ 20 ರವರೆಗೆ ನಡೆಯಲಿರುವ ಏಷ್ಯನ್ ಡಾಡ್ಜ್ ಬಾಲ್ ಚಾಂಪಿಯನ್ ಶಿಪ್‌ಗೆ ಭಾರತ ತಂಡದ ತರಬೇತುದಾರರಾಗಿ ಭಾರತೀನಗರ ಸಮೀಪದ ಕ್ಯಾತಘಟ್ಟ ಗ್ರಾಮದ ಅಂತಾರಾಷ್ಟ್ರೀಯ ಆಟಗಾರ ಟಿ.ಬಿ.ರಾಜೇಶ್ ಮುನ್ನಡೆಸಲಿದ್ದಾರೆಂದು ಜ್ಞಾನಮುದ್ರ ದೈಹಿಕ ಶಿಕ್ಷಣ ಶಿಕ್ಷಕ ಡಿ.ಮನು ತಿಳಿಸಿದ್ದಾರೆ.



ರಾಜೇಶ್ ಅವರು ಮೂಲತಃ ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕು ತಳಗವಾದಿ ಗ್ರಾಮದವರಾಗಿದ್ದು ಭಾರತೀನಗರದ ಕ್ಯಾತಘಟ್ಟ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವಾಗ ಇವರ ಕ್ರೀಡಾ ಪ್ರತಿಭೆಯನ್ನು ಗುರುತಿಸಿ ಅಂತಾರಾಷ್ಟ್ರೀಯ ಆಟಗಾರನಾಗಿ ಹೊರಹೊಮ್ಮಲು ತರಬೇತಿ ನೀಡಿ ಪ್ರೋತ್ಸಾಹಿಸಿದ ದೈಹಿಕ ಶಿಕ್ಷಣ ಶಿಕ್ಷಕ ಎಂ.ಮಲ್ಲಯ್ಯ ಕಾರಣೀಭೂತರಾಗಿದ್ದಾರೆಂದು ವಿವರಿಸಿ ತಂಡದಲ್ಲಿ ಗೆದ್ದು ಪದಕ ಗಳಿಸಲಿ ಎಂದು ಶುಭಹಾರೈಸಿದ್ದಾರೆ.

ಒಂದನೇ ಪುಟದಿಂದ

ವಿಶ್ವಕಪ್ ಫೈನಲ್‌ಗೆ ಭಾರತ

ಫೈನಲ್ ತಲುಪುವ ಆಸೆ ಭಗ್ನಗೊಂಡಿತು. ವಿಶ್ವಕಪ್ ಟೂರ್ನಿಯಲ್ಲಿ ಇದು ಭಾರತದ ಸತತ 10ನೇ ಗೆಲುವಾಗಿದೆ.

ಸೆಮಿಫೈನಲ್‌ನಲ್ಲಿ ಭಾರತ, ನ್ಯೂಜಿಲ್ಯಾಂಡ್ ಮಣಿಸಿ ಫೈನಲ್ ತಲುಪುತ್ತಿದ್ದಂತೆ ದೇಶದಾದ್ಯಂತ ಸಂಭ್ರಮ ಮನೆ ಮಾಡಿದ್ದು, ಎಲ್ಲೆಡೆ ರಾಷ್ಟ್ರಧ್ವಜ ಹಿಡಿದು ಕ್ರಿಕೆಟ್ ಅಭಿಮಾನಿಗಳು ಕುಣಿದು ಕುಪ್ಪಳಿಸಿದರಲ್ಲದೆ ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು. ಕೆಲವು ಕಡೆ ಪಟಾಕಿ ಸಿಡಿಸಿ ಹರ್ಷ ವ್ಯಕ್ತಪಡಿಸಿದರು. ಒಂದು ಹಂತದಲ್ಲಿ ಎರಡು ವಿಕೆಟ್ ನಷ್ಟಕೆ 220 ರನ್ ಗಳಿಸಿ ಸುಭದ್ರ ಸ್ಥಿತಿಯಲ್ಲಿದ್ದ ನ್ಯೂಜಿಲ್ಯಾಂಡ್ ಮಹಮ್ಮದ್ ಶಮಿ ಅವರ ಡೆಡ್ಲಿ ಬೌಲಿಂಗ್ ದಾಳಿ ಎದುರಿಸಲಾಗದೆ ತತ್ತರಿಸಿತು. ನ್ಯೂಜಿಲ್ಯಾಂಡ್ ಆರಂಭ ಉತ್ತಮವಾಗಿರಲಿಲ್ಲ. ತಂಡದ ಮೊತ್ತ 30 ಆಗಿದ್ದಾಗ ಡಿ. ಕಾನ್‌ವೇ ಅವರ ವಿಕೆಟ್ ಕಳೆದುಕೊಂಡಿತು. ಇಡೀ ಟೂರ್ನಿಯಲ್ಲಿ ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶನ ನೀಡಿದ್ದ ರಚಿನ್ ರವೀಂದ್ರ ಅವರು ಕೂಡ ಕೇವಲ 13 ರನ್ ಗಳಿಸಿ, ನಿರ್ಗಮಿಸಿದರು. ಈ ಹಂತದಲ್ಲಿ ಜೊತೆಗೂಡಿದ ನಾಯಕ ವಿಲಿಯಮ್ಸನ್ ಮತ್ತು ಮಿಚೆಲ್, ಭಾರತದ ಬೌಲಿಂಗ್ ಅನ್ನು ಧೂಳೀಪಟ ಮಾಡಿ ಮೂರನೇ ವಿಕೆಟ್ ಜೊತೆಯಾಟ ದಲ್ಲಿ 181 ರನ್‌ಗಳ ಕಾಣಿಕೆ ನೀಡಿ ತಂಡಕ್ಕೆ ಆಸರೆಯಾದರು. ಆದರೆ ತಂಡವನ್ನು ಗೆಲ್ಲಿಸುವಲ್ಲಿ ವಿಫಲರಾದರು. ವಿಲಿಯಮ್ಸನ್ 73 ಎಸೆತಗಳಲ್ಲಿ 8 ಬೌಂಡರಿ ಮತ್ತು ಒಂದು ಸಿಕ್ಸರ್ ನೆರವಿನೊಂದಿಗೆ 69 ರನ್ ಗಳಿಸಿ ಔಟಾದರು. 9 ಬೌಂಡರಿ, 7 ಸಿಕ್ಸರ್‌ಗಳೊಂದಿಗೆ ಬಿರುಸಿನ ಮತ್ತು ಆಕರ್ಷಕ ಆಟವಾಡಿದ ಮಿಚೆಲ್ 134 (119 ಎಸೆತ) ರನ್ ಗಳಿಸಿ ತಂಡವನ್ನು ಗೆಲ್ಲಿಸಲು ಏಕಾಂಗಿ ಹೋರಾಟ ನಡೆಸಿದರಾದರೂ ಸಾಧ್ಯ ವಾಗದೇ 7 ಆಟಗಾರನಾಗಿ ಔಟಾದರು.

> ವಿರಾಟ್ ಕೊಹ್ಲಿ ಅವರು ತಮ್ಮ ಏಕದಿನ ಕ್ರಿಕೆಟ್‌ನ 50ನೇ ಶತಕ ಸಿಡಿಸುವ ಮೂಲಕ ಕ್ರೀಡಾ ಮನೋಭಾವ ವ್ಯಾಖ್ಯಾನಿಸುವ ಶ್ರೇಷ್ಠತೆ ಮತ್ತು ಪರಿಶ್ರಮದ ಮನೋಭಾವ ಸಹ ಪ್ರದರ್ಶಿಸಿದ್ದಾರೆ. ಇದು ಮತ್ತೊಂದು ಮೈಲುಗಲ್ಲಾಗಿದ್ದು, ಅವರ ಅಸಾಧಾರಣ ಪ್ರತಿಭೆಗೆ ಸಾಕ್ಷಿಯಾಗಿದೆ.
> –ನರೇಂದ್ರ ಮೋದಿ, ಪ್ರಧಾನಮಂತ್ರಿ

ಅಲ್ಲಿಗೆ ನ್ಯೂಜಿ ಲ್ಯಾಂಡ್ ಹೋರಾಟ ಕೂಡ ಕೊನೆಗೊಂಡಿತು.

ಉಳಿದಂತೆ ಕಾನ್‌ವೇ 13, ಲೇಥಮ್ ಶೂನ್ಯ, ಫಿಲಿಪ್ಸ್ 41, ಚಾಪ್ಮನ್ 2, ಸ್ಯಾಂಟ್ನರ್ 9, ಟಿಮ್ ಸೌಥಿ 9, ಬೋಲ್ಟ್ 2 ಹಾಗೂ ಫರ್ಗ್ಯೂಸನ್ 6 ರನ್ ಮಾಡಿ ತಂಡಕ್ಕೆ ಅತ್ಯಲ್ಪ ಕಾಣಿಕೆ ನೀಡಿದರು. ಭಾರತದ ಪರ ಮಹಮ್ಮದ್ ಶಮಿ 7 ವಿಕೆಟ್ ಪಡೆದರೆ, ಬೂಮ್ರಾ, ಮಹಮ್ಮದ್ ಸಿರಾಜ್ ಮತ್ತು ಕುಲ್‌ದೀಪ್ ಯಾದವ್ ತಲಾ ಒಂದೊಂದು ವಿಕೆಟ್ ಹಂಚಿಕೊಂಡರು.

ಇದಕ್ಕೂ ಮುನ್ನ ಟಾಸ್ ಗೆದ್ದ ಟೀಮ್ ಇಂಡಿಯಾ ನಾಯಕ ರೋಹಿತ್ ಶರ್ಮಾ ಬ್ಯಾಟಿಂಗ್ ಆಯ್ದುಕೊಂಡರು. ಅದರಂತೆ ಮೊದಲು ಬ್ಯಾಟ್ ಮಾಡಿದ ಟೀಮ್ ಇಂಡಿಯಾ ಪರ ವಿರಾಟ್ ಕೊಹ್ಲಿ 113 ಎಸೆತಗಳಲ್ಲಿ 117 ರನ್ ಗಳಿಸುವ ಮೂಲಕ ಏಕದಿನ ಸರಣಿಯಲ್ಲಿ 50ನೇ ಶತಕ ಬಾರಿಸಿ ವಿಶ್ವ ದಾಖಲೆ ಬರೆದರು ಹಾಗೂ ಇವರಿಗೆ ಸಾಥ್ ನೀಡಿದ ಶ್ರೇಯಸ್ ಐಯ್ಯರ್ ಭರ್ಜರಿ ಸಿಕ್ಸರ್ ಮತ್ತು ಬೌಂಡರಿಗಳ ಸುರಿಮಳೆಗೈದು 70 ಎಸೆತಗಳಲ್ಲಿ 105 ರನ್ ಸಿಡಿಸಿ ಮಿಂಚಿದರು. ಆರಂಭಿಕ ಆಟಗಾರ ಶುಭ್‌ಮನ್ ಗಿಲ್ 80 ರನ್ ಗಳಿಸಿ ಅಜೇಯರಾಗಿ ಉಳಿದರು. ಭಾರತದ ಆರಂಭ ಭರ್ಜರಿಯಾಗಿತ್ತು. ಮೊದಲ ವಿಕೆಟ್‌ಗೆ 71 ರನ್‌ಗಳನ್ನು ಕಲೆಹಾಕಲಾಯಿತು. ಈ ಹಂತದಲ್ಲಿ 4 ಸಿಕ್ಸರ್ ಮತ್ತು 4 ಬೌಂಡರಿಗಳ ನೆರವಿನಿಂದ 47 ರನ್ ಮಾಡಿದ್ದ ನಾಯಕ ರೋಹಿತ್ ಶರ್ಮ ನಿರ್ಗಮಿಸಿದರು. ಕೆ.ಎಲ್. ರಾಹುಲ್ ಕೂಡ ಬಿರುಸಿನ ಆಟವಾಡಿ ಕೇವಲ 20 ಎಸೆತಗಳಲ್ಲಿ 39 ರನ್ ಗಳಿಸಿ ಅಜೇಯರಾಗಿ ಉಳಿದರು. ಈ ಶತಕಗಳ ನೆರವಿನಿಂದ ಟೀಮ್ ಇಂಡಿಯಾ 50 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 397 ರನ್ ಕಲೆಹಾಕಿತು. ಏಕದಿನ ಕ್ರಿಕೆಟ್‌ನಲ್ಲಿ ಉಭಯ ತಂಡಗಳು 118 ಪಂದ್ಯಗಳಲ್ಲಿ ಮುಖಾಮುಖಿಯಾಗಿವೆ. ಈ ವೇಳೆ ಭಾರತ ತಂಡ 60 ಪಂದ್ಯಗಳಲ್ಲಿ ಜಯ ಸಾಧಿಸಿದರೆ, ನ್ಯೂಜಿಲ್ಯಾಂಡ್ 50 ಮ್ಯಾಚ್‌ಗಳಲ್ಲಿ ಗೆಲುವು ದಾಖಲಿಸಿದೆ

ಭಾರತೀಯ ನನ್ನ ದಾಖಲೆ ಮುರಿದಿದ್ದಕ್ಕೆ ಸಂತಸವಿದೆ ವಿರಾಟ್ ಗುಣಗಾನ ಮಾಡಿದ ಸಚಿನ್

ಬೆಂಗಳೂರು: ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ ಅತೀ ಹೆಚ್ಚು ಶತಕ ಬಾರಿಸಿದ ತನ್ನ ದಾಖಲೆಯನ್ನು ಮುರಿದ ವಿರಾಟ್ ಕೊಹ್ಲಿಯನ್ನು ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಶ್ಲಾಘಿಸಿದ್ದಾರೆ. ಭಾರತೀಯನೊಬ್ಬ ನನ್ನ ದಾಖಲೆಯನ್ನು ಮುರಿದಿದ್ದಕ್ಕೆ ಸಂತೋಷವಿದೆ ಎಂದು ಅವರು ನುಡಿದಿದ್ದಾರೆ. ಈ ಬಗ್ಗೆ ಅವರು ತಮ್ಮ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ. 'ಮೊದಲ ಬಾರಿ ನಿಮ್ಮನ್ನು ಡ್ರೆಸ್ಸಿಂಗ್ ರೂಮ್‌ನಲ್ಲಿ ಭೇಟಿಯಾದಾಗ, ನೀವು ನನ್ನ ಪಾದ ಮುಟ್ಟಿದ್ದಕ್ಕೆ ಸಹ ಆಟಗಾರರು ತಮಾಷೆ ಮಾಡಿದ್ದರು. ಆ ದಿನ ನನಗೂ ನಗು ತಡೆಯಲು ಆಗಲಿಲ್ಲ. ಆದರೆ ಶೀಘ್ರವೇ ನೀವು ನಿಮ್ಮ ಉತ್ಸಾಹ ಮತ್ತು ಕೌಶಲದಿಂದಾಗಿ ನನ್ನ ಹೃದಯ ಮುಟ್ಟಿದಿರಿ. ಯುವ ಆಟಗಾರನೊಬ್ಬ 'ವಿರಾಟ್' ಆಗಿ ಬೆಳೆದಿದ್ದು ನನಗೆ ಖುಷಿ ಕೊಟ್ಟಿದೆ' ಎಂದು ಬರೆದುಕೊಂಡಿದ್ದಾರೆ. 'ಭಾರತೀಯ ಆಟಗಾರ ನನ್ನ ದಾಖಲೆ ಮುರಿದಿದ್ದು ನನಗೆ ಖುಷಿ ಕೊಟ್ಟಿದೆ. ವಿಶ್ವಕಪ್ ಸೆಮಿಫೈನಲ್‌ನಂಥಹ ದೊಡ್ಡ ಪಂದ್ಯದಲ್ಲಿ, ಅದೂ ನನ್ನ ತವರು ಮೈದಾನದಲ್ಲಿ ಇದು ದಾಖಲಾಗಿದ್ದು ನನ್ನ ಸಂತಸವನ್ನು ಹೆಚ್ಚಿಸಿದೆ' ಎಂದು ಹೇಳಿದ್ದಾರೆ. ಐಸಿಸಿ ಏಕದಿನ ವಿಶ್ವಕಪ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧದ ಪಂದ್ಯದಲ್ಲಿ ವಿರಾಟ್ ಕೊಹ್ಲಿ ತಮ್ಮ ಏಕದಿನ ಕ್ರಿಕೆಟ್‌ನ 50ನೇ ಶತಕ ಗಳಿಸಿದರು. ಇದರೊಂದಿಗೆ ಏಕದಿನ ಕ್ರಿಕೆಟ್‌ನಲ್ಲಿ 49 ಶತಕ ಬಾರಿಸಿದ್ದ ಸಚಿನ್ ತೆಂಡೂಲ್ಕರ್ ದಾಖಲೆ ತೆರೆಮರೆಗೆ ಸರಿಯಿತು.



ವಿಶ್ವ ದಾಖಲೆ 50ನೇ ಶತಕ

ಈಗ ವಿಶ್ವಕಪ್ ಟೂರ್ನಿಯಲ್ಲಿ, ಕೇವಲ 10 ಇನ್ನಿಂಗ್ಸ್‌ನಲ್ಲಿ ಕೊಹ್ಲಿ ಗರಿಷ್ಠ ರನ್ ದಾಖಲಿಸಿರುವ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ.

ಇದಷ್ಟೇ ಅಲ್ಲದೇ ಈ ವಿಶ್ವಕಪ್‌ನಲ್ಲಿ 8ನೇ ಅರ್ಧ ಶತಕ ದಾಖಲಿಸಿದ್ದು, ಟೂರ್ನಮೆಂಟ್ ಒಂದರಲ್ಲಿ ಗರಿಷ್ಠ ಅರ್ಧ ಶತಕ ದಾಖಲಿಸಿದ್ದಾರೆ. ಈ ಹಿಂದೆ ಸಚಿನ್ ತೆಂಡೂಲ್ಕರ್ 2003ರಲ್ಲಿ ಟೂರ್ನಿಯೊಂದರಲ್ಲಿ ಗರಿಷ್ಠ ಅರ್ಧ ಶತಕ ದಾಖಲಿಸಿದ್ದ ದಾಖಲೆಯನ್ನು ಕೊಹ್ಲಿ ಮುರಿದಿದ್ದರು. ಸಚಿನ್ ತೆಂಡೂಲ್ಕರ್ 2003ರ ಟೂರ್ನಿಯಲ್ಲಿ 673 ರನ್ ಗಳಿಸಿದ್ದರು. ವಿರಾಟ್ ಕೊಹ್ಲಿ ಸಾಧನೆಗೆ ಮೆಚ್ಚಿ ಸಚಿನ್ ತೆಂಡೂಲ್ಕರ್ ಅಭಿನಂದಿಸಿದ್ದಾರೆ.

ಬಿ.ವೈ.ವಿಜಯೇಂದ್ರ ಪದಗ್ರಹಣ

ಬಿ.ಎಸ್.ಯಡಿಯೂರಪ್ಪ ಅವರು ಕಾರ್ಯಕ್ರಮದ ಆರಂಭದಿಂದ ಕೊನೆಯವರೆಗೂ ಸ್ಥಳದಲ್ಲಿದ್ದು, ಪುತ್ರನಿಗೆ ಮಾರ್ಗದರ್ಶನ ಮಾಡಿದರು. ಅಧಿಕಾರ ಪದಗ್ರಹಣ ಅದ್ದೂರಿಯಾಗಿ ನಡೆಯಿತಾದರೂ ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಬಣದ ಯಾವೊಬ್ಬ ನಾಯಕ, ಮುಖಂಡರು ಸುಳಿಯಲಿಲ್ಲ. ಅಧಿಕಾರ ವಹಿಸಿಕೊಂಡು ಕಾರ್ಯಕರ್ತರನ್ನು ಉದ್ದೇಶಿಸಿ ಮಾತಾಡಿದ ಸಂದರ್ಭದಲ್ಲಿ ವಿಜಯೇಂದ್ರ ಅವರು, ಪದೇ ಪದೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಗುಣಗಾನ ಮಾಡಿದರು. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವ ಅಮಿತ್ ಷಾ, ಬಿ.ಎಲ್.ಸಂತೋಷ್ ಅವರ ಕೃಪಾಶೀರ್ವಾದದಿಂದ ಈ ಜವಾಬ್ದಾರಿ ಸಿಕ್ಕಿದೆ. ಇದಕ್ಕಾಗಿ ಎಲ್ಲಾ ರಾಷ್ಟ್ರೀಯ ನಾಯಕರಿಗೂ ಕೃತಜ್ಞತೆ ಸಲ್ಲಿಸುವುದಾಗಿ ಹೇಳಿದರು. ನಡ್ಡಾಜಿ ಅವರು, ನನ್ನ ಹೆಸರು ಪ್ರಕಟಿಸಿದ ಬಳಿಕ ಎಲ್ಲಾ ಹಿರಿಯ ನಾಯಕರ ಜತೆ ಮಾತನಾಡಿದ್ದು, ಅವರು ನನ್ನ ಬೆನ್ನು ತಟ್ಟಿದ್ದಾರೆ. ರಾಜ್ಯದ 28 ಲೋಕಸಭಾ ಕ್ಷೇತ್ರಗಳನ್ನು ಗೆಲ್ಲುವ ಮೂಲಕ ದೇಶದ ನಿಸ್ವಾರ್ಥ ಸೇವೆ ಮಾಡುವುದಾಗಿ ಹೇಳಿದರು.

ಕೆಇಎ ಪರೀಕ್ಷೆಯಲ್ಲಿ ಹಿಜಾಬ್ ಧರಿಸಲು ಅವಕಾಶ

ಬೆಂಗಳೂರು: ರಾಜ್ಯ ಸರ್ಕಾರ ಕೆಇಎ (KEA) ಪರೀಕ್ಷೆಯಲ್ಲಿ ಹಿಜಾಬ್ ಧರಿಸಿ ಪರೀಕ್ಷೆ ಬರೆಯಲು ಅವಕಾಶ ಕೊಟ್ಟಿದ್ದು, ವಿವಾದಕ್ಕೆ ಕಾರಣವಾಗಿದೆ.

ನವೆಂಬರ್ 18 ಮತ್ತು 19ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ವಿವಿಧ ನಿಗಮ–ಮಂಡಳಿಗಳ ಪರೀಕ್ಷೆಗೆ ಅಭ್ಯರ್ಥಿಗಳು ಹಿಜಾಬ್ ಧರಿಸಿ ಪರೀಕ್ಷೆ ಬರೆಯಲು ಅನುಮತಿ ನೀಡಿದೆ. ಮೊದಲ ಹಂತದ ಪರೀಕ್ಷೆ ವೇಳೆಯೂ ಹಿಜಾಬ್ ಅವಕಾಶ ಕೊಟ್ಟಿದ್ದ ಕೆಇಎ ನಿರ್ಧಾರಕ್ಕೆ ಹಿಂದೂಪರ ಸಂಘಟನೆಗಳು ವಿರೋಧ ವ್ಯಕ್ತಪಡಿಸಿದ್ದವು. ಪ್ರತಿಭಟನೆ ಕೂಡ ನಡೆಸಿದ್ದವು. ಈ ಎಲ್ಲಾ ವಿರೋಧದ ಬಳಿಕವೂ ಎರಡನೇ ಹಂತದ ನಿಗಮ–ಮಂಡಳಿ ಪರೀಕ್ಷೆಗೆ ಕೆಇಎ ಹಿಜಾಬ್ ಧರಿಸಿ ಪರೀಕ್ಷೆ ಬರೆಯಲು ಅವಕಾಶ ನೀಡಿದೆ.

ಈ ಸಂಬಂಧ ಕೆಇಎ ವೆಬ್‌ಸೈಟ್‌ನಲ್ಲಿ ಮಾಹಿತಿ ನೀಡಲಾಗಿದೆ. ಹಿಜಾಬ್ ಧರಿಸುವ ಅಭ್ಯರ್ಥಿಗಳು ಪರೀಕ್ಷೆ ಪ್ರಾರಂಭವಾಗುವ ಎರಡು ಗಂಟೆ ಮೊದಲು ಪರೀಕ್ಷಾ ಕೇಂದ್ರಕ್ಕೆ ಹಾಜರಾಗಿ ತಪಾಸಣೆ ಮಾಡಿಸಿಕೊಳ್ಳುವಂತೆ ಕೆಇಎ ಸೂಚನೆ ನೀಡಿದೆ. ಇನ್ನು ನಿಗಮ–ಮಂಡಳಿ ಪರೀಕ್ಷೆಗೆ ಟಫ್ ಡ್ರೆಸ್ ಕೋಡ್ ಜಾರಿ ಮಾಡಿದ್ದರೂ ಹಿಜಬ್‌ಗೆ ಅವಕಾಶ ಕೊಟ್ಟಿರುವುದು ಕೆಲವು ಹಿಂದೂ ಸಂಘಟನೆಗಳ ಆಕ್ರೋಶಕ್ಕೆ ಕಾರಣವಾಗಿದೆ.

ಸರ್ಕಾರದ ನಡೆಗೆ ಭಾರಿ ಆಕ್ರೋಶ



ಫೈಲ್ ಚಿತ್ರ

ಕೆಇಎ ಡ್ರೆಸ್ ಕೋಡ್ ರೂಲ್ಸ್: ಪರೀಕ್ಷೆಯ ದಿನದಂದು ತುಂಬುತೋಳಿನ ಶರ್ಟ್ ಧರಿಸುವಂತಿಲ್ಲ, ಅಭ್ಯರ್ಥಿಗಳಿಗೆ ಜೇಬು ಇಲ್ಲದ ಅಥವಾ ಕಡಿಮೆ ಜೇಬಿರುವ ಪ್ಯಾಂಟ್ ಧರಿಸಿ ಪರೀಕ್ಷೆಗೆ ಹಾಜರಾಗಲು ಸೂಚನೆ, ಕುರ್ತಾ ಪೈಜಾಮ, ಜೀನ್ಸ್ ಪ್ಯಾಂಟ್ ಧರಿಸಿ ಪರೀಕ್ಷೆಗೆ ಹಾಜರಾಗಲು ಅವಕಾಶ ಇರುವುದಿಲ್ಲ. ಧರಿಸುವ ಬಟ್ಟೆಗಳು ಹಗುರವಾಗಿದ್ದು, ದೊಡ್ಡ ಎಂಬ್ರಾಯಿಡರಿ, ಜಿಪ್ ಪಾಕೆಟ್‌ಗಳು, ದೊಡ್ಡ ಬಟನ್‌ಗನ್ನು ಹೊಂದಿರಬಾರದು, ಅಭ್ಯರ್ಥಿಗಳು ಶೂ ಹಾಕಿಕೊಂಡು ಪರೀಕ್ಷೆಗೆ ಹಾಜರಾಗುವುದನ್ನು ಕಟ್ಟುನಿಟ್ಟಾಗಿ ನಿಷೇಧ, ತೆಳುವಾದ ಅಡಿಭಾಗ ಇರುವ ಚಪ್ಪಲಿಗಳನ್ನು ಧರಿಸುವುದು, ಮಹಿಳಾ ಅಭ್ಯರ್ಥಿಗಳಿಗೆ ಮಂಗಳಸೂತ್ರ ಮತ್ತು ಕಾಲುಂಗುರ ಹೊರತುಪಡಿಸಿ ಯಾವುದೇ ಅಭ್ಯರ್ಥಿಯು ಕುತ್ತಿಗೆಯ ಸುತ್ತ ಲೋಹದ ಆಭರಣ ಧರಿಸು ವುದು, ಅಥವಾ ಕಿವಿಯೋಲೆ, ಉಂಗುರ, ಕಡಗ ಧರಿಸುವುದನ್ನು ನಿರ್ಬಂಧಿಸಲಾಗಿದೆ, ಬ್ಲೂಟೂತ್ ಸಾಧನ ಬಳಕೆಗೆ ಆಸ್ಪದವಾಗಬಾರದೆಂದು ತಲೆಯ ಮೇಲೆ ಟೋಪಿ ಅಥವಾ ಯಾವುದೇ ವಸ್ತ್ರ ಧರಿಸುವುದನ್ನು, ಅಂತೆಯೇ, ಬಾಯಿ, ಕಿವಿ ಹಾಗೂ ತಲೆ ಮುಚ್ಚುವ ರೀತಿಯಲ್ಲಿ ಯಾವುದೇ ವಸ್ತ್ರ ಅಥವಾ ಸಾಧನ ಧರಿಸುವುದನ್ನು ನಿಷೇಧಿಸಲಾಗಿದೆ, ಯಾವುದೇ ರೀತಿಯ ಮಾಸ್ಕ್ ಸಹ ಧರಿಸುವಂತಿಲ್ಲ.

ಕಾಶ್ಮೀರದಲ್ಲಿ 300 ಅಡಿ ಆಳದ ಕಂದಕಕ್ಕೆ ಉರುಳಿ ಬಿದ್ದ ಬಸ್

ಭೀಕರ ಅಪಘಾತದಲ್ಲಿ 38 ಮಂದಿ ಸಾವು



ದೋಡಾ: ಜಮ್ಮು ಮತ್ತು ಕಾಶ್ಮೀರದ ದೋಡಾ ಜಿಲ್ಲೆಯಲ್ಲಿ ಬುಧವಾರ ಪ್ರಯಾಣಿಕರ ಬಸ್ಸೊಂದು ರಸ್ತೆಯಿಂದ ಸ್ಕಿಡ್ ಆಗಿ ಸುಮಾರು 300 ಅಡಿ ಆಳದ ಕಮರಿಗೆ ಉರುಳಿ ಬಿದ್ದಿದ್ದು, ಭೀಕರ ಅಪಘಾತದಲ್ಲಿ 38 ಮಂದಿ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸಾವಿನ ಸಂಖ್ಯೆ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಇಂದು ಬೆಳಗ್ಗೆ ಬಟೋಟೆ–ಕಿಶ್ತ್ವಾರ್ ರಾಷ್ಟ್ರೀಯ ಹೆದ್ದಾರಿಯ ಟ್ರುಂಗಲ್–ಅಸ್ಸಾರ್ ಬಳಿ ಈ ದುರ್ಘಟನೆ ನಡೆದಿದ್ದು, ಬಸ್‌ನಲ್ಲಿ 55 ಪ್ರಯಾಣಿಕರು ಇದ್ದರು ಎನ್ನಲಾಗಿದೆ. ಸ್ಥಳೀಯರಲ್ಲದೆ ಪೊಲೀಸರು ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪಡೆ(ಎಸ್‌ಡಿಆರ್‌ಎಫ್) ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿಸಿಕೊಂಡಿದ್ದು, ಗಾಯಗೊಂಡ ಪ್ರಯಾಣಿಕರನ್ನು ಆಸ್ಪತ್ರೆಗೆ ರವಾನಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಅಪಘಾತದ ಸ್ಥಳದಲ್ಲಿರುವ ದೋಡಾ ಜಿಲ್ಲಾಧಿಕಾರಿ ಶ್ ಹರ್ವಿಂದರ್ ಸಿಂಗ್ ಅವರು ನೀಡಿರುವ ಮಾಹಿತಿಯ ಪ್ರಕಾರ, ಭೀಕರ ಅಪಘಾತದಲ್ಲಿ ದುರದೃಷ್ಟವಶಾತ್ 38 ಜನ ಸಾವನ್ನಪ್ಪಿದ್ದಾರೆ ಮತ್ತು 17 ಮಂದಿ ಗಾಯಗೊಂಡಿದ್ದಾರೆ. ಅವರಲ್ಲಿ 6 ಮಂದಿಯ ಸ್ಥಿತಿ ಚಿಂತಾಜನಕವಾಗಿದೆ" ಎಂದು ಕೇಂದ್ರ ಸಚಿವ ಡಾ. ಜಿತೇಂದ್ರ ಸಿಂಗ್ ಅವರು ಹೇಳಿದ್ದಾರೆ. ದುರ್ಘಟನೆಗೆ ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ತೀವ್ರ ಸಂತಾಪ ಸೂಚಿಸಿದ್ದಾರೆ.

ದೋಡಾದ ಅಸ್ಸಾರ್‌ನಲ್ಲಿ ಸಂಭವಿಸಿದ ಬಸ್ ಅಪಘಾತದಲ್ಲಿ ಸಂಭವಿಸಿರುವ ಜೀವ ಹಾನಿಯಿಂದ ತೀವ್ರ ನೋವಾಗಿದೆ ದುಃಖತಪ್ತ ಕುಟುಂಬಗಳಿಗೆ ನನ್ನ ಹೃತ್ಪೂರ್ವಕ ಸಂತಾಪಗಳು ಮತ್ತು ಅಪಘಾತದಲ್ಲಿ ಗಾಯಗೊಂಡವರು ಶೀಘ್ರವಾಗಿ ಚೇತರಿಸಿಕೊಳ್ಳಬೇಕೆಂದು ಹಾರೈಸುತ್ತೇನೆ. ಸಂತ್ರಸ್ತರಿಗೆ ಅಗತ್ಯವಿರುವ ಎಲ್ಲಾ ನೆರವು ಒದಗಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಜೆಡಿಎಸ್ ಕಚೇರಿ ಗೋಡೆ ಮೇಲೆ ವಿದ್ಯುತ್ ಕಳ್ಳ ಕುಮಾರಸ್ವಾಮಿ ಪೋಸ್ಟರ್



ಬೆಂಗಳೂರು: ವಿದ್ಯುತ್ ಕಳವು ಆರೋಪದಲ್ಲಿ ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ ಅವರ ವಿರುದ್ಧ ಎಫ್‌ಐಆರ್ ದಾಖಲಾದ ಬೆನ್ನಲ್ಲೇ ಜೆಡಿಎಸ್ ಕಚೇರಿ ಜೆಪಿ ಭವನಕ್ಕೆ 'ಕರೆಂಟ್ ಕಳ್ಳ ಕುಮಾರಸ್ವಾಮಿ', 'ವಿದ್ಯುತ್ ಕಳ್ಳ ಕುಮಾರಸ್ವಾಮಿ' ಎನ್ನುವ ಬರಹವುಳ್ಳ ಅವಹೇಳನಕಾರಿ ಪೋಸ್ಟರ್ ಅಂಟಿಸಿರುವುದು ಕಂಡುಬಂದಿದೆ.

ಮನೆ ದೀಪಾಲಂಕಾರಕ್ಕೆ ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದ ಆರೋಪದಲ್ಲಿ ಮಾಜಿ ಸಿಎಂ ಮೇಲೆ ಬೆಸ್ಕಾಂ ಜಾಗೃತ ದಳ ಪ್ರಕರಣದ ದಾಖಲಿಸಿಕೊಂಡಿತ್ತು. ಹೀಗಾಗಿ ಎಚ್‌ಡಿಕೆ ಅವರನ್ನು ವ್ಯಂಗ್ಯವಾಡಲು ಕಿಡಿಗೇಡಿಗಳು ಪೋಸ್ಟರ್ ಅಂಟಿಸಿದ್ದಾರೆ. ಕುಮಾರಸ್ವಾಮಿ ಕರೆಂಟ್ 200 ಯುನಿಟ್ ಮಾತ್ರ ಉಚಿತ ನೆನಪಿಟ್ಟುಕೊಳ್ಳಿ, ಹೆಚ್ಚು ಕದಿಯಬೇಡಿ. ಕರೆಂಟ್ ಕದ್ದರೂ ಎಚ್‌ಡಿಕೆ ಪ್ರಾಮಾಣಿಕತೆಯನ್ನು ಮೆಚ್ಚಲೇಬೇಕು ಎಂದು ಪೋಸ್ಟರ್‌ಗಳಲ್ಲಿ ಬರೆಯಲಾಗಿದೆ. ಈ ನಡುವೆ ಪೋಸ್ಟರ್ ಕುರಿತು ಜೆಡಿಎಸ್ ಕಾರ್ಯಕರ್ತರು ಆಕ್ರೋಶ ಹೊರಹಾಕಿದ್ದು, ವಿಚಾರ ತಿಳಿಯುತ್ತಿದ್ದಂತೆಯೇ ಸ್ಥಳಕ್ಕಾಗಮಿಸಿದ ಪೊಲೀಸರು ಪೋಸ್ಟರ್ ತೆಗೆಯುವ ಕೆಲಸ ಮಾಡಿದರು.

ಕುಮಾರಸ್ವಾಮಿ ವಿರುದ್ಧ ಈಗಾಗಲೇ ಪ್ರಕರಣಕ್ಕೆ ಸಂಬಂಧಿಸಿ ಜಯನಗರದ ಬೆಸ್ಕಾಂ ಜಾಗೃತ ದಳದ ಅಧಿಕಾರಿಗಳು ಭಾರತೀಯ ವಿದ್ಯುತ್ ಕಾಯ್ದೆ 135ರ ಅಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಎಫ್‌ಐಆರ್ ದಾಖಲಾಗಿದೆ. ಕುಮಾರಸ್ವಾಮಿ ಅವರ ನಿವಾಸಕ್ಕೆ ಅಕ್ರಮವಾಗಿ ವಿದ್ಯುತ್ ಬಳಸಿದ ವಿಚಾರ ರಾಜ್ಯ ರಾಜಕೀಯದಲ್ಲಿ ಕೋಲಾಹಲಕ್ಕೆ ಕಾರಣವಾಗಿದೆ. ಈ ವಿಚಾರವಾಗಿ ಕುಮಾರಸ್ವಾಮಿ ಈಗಾಗಲೇ ಸ್ಪಷ್ಟನೆ ನೀಡಿದ್ದು, ತಮ್ಮ ಅರಿವಿಗೆ ಬಾರದೆ ಪ್ರಮಾದವಾಗಿದೆ. ಬೆಸ್ಕಾಂ ಅಧಿಕಾರಿಗಳ ತನಿಖೆಗೆ ಸಹಕರಿಸುವೆ. ದಂಡ ಪಾವತಿಸುವೆ ಎಂದು ಹೇಳಿದ್ದಾರೆ.



ಮೈಸೂರಿನ ಪಡುವಾರಹಳ್ಳಿ (ವಿನಾಯಕನಗರ) ಜೆಡಿಎಸ್ ಕಾರ್ಪೋರೇಟರ್ ಶ್ರೀಮತಿ ನಮ್ರತಾ ರಮೇಶ್ ಅವರು ದೀಪಾವಳಿ ದಿನದಂದು ಪೌರಕಾರ್ಮಿಕರಿಗೆ ತಲಾ 5 ಸಾವಿರ ರೂ. ನಗದು ಸಹಾಯದೊಂದಿಗೆ ಅಭಿನಂದನೆ ಸಲ್ಲಿಸಿದರು. ಈ ವೇಳೆ ಗ್ರಾಮದ ಮುಖಂಡರಾದ ಮೆಲ್ಲಹಳ್ಳಿ ಮಹದೇವಸ್ವಾಮಿ, ರಾಮಣ್ಣ, ಭೈರಪ್ಪ, ಸ್ವಾಮಣ್ಣ ಇತರರನ್ನು ನಮ್ರತಾ ರಮೇಶ್ ಅಭಿನಂದಿಸಿದರು.

ಒಂದನೇ ಪುಟದಿಂದ

ಪ್ರಸಕ್ತ ಅವಧಿ ಇಂದಿಗೆ ಅಂತ್ಯ

ಸ್ಪಂದಿಸುವವರಾಗಿದ್ದಾರೆ ಎಂದು ಶ್ಲಾಘಿಸಿದರು. ನಗರ ಪಾಲಿಕೆ ಇತಿಹಾಸದಲ್ಲಿ ಮೇಯರ್ ಆಗಿ ಎರಡು ಬಾರಿ ದಸರಾ ಮಹೋತ್ಸವದಲ್ಲಿ ಭಾಗವಹಿಸುವ, ತಾಯಿ ಚಾಮುಂಡೇಶ್ವರಿ ಉತ್ಸವಮೂರ್ತಿಗೆ ಪುಷ್ಪಾರ್ಚನೆ ಮಾಡುವ ಅವಕಾಶ ದೊರೆತದ್ದು, ಚಾಮುಂಡೇಶ್ವರಿಯ ಕೃಪೆ ಹಾಗೂ ನನ್ನ ಅದೃಷ್ಟವೆಂದ ಮೇಯರ್ ಶಿವಕುಮಾರ್, ಮೈಸೂರಿನ ಪಾರಂಪರಿಕತೆ ಉಳಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದ್ದು, ಮುಂದಿನ ದಿನಗಳಲ್ಲಿಯೂ ನಗರದ ಅಭಿವೃದ್ಧಿಗಾಗಿ ಕೊಡುಗೆ ನೀಡುವಂತೆ ಕೋರಿದರು.

ಅನುದಾನ ಹೆಚ್ಚಿಸಲು ಮನವಿ: ನಗರಪಾಲಿಕೆ ಆಡಳಿತ ಪಕ್ಷದ ನಾಯಕ ಮಾ.ವಿ. ರಾಮ್ ಪ್ರಸಾದ್ ಮಾತನಾಡಿ, ಸರ್ಕಾರದಿಂದ ಮುಂದಿನ ದಿನಗಳಲ್ಲಾದರೂ ನಗರಪಾಲಿಕೆಗೆ ನೀಡುವ ಅನುದಾನ ಹೆಚ್ಚಾಗಬೇಕು. ಹಾಗೆಯೇ ನಗರಗಳ ಅಭಿವೃದ್ಧಿಗಾಗಿ ವಿಶೇಷ ಅನುದಾನಗಳನ್ನು ನೀಡಬೇಕು ಎಂದು ಒತ್ತಾಯಿಸಿದರು. ಲಕ್ಷಾಂತರ ಜನರಿರುವ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ನಗರಪಾಲಿಕೆ ಸದಸ್ಯರಾಗುವ ಅವಕಾಶ ನಮಗೆ ಸಿಕ್ಕಿರುವುದೇ ದೊಡ್ಡದು. ನಮ್ಮನ್ನು ಈ ಸ್ಥಾನಕ್ಕೆ ಕಳುಹಿಸಿದ ಜನರಿಗೆ ಸಾಧ್ಯವಾದಷ್ಟು ಸೇವೆ ಮಾಡಿದ್ದೇವೆ ಎಂಬ ತೃಪ್ತಿ ಇದೆ. ಯಾವ ಸದಸ್ಯರು ಕೂಡ ಕೆಟ್ಟ ಹೆಸರು ತಂದುಕೊಳ್ಳದೆ ಜನರ ಕಷ್ಟಕ್ಕೆ ಸ್ಪಂದಿಸಿದ್ದಾರೆ. ಹಾಗೆಯೇ ಮಹಿಳೆಯರು ಪಾಲಿಕೆ ಸದಸ್ಯರಾದರೆ, ಅವರ ಗಂಡಂದಿರು ಸದಸ್ಯರ ಕೆಲಸ ಮಾಡುತ್ತಾರೆ ಎಂಬ ಮಾತುಗಳು ದೂರಾಗುವಂತೆ ಮಹಿಳಾ ಸದಸ್ಯರು ಕೆಲಸ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ತೃಪ್ತಿಯಿಂದ ಕೆಲಸ ಮಾಡಿದ್ದೇವೆ: ಪಾಲಿಕೆ ಸದಸ್ಯೆ ಪ್ರೇಮಾ ಶಂಕರೇಗೌಡ ಮಾತನಾಡಿ, ಪಾಲಿಕೆ 65 ಸದಸ್ಯರು ಅನ್ಯೋನ್ಯತೆಯಿಂದ 5 ವರ್ಷ ಪೂರೈಸಿದ್ದೇವೆ. ವೈಯಕ್ತಿಕವಾಗಿ ನಾನು ಮಾಡಿರುವ ಕೆಲಸದಲ್ಲಿ ತೃಪ್ತಿ ಇದೆ. ಕೊರೊನಾ ಸಂದರ್ಭದಲ್ಲಿ ಫುಡ್ ಕಿಟ್‌ಗಳ ವಿತರಣೆ ವಿಶೇಷ ಸೇವಾ ಅನುಭವ ನೀಡಿತು. ಅಚ್ಚಳಿಯದ ನೆನಪು ತಂದಿದೆ ಎಂದು ಸ್ಮರಿಸಿದರು.

ಅಭಿವೃದ್ಧಿ ಪೂರಕ ಯೋಜನೆಗಳ ಜಾರಿ...

ಅನುಕೂಲವಾಗಿದೆ. ಪಾಲಿಕೆ ವಲಯ ಕಚೇರಿಗಳು ಸ್ವಂತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸಲು ಹೊಸ ಕಟ್ಟಡಗಳ ನಿರ್ಮಾಣ ಕಾರ್ಯವಾಗಿದೆ. ಕುಡಿಯುವ ನೀರಿನ ಸಮಸ್ಯೆ ಜೊತೆಗೆ ಯುಜಿಡಿ ಸಮಸ್ಯೆಗಳಿಗೆ ಬಹುತೇಕ ಕಡಿವಾಣ ಹಾಕಲಾಗಿದೆ. 500 ಕ್ಕೂ ಹೆಚ್ಚು ಕಲಾವಿದರಿಗೆ ಪ್ರೋತ್ಸಾಹ ಧನ ನೀಡುವುದರ ಜೊತೆಗೆ ಸಾಕಷ್ಟು ರಸ್ತೆಗಳ ಅಭಿವೃದ್ಧಿ ಮಾಡಲಾಗಿದೆ ಎಂದು ವಿವರಿಸಿದರು.

ಪಾರಂಪರಿಕ ಕಮಾನುಗಳ ಸಂರಕ್ಷಣೆಗೆ ಮನವಿ: ಮೈಸೂರಿನಲ್ಲಿರುವ ಪಾರಂಪರಿಕ ಕಮಾನುಗಳ ಸಂರಕ್ಷಣೆಗೆ ವಿಶೇಷ ಅನುದಾನ ನೀಡುವಂತೆ ಈ ಹಿಂದಿನ ಬಿಜೆಪಿ ಸರ್ಕಾರಕ್ಕೆ ಮನವಿ ಮಾಡಿದ್ದರಿಂದಾಗಿ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಬಜೆಟ್‌ನಲ್ಲಿ ಅನುದಾನ ಘೋಷಣೆ ಮಾಡಿದ್ದರು. ಆದರೆ ಹಣ ಬಿಡುಗಡೆಯಾಗಿರಲಿಲ್ಲ. ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರಕ್ಕೆ ಅನುದಾನ ಬಿಡುಗಡೆ ಮಾಡುವಂತೆ ಪತ್ರ ಬರೆಯಲಾಗಿದ್ದು, ಬಿಡುಗಡೆ ಮಾಡುವ ಭರವಸೆ ನೀಡಿದ್ದಾರೆ. 2.70 ಕೋಟಿ ರೂ.ವೆಚ್ಚದಲ್ಲಿ ನಗರದಲ್ಲಿನ ಪ್ರಮುಖ ನಾಲ್ಕು ಪಾರಂಪರಿಕ ಕಮಾನುಗಳ ರಕ್ಷಣೆ ಹಾಗೂ ಅಭಿವೃದ್ಧಿಗೆ ಜಿಲ್ಲಾಧಿಕಾರಿಗಳು ಅನುಮತಿ ನೀಡಿದ್ದಾರೆ ಎಂದು ತಿಳಿಸಿದರು.

■ ಸರಿಯಾಗಿ ಆಡಳಿತ ನಡೆಸಲು ಸಾಧ್ಯವಾಗಿಲ್ಲ...

ನಗರಪಾಲಿಕೆಯ ಕಳೆದ 5 ವರ್ಷದಲ್ಲಿ ಸರಿಯಾಗಿ ಆಡಳಿತ ನಡೆಸಲು ಸಾಧ್ಯವಾಗಿಲ್ಲ. ಆರಂಭ 2 ವರ್ಷ ಕೊರೊನಾ, ನಂತರ ಒಂದೂವರೆ ವರ್ಷ ರಾಜ್ಯ ಸರ್ಕಾರದ ವೈಫಲ್ಯದಿಂದಾಗಿ ಸರಿಯಾದ ಸಮಯಕ್ಕೆ ಮೇಯರ್ ಚುನಾವಣೆ, ಸ್ಥಾಯಿ ಸಮಿತಿಗಳ ಚುನಾವಣೆ ನಡೆಯದೆ ಕೆಲಸ ಮಾಡಲು ಆಗಲಿಲ್ಲ. ಕಡೆಯ ಒಂದೂವರೆ ವರ್ಷದಲ್ಲಿ ಶಕ್ತಿ ಮೀರಿ ಕೆಲಸ ಮಾಡಿದ್ದರಿಂದಾಗಿ ಮೈಸೂರು ನಗರದ ಅಭಿವೃದ್ಧಿಗೆ ಒಂದಷ್ಟು ಕೊಡುಗೆ ನೀಡಲು ಸಾಧ್ಯವಾಯಿತು. ಮುಂದಿನ ದಿನಗಳಲ್ಲಿ ಅವಕಾಶ ದೊರೆತರೆ ಇನ್ನಷ್ಟು ಒಳ್ಳೆಯ ಕೆಲಸಗಳನ್ನು ಮಾಡಬಹುದು.

–ಅಯೂಬ್ ಖಾನ್, ವಿರೋಧ ಪಕ್ಷದ ನಾಯಕ, ಮೈಸೂರು ನಗರಪಾಲಿಕೆ

■ ನೀವುಗಳೇ ಮತ್ತೆ ಸದಸ್ಯರಾಗಿ ಬನ್ನಿ...

ಮೈಸೂರು ನಗರಪಾಲಿಕೆಗೆ ಬಂದ ಕಡಿಮೆ ಸಮಯದಲ್ಲಿ ಎಲ್ಲರೊಂದಿಗೆ ಹೊಂದಿಕೊಳ್ಳಲು ಸಾಧ್ಯವಾಗಿಲ್ಲ. ಹೊಸಬರಿಗೆ ಕಲಿಸುವ ಬದಲು ನೀವುಗಳು ಮತ್ತೆ ಚುನಾವಣೆಗೆ ಸ್ಪರ್ಧಿಸಿ ನೀವೇ ಬಂದರೆ, ಆಡಳಿತ ನಡೆಸುವುದು ಇನ್ನೂ ಸುಲಭ ವಾಗುತ್ತದೆ. ನೀವು ಹೋಗುವುದು ನಷ್ಟವೇ ಹೊರತು ಲಾಭವಲ್ಲ. ಅಧಿಕಾರ ಮುಕ್ತಾಯವಾಯಿತೆಂದು ಮಂಕಾಗುವುದು ಬೇಡ. ಆಗಾಗ ಸಲಹೆ–ಸೂಚನೆಗಳನ್ನು ನೀಡಿ.

–ಅಸಾದ್ ಉರ್ ರೆಹಮಾನ್ ಷರೀಫ್, ಪಾಲಿಕೆ ಆಯುಕ್ತ

■ ವಿದ್ಯಾರ್ಥಿಯಂತೆ ಕಲಿತಿದ್ದೇವೆ...

ನಗರ ಪಾಲಿಕೆ ಸದಸ್ಯರಾದಾಗಿನಿಂದ ವಿದ್ಯಾರ್ಥಿಗಳಂತೆ ನಾವುಗಳು ಕೂಡ ಕಲಿತ್ತಿದ್ದೇವೆ. ಇದೊಂದು ಭಾವನಾತ್ಮಕ ಸನ್ನಿವೇಶವಾಗಿದ್ದು, ಪಾಲಿಕೆ ಸದಸ್ಯೆಯಾಗಿ, ಉಪ ಮೇಯರ್ ಆಗಿರುವುದು ನನ್ನ ಸೌಭಾಗ್ಯ. ಪಾಲಿಕೆಯಿಂದ ಕೈಗೊಂಡ ಪ್ರವಾಸ ಜೀವನ ಹೊಸ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟಂತಾಯಿತು.

– ಡಾ.ರೂಪ, ಉಪ ಮೇಯರ್

■ ಶಾಶ್ವತ 'ಮಾಜಿ' ಬಿರುದು...

ನಗರಪಾಲಿಕೆಯಲ್ಲಿ 5 ವರ್ಷ ಕೆಲಸ ಮಾಡಲು ಅವಕಾಶ ನೀಡಿದ ಜನತೆ ಕೃತಜ್ಞತೆ ಸಲ್ಲಿಸುತ್ತೇನೆ. ಹಾಗೆಯೇ ನಾವುಗಳು 'ಮಾಜಿ' ಎಂಬ ಶಾಶ್ವತ ಬಿರುದು ಪಡೆದು ನಿರ್ಗಮಿಸುತ್ತಿದ್ದೇವೆ. 'ಮಾಜಿ' ಎಂಬುದನ್ನು ಯಾರಿಂದಲೂ ಅಳಿಸಲು ಸಾಧ್ಯವಿಲ್ಲ. ಹಾಗೆಯೇ ಸಾಂಸ್ಕೃತಿಕ ನಗರಿ ಮೈಸೂರು ಸ್ವಚ್ಛತೆಯಲ್ಲಿ ಮತ್ತೊಮ್ಮೆ ನಂಬರ್ ಓನ್ ಆಗಬೇಕು. ಇಂದೋರ್ ಪ್ರವಾಸ ಸಾಕಷ್ಟು ಕಲಿಸಿದ್ದು, ಸ್ವಚ್ಛತೆಗೆ ಮೊದಲ ಆದ್ಯತೆ ನೀಡಿದರೆ ಸಾಧ್ಯವಾಗಲಿದೆ. **– ಶಾಂತಕುಮಾರಿ, ಸದಸ್ಯೆ**

■ ಜನರ ಸಂಪರ್ಕ ಬಿಡಬೇಡಿ...

ಪಾಲಿಕೆ ಸದಸ್ಯರಾಗಲೂ ಅವಕಾಶ ಮಾಡಿಕೊಟ್ಟ ಜನರ ಸಹಕಾರವನ್ನು ಎಂದಿಗೂ ಮರೆಯಬೇಡಿ ಹಾಗೂ ಅವರೊಂದಿಗಿನ ಸಂಪರ್ಕ ಕಳೆದುಕೊಳ್ಳಬೇಡಿ. ಜನತೆಯೊಂದಿಗಿನ ಸಂಪರ್ಕವಿದ್ದರೆ ಒಂದು ಬಾರಿಯಷ್ಟೇ ಅಲ್ಲ, ಮೂರ್‍ನಾಲ್ಕು ಬಾರಿ ಪಾಲಿಕೆ ಸದಸ್ಯರಾಗಿ ಆಯ್ಕೆಯಾಗಬಹುದು. ಅಧಿಕಾರ ಇಲ್ಲದಿದ್ದರೂ ಜನರ ಕೆಲಸ ಮಾಡಿಕೊಡಿ. **–ಆರೀಫ್ ಹುಸೇನ್, ಸದಸ್ಯ**

■ ಒತ್ತಡದಲ್ಲೂ ಜನಸೇವೆ... ಆರೋಗ್ಯದ ಕಡೆ ಗಮನ...

ನಗರಪಾಲಿಕೆ ಸದಸ್ಯರ ಕೆಲಸ ಸದಾ ಒತ್ತಡದಲ್ಲಿ ನಡೆಯಲಿದೆ. ವಾರ್ಡ್‌ನ ಪ್ರತಿಯೊಂದು ಸಮಸ್ಯೆಗೂ ಸ್ಪಂದಿಸುವುದು ನಮ್ಮ ಕರ್ತವ್ಯವಾಗಿದೆ. ಜನರ ಕೆಲಸದ ಜೊತೆಗೆ ನಮ್ಮ ಆರೋಗ್ಯದ ಕಡೆಗೂ ಗಮನ ನೀಡುವುದು ಅವಶ್ಯವಾಗಿದೆ. ಆಡಳಿತ ನಡೆಸುವಾಗ ಆರೋಪ, ಕೂಗಾಟ ಸಾಮಾನ್ಯ. ತದನಂತರ ಎಲ್ಲರೂ ಒಂದಾಗಿರಬೇಕು. **– ಎಸ್‌ಬಿಎಂ ಮಂಜು, ಸದಸ್ಯ**

■ ಕೌನ್ಸಿಲ್‌ನಲ್ಲಿ ಮಹಿಳಾ ಸದಸ್ಯರಿಗೆ ಸಮಾನ ಅವಕಾಶಬೇಕು...

ನಗರಪಾಲಿಕೆಯ ಕೌನ್ಸಿಲ್ ಸಭೆಯಲ್ಲಿ ಮಹಿಳಾ ಸದಸ್ಯರು ಮಾತನಾಡಲು ಅವಕಾಶ ನೀಡುವುದಿಲ್ಲ. ಅವಕಾಶಕ್ಕಾಗಿ ಗೋಗರೆಯಬೇಕು. ಮುಂದಿನ ದಿನಗಳಲ್ಲಾದರೂ ಮಹಿಳಾ ಸದಸ್ಯರಿಗೆ ಪುರುಷರಷ್ಟೇ ಸಮಾನ ಅವಕಾಶ ನೀಡಬೇಕು. ಹಾಗೆಯೇ ನಮ್ಮ ಸೇವಾ ಕಾರ್ಯಗಳು ಹರಿಯುವ ನೀರಿನಂತೆ ಸಾಗುತ್ತಿರಬೇಕು.

– ಶೋಭಾ ಸುನೀಲ್, ಸದಸ್ಯೆ

ಕಾಲೇಜು ಉಪನ್ಯಾಸಕನ ಬಂಧನ

ಆಸ್ತಿಯನ್ನು ಬರೆದು ಕೊಡದೇ ಕೋಟ್ಯಾಂತರ ಮೌಲ್ಯದ ತನ್ನ ಆಸ್ತಿಯನ್ನು ಮಕ್ಕಳ ಹೆಸರಿಗೆ ವರ್ಗಾವಣೆ ಮಾಡಲು ಬಯಸಿದ್ದಳು ಎನ್ನಲಾಗಿದೆ. ಈಕೆ ಜೀವಂತವಾಗಿದ್ದರೆ ತನಗೆ ಆಸ್ತಿ ದೊರೆಯುವುದಿಲ್ಲ. ಆಕೆಯನ್ನು ಹತ್ಯೆ ಮಾಡಿಬಿಟ್ಟರೆ ಸಹಜವಾಗಿಯೇ ಆಸ್ತಿ ತನ್ನ ಹೆಸರಿಗೆ ಬರುತ್ತದೆ ಎಂದು ಯೋಜಿಸಿದ್ದ ಸೋಮಶೇಖರ್, ನರಕ ಚತುರ್ದಶಿಯಂದು (ನ.11) ರಾತ್ರಿ ಶೃತಿ ಮಲಗಿದ್ದಾಗ ಅವರ ಮುಖದ ಮೇಲೆ ದಿಂಬು ಹಾಕಿ ಅದುಮಿ, ಉಸಿರುಗಟ್ಟಿಸಿ ಹತ್ಯೆಗೈದಿದ್ದಾನೆ.

ನಂತರ ಶೃತಿಯ ಚಿಕ್ಕಪ್ಪ ಪಿ.ಕುಮಾರಸ್ವಾಮಿ ಅವರ ಮೊಬೈಲ್‌ಗೆ ಕರೆ ಮಾಡಿದ ಈತ, ಶೃತಿಗೆ ಲೋ–ಬಿಪಿ ಆಗಿದ್ದು, ಆಕೆಯ ಸ್ಥಿತಿ ಚಿಂತಾಜನಕವಾಗಿದೆ. ಆಸ್ಪತ್ರೆಗೆ ಕರೆದೊಯ್ಯುತ್ತಿದ್ದೇನೆ ಎಂದು ಹೇಳಿದ್ದಾನೆ. ಆ ಸಂದರ್ಭದಲ್ಲಿ ದೂರದ ಊರಿನಲ್ಲಿದ್ದ ಕುಮಾರಸ್ವಾಮಿಯವರು ಶೃತಿಯನ್ನು ಒಳ್ಳೆ ಆಸ್ಪತ್ರೆಗೆ ಕರೆದೊಯ್ಯುವಂತೆ ಹೇಳಿದರು. ಬೆಳಗಾಗುವುದರೊಳಗಾಗಿ ತಾವು ಮಂಡ್ಯಗೆ ಬರುವುದಾಗಿಯೂ ತಿಳಿಸಿದ್ದಾರೆ. ನ.12ರಂದು ಮುಂಜಾನೆ ಕುಮಾರಸ್ವಾಮಿ ಹಾಗೂ ಕುಟುಂಬದವರು ಆಗಮಿಸುವಷ್ಟರಲ್ಲಿ ಸೋಮಶೇಖರ್ ಮನೆಯ ಮುಂದೆ ಪತ್ನಿಯ ಶವವನ್ನು ಇಟ್ಟು ಅದರ ಮೇಲೆ ಹೂವಿನ ಹಾರವನ್ನು ಹಾಕಿರುವುದು ಕಂಡು ಬಂದಿದೆ. ಲೋ–ಬಿಪಿಯಿಂದಲೇ ಆಕೆ ಎರಡು ಗಂಟೆ ಮುಂಚಿತವಾಗಿ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾಳೆ ಎಂದು ಆತ ಹೇಳಿದನಾದರೂ, ಅವರ ಮನೆ ಬಳಿ ಇದ್ದ ವೈದ್ಯರೊಬ್ಬರು ಮೃತದೇಹವನ್ನು ಪರೀಕ್ಷಿಸಿ ನೋಡಿ ಆಕೆ ಸುಮಾರು 5 ರಿಂದ 6 ಗಂಟೆ ಮುಂಚಿತವಾಗಿ ಸಾವನ್ನಪ್ಪಿರಬಹುದು ಎಂದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ ಎಂದು ಹೇಳಿದ್ದರಿಂದ ಅನುಮಾನಗೊಂಡ ಕುಮಾರಸ್ವಾಮಿ, ಆಸ್ತಿ ಕಬಳಿಸುವ ಉದ್ದೇಶದಿಂದ ಶೃತಿ ಪತಿ ಸೋಮಶೇಖರ್, ಅತ್ತೆ ನೀಲಾಂಬಿಕೆ ಹಾಗೂ ಅತ್ತಿಗೆ ಹೇಮಲತಾ ಅವರು ಹತ್ಯೆ ಮಾಡಿರಬಹುದು ಎಂದು ಸಂಶಯ ವ್ಯಕ್ತಪಡಿಸಿ ಮಂಡ್ಯ ಪಶ್ಚಿಮ ಠಾಣೆಗೆ ದೂರು ಸಲ್ಲಿಸಿದ್ದರು.

ಮರಣೋತ್ತರ ಪರೀಕ್ಷೆಯ ಪ್ರಾಥಮಿಕ ವರದಿಯನ್ವಯ ಶೃತಿಯನ್ನು ಉಸಿರುಗಟ್ಟಿಸಿ ಸಾಯಿಸಿರಬಹುದು ಎಂಬುದು ಗೊತ್ತಾಗುತ್ತಿದ್ದಂತೆಯೇ ಪೊಲೀಸರು ಸೋಮಶೇಖರ್‌ನನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ, ಆಸ್ತಿ ಆಸೆಗಾಗಿ ಪತ್ನಿಯನ್ನು ಹತ್ಯೆ ಮಾಡಿದ್ದಾಗಿ ಆತ ತಪ್ಪೊಪ್ಪಿಗೆ ಹೇಳಿಕೆ ನೀಡಿದ ಹಿನ್ನೆಲೆಯಲ್ಲಿ ಆತನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಜನಜಾತಿ ಗೌರವ ದಿವಸ್, ಅಭಿವೃದ್ಧಿ ಭಾರತ ಸಂಕಲ್ಪ ಯಾತ್ರೆಗೆ ಚಾಲನೆ

ಬುಡಕಟ್ಟು ಸಮುದಾಯದ ಅಭಿವೃದ್ಧಿಗೆ ಕೇಂದ್ರದಿಂದ 24 ಸಾವಿರ ಕೋಟಿ ರೂ. ಯೋಜನೆ: ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್



ಮೈಸೂರು,ನ.15(ಎಂಟಿವೈ)–ದೇಶದಾದ್ಯಂತ ಬುಡಕಟ್ಟು ಸಮುದಾಯಗಳ ಸಮಗ್ರ ಅಭಿವೃದ್ಧಿಗೆ ಕೇಂದ್ರ ಸರ್ಕಾರ 24 ಸಾವಿರ ಕೋಟಿ ರೂ.ಗಳ ಯೋಜನೆ ರೂಪಿಸಿದ್ದು, ಅರ್ಹರಿಗೆ ಯೋಜನೆಯ ಸೌಲಭ್ಯ ದೊರಕಿಸಿಕೊಡುವಂತೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಸಲಹೆ ನೀಡಿದ್ದಾರೆ.

ಮೈಸೂರಿನ ಕೇರ್ಗಳ್ಳಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಕೇಂದ್ರದ ಸಭಾಂಗಣದಲ್ಲಿ ಬುಧವಾರ ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯ, ರಾಜ್ಯ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನೆ ಸಂಸ್ಥೆ, ಜಿಲ್ಲಾಡಳಿತ, ಜಿ.ಪಂ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಭಗವಾನ್ ಶ್ರೀ ಬಿರ್ಸಾಮುಂಡ ಜಯಂತಿ ಹಾಗೂ ಜನಜಾತಿ ಗೌರವ ದಿವಸ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ದೇಶದಾದ್ಯಂತ ನ.15ರಂದು ಬಿರ್ಸಾ ಮುಂಡಾ ಅವರ ಜನ್ಮದಿನವನ್ನು ಬುಡಕಟ್ಟು ಸಮುದಾಯ ಹೆಮ್ಮೆಯ ದಿನವನ್ನಾಗಿ ಆಚರಿಸುತ್ತಿದೆ. ರಾಷ್ಟ್ರ ಮತ್ತು ರಾಜ್ಯದ ಇತಿಹಾಸ ಹಾಗೂ ನಮ್ಮ ಸಂಸ್ಕೃತಿ ಹಾಗೂ ಸಾಂಸ್ಕೃತಿಕ ಪರಂಪರೆ ಸಂರಕ್ಷಿಸುವಲ್ಲಿ ಬುಡಕಟ್ಟು ಸಮುದಾಯ ನೀಡಿದ ಕೊಡುಗೆ ಅಪಾರ. ಮುಂಬರುವ ಪೀಳಿಗೆಗೆ ಸ್ಫೂರ್ತಿ ತುಂಬುವ ನಿಟ್ಟಿನಲ್ಲಿ ಬಿರ್ಸಾಮುಂಡ ಜಯಂತಿ ಕಾರ್ಯಕ್ರಮ ನೆರವಾಗಲಿದೆ ಎಂದರು.

ಬಿರ್ಸಾಮುಂಡಾ ಅವರ ಜನ್ಮದಿನದ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಇಂದು ಬಿರ್ಸಾ ಮುಂಡಾ ಅವರ ಜನ್ಮಸ್ಥಳದಿಂದ 'ಭಾರತ ಸಂಕಲ್ಪ ಯಾತ್ರೆ'ಗೆ ಚಾಲನೆ ನೀಡಿದ್ದಾರೆ. ಈ ಯಾತ್ರೆಯು 2024ರ ಜ. 25 ರವರೆಗೆ ದೇಶಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ ಸಂಚರಿಸಲಿದೆ. ಈ ಕಾರ್ಯಕ್ರಮದಲ್ಲಿ ಬುಡಕಟ್ಟು ಗುಂಪುಗಳ ಸಮಗ್ರ ಅಭಿವೃದ್ಧಿಗಾಗಿ 24 ಸಾವಿರ ಕೋಟಿ ರೂ.ಗಳ ಯೋಜನೆ, ರೈತರಿಗೆ 18 ಸಾವಿರ ಕೋಟಿ ರೂ. ಮೌಲ್ಯದ ಪಿಎಂ–ಕಿಸಾನ್ ಯೋಜನೆಗೆ ಚಾಲನೆ ನೀಡಿದ್ದಾರೆ. ಈ ಸಂಕಲ್ಪ ಯಾತ್ರೆಯು 2047ರ ಸ್ವಾತಂತ್ರ್ಯೋತ್ಸವದ ಶತಮಾನೋತ್ಸವದ ವೇಳೆಗೆ ಭಾರತ ಅಭಿವೃದ್ಧಿ ಹೊಂದಿದ ದೇಶವಾಗಿ ರೂಪುಗೊಳ್ಳಲು ಪೂರಕವಾಗಲಿದೆ ಎಂದು ತಿಳಿಸಿದರು.

ಈ ಯಾತ್ರೆಯ ಮೂಲಕ ಕೇಂದ್ರ ಸರ್ಕಾರಗಳ ಪ್ರಾಯೋಜಿತ ಯೋಜನೆಗಳ ಮಾಹಿತಿಯನ್ನು ಜನರಿಗೆ ತಲುಪಿಸಲು ಉದ್ದೇಶಿಸಲಾಗಿದೆ. ಆಯುಷ್ಮಾನ್ ಭಾರತ್, ಪಿಎಂ ಗರೀಬ್ ಕಲ್ಯಾಣ್ ಯೋಜನೆ, ಪಿಎಂ ಆವಾಸ್ ಯೋಜನೆ, ಪಿಎಂ ಉಜ್ವಲ ಯೋಜನೆ, ಪಿಎಂ ಕಿಸಾನ್ ಸಮ್ಮಾನ್, ಜಲಜೀವನ್ ಮಿಷನ್, ಜನ್‌ಧನ್ ಯೋಜನೆ, ಅಟಲ್ ಪಿಂಚಣಿ ಯೋಜನೆ, ಕಿಸಾನ್ ಕ್ರೆಡಿಟ್ ಕಾರ್ಡ್, ಮತ್ತು ಪಿಎಂ ಪೋಷಣ್ ಅಭಿಯಾನ ಸೇರಿದಂತೆ ಇನ್ನಿತರ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸಲಾಗುವುದು. ಅಲ್ಲದೆ ಅರ್ಹರಿಗೆ ಈ ಯೋಜನೆಗಳನ್ನು ಒದಗಿಸುವ ಮೂಲಕ ಅವರನ್ನು ಸಬಲೀಕರಣಗೊಳಿಸುವ ಉದ್ದೇಶವಿದೆ. ಇದರೊಂದಿಗೆ, ರಾಜ್ಯದ ನಗರ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುವ ನಗರಾಭಿವೃದ್ಧಿ ಇಲಾಖೆಯ ಯೋಜನೆಗಳ ಪ್ರಯೋಜನಗಳನ್ನು ಸಾರ್ವಜನಿಕ ಜಾಗೃತಿಯ ಮೂಲಕ ವಂಚಿತ, ದುರ್ಬಲ ಮತ್ತು ಅರ್ಹ ಜನರಿಗೆ ವಿಸ್ತರಿಸಲಾಗುವುದು ಎಂದು ವಿವರಿಸಿದರು.

ಅಭಿವೃದ್ಧಿ ಭಾರತ ಸಂಕಲ್ಪ ಯಾತ್ರೆಗೆ ಚಾಲನೆ: ಬಿರ್ಸಾಮುಂಡ ಜಯಂತಿ ಕಾರ್ಯಕ್ರಮದ ಬಳಿಕ ಅಭಿವೃದ್ಧಿ ಭಾರತ ಸಂಕಲ್ಪ ಯಾತ್ರೆಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಚಾಲನೆ ನೀಡಿದರು. ಈ ಯಾತ್ರೆಗಾಗಿ ತೆರೆದ ವಾಹನವೊಂದನ್ನು ಸಿದ್ಧಪಡಿಸಲಾಗಿದ್ದು, ಅದರಲ್ಲಿ ಎಲ್‌ಇಡಿ ಸ್ಕ್ರೀನ್ ಮೂಲಕ ಉಜ್ವಲ ಯೋಜನೆ ಸೇರಿದಂತೆ ವಿವಿಧ ಯೋಜನೆಗಳ ಬಗ್ಗೆ ಮಾಹಿತಿ ನೀಡಲಾಗುತ್ತದೆ. ಈ ವಾಹನ ಜಿಲ್ಲೆಯಾದ್ಯಂತ ಸಂಚರಿಸಲಾಗಿದೆ. ಕಾರ್ಯಕ್ರಮದಲ್ಲಿ ಮೇಯರ್ ಶಿವಕುಮಾರ್, ಕೇಂದ್ರ ಪ್ರೆಸ್ ಇನ್ಫಾರ್ಮೇಷನ್ ಬ್ಯುರೋ ಅಪರ ಪ್ರಧಾನ ನಿರ್ದೇಶಕ ರವೀಂದ್ರ, ಕೇಂದ್ರ ಜಲಶಕ್ತಿ ನಿರ್ದೇಶಕ ವಿನಾಯಕ್ ಭಟ್, ದೂರದರ್ಶನದ ಡಿಡಿಜಿ ಅನಿಲ್ ಕುಮಾರ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಬುಡಕಟ್ಟು ಸಂಶೋಧನಾ ಕೇಂದ್ರದ ಸಂಶೋಧನಾಧಿಕಾರಿ ಹೆಚ್.ಎಸ್. ಬಿಂದ್ಯಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಭುವನ ನೆರವೇರಿಸಿದರು.

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ವಿರುದ್ಧ ಟೀಕೆಗೆ ಜೆಡಿಎಸ್ ತಿರುಗೇಟು

ಗ್ಯಾರಂಟಿ ವೈಫಲ್ಯಕ್ಕೆ ಹಿಡಿಶಾಪ ಹಾಕಿಸಿಕೊಳ್ಳುತ್ತಿದ್ದ ಕಾಂಗ್ರೆಸ್ ಈಗ ವಿದ್ಯುತ್ ವೈರ್ ಮೊರೆ ಹೋಗಿದೆ!

ಬೆಂಗಳೂರು, ನ.15(ಕೆಎಂಶಿ)– ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಬಗ್ಗೆ ಕೀಳು ಅಭಿರುಚಿಯ ಟೀಕೆಗಳನ್ನು ಮಾಡಿರುವ ರಾಜ್ಯ ಕಾಂಗ್ರೆಸ್ ವಿರುದ್ಧ ಜೆಡಿಎಸ್ ವಾಗ್ದಾಳಿ ನಡೆಸಿದೆ.

ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಕಿಡಿಕಾರಿರುವ ಜೆಡಿಎಸ್, ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದೆ. ಕಾಂಗ್ರೆಸ್ ಪಕ್ಷಕ್ಕೆ ಅರ್ಜೆಂಟಾಗಿ ಜನರ ಗಮನ ಬೇರೆಡೆಗೆ ಸೆಳೆಯುವ ತುರ್ತು ಇದ್ದು, ಕುಮಾರಸ್ವಾಮಿ ಅವರ 'ಸರ್ಜಿಕಲ್ ಸ್ಟ್ರೈಕ್'ಗೆ ಕೈ ಪಡೆ ತರಗುಟ್ಟಿ ಹೋಗಿದೆ.

ಮಾನ ಉಳಿಸಿಕೊಳ್ಳಲು ಕರೆಂಟ್ ವೈರ್ ಮೊರೆ ಹೋಗಿರುವ ಕಾಂಗ್ರೆಸ್, ಗ್ಯಾರಂಟಿಗಳ ವೈಫಲ್ಯಕ್ಕೆ ಜನರಿಂದ ಪ್ರತಿದಿನ ಹಿಡಿಶಾಪ ಹಾಕಿಸಿಕೊಳ್ಳುತ್ತಿದೆ.

ತೆಲಂಗಾಣ ಸೇರಿ 5 ರಾಜ್ಯಗಳ ಚುನಾವಣೆಯಲ್ಲಿ ಏದುಸಿರು ಬಿಡುತ್ತಿರುವ ಕಾಂಗ್ರೆಸ್, ಕತ್ತಲಾದ ಮೇಲೆ ಕಳ್ಳರಂತೆ ಗೋಡೆ ಮೇಲೆ ಪೋಸ್ಟರ್ ಅಂಟಿಸುವ ಸ್ಥಿತಿಗೆ ಬಂದಿದೆ. ಕುಮಾರಸ್ವಾಮಿ ಸ್ಪಷ್ಟನೆ ಕೊಟ್ಟ ಮೇಲೂ ಕಾಂಗ್ರೆಸ್ ವಿಕೃತಿ ಮಿತಿ ಮೀರಿದೆ. ವಿದ್ಯುತ್ ಕಳವು ಪ್ರಕರಣದಲ್ಲಿ ಬೆಸ್ಕಾಂ ಎಫ್‌ಐಆರ್ ದಾಖಲಿಸಿದೆ. ಕುಮಾರಸ್ವಾಮಿ ತಿಹಾರ್ ಜೈಲಿಗೆ ಹೋಗುವ ತಪ್ಪೇನೂ ಮಾಡಿಲ್ಲ. ಇಡಿ, ಸಿಬಿಐ, ಐಟಿ ಅವರ ಬೆನ್ನು ಹತ್ತಿಲ್ಲ. ವರ್ಗಾವಣೆ ದಂಧೆ, ಸುಲಿಗೆ, ಗುತ್ತಿಗೆದಾರರಿಂದ ಪರ್ಸಂಟೇಜ್, ಸ್ವಾನ್ಲಿ ಸೋಫಾ–ಮಂಚ, ಹ್ಯೂಬ್ಲೆಟ್ ವಾಚು.. ಒಂದಾ ಎರಡಾ.., ಎಂದು ಜೆಡಿಎಸ್ ತಿರುಗೇಟು ಕೊಟ್ಟಿದೆ. ರಾಜಕೀಯವಾಗಿ ಕುಮಾರಸ್ವಾಮಿ ಅವರನ್ನು ಎದುರಿಸಲಾಗದ ಕಾಂಗ್ರೆಸ್ ಶಕುನಿ ಯುದ್ಧ ಆರಂಭಿಸಿದೆ, ಯುದ್ಧಕ್ಕೆ ನಾವೂ ಸಿದ್ಧರಿದ್ದೇವೆ ಎಂದು ಜೆಡಿಎಸ್ ಸವಾಲು ಹಾಕಿದೆ.

ಮೈಸೂರಿನಲ್ಲಿ 'ಚಂಪಕ ರಾಷ್ಟ್ರೀಯ ಕಲಾ ಉತ್ಸವ'



ಮೈಸೂರು, ನ. 15–ಮೈಸೂರಿನ ರಾಮಕೃಷ್ಣನಗರದ ಚಂಪಕ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ಸಭಾಂಗಣದಲ್ಲಿ "ಚಂಪಕ ರಾಷ್ಟ್ರೀಯ ಕಲಾ ಉತ್ಸವ" ಕಾರ್ಯಕ್ರಮ ನಡೆಯಿತು. ಈ ವೇಳೆ ಬೆಂಗಳೂರಿನ ಮಯೂರಿ ನೃತ್ಯಶಾಲೆಯ ಸಂಸ್ಥಾಪಕಿ ಮತ್ತು ಸಂಶೋಧಕರಾದ ಗುರು ಡಾ. ಶೋಭಾ ಶಶಿಕುಮಾರ್ ಅವರ ಶಿಷ್ಯರು "ಭರತ ನೃತ್ಯಾರ್ಪಣಂ" ನೃತ್ಯ ವೈಶಿಷ್ಟ್ಯವನ್ನು ಪ್ರಸ್ತುತಪಡಿಸಿದರು.

ಇವರು ಋಷಿ ಭರತನ ಪರಂಪರೆಯನ್ನು ಒಳಗೊಂಡಿರುವ ನಾಟ್ಯ ಶಾಸ್ತ್ರದ ಚಾರಿಗಳು ಮತ್ತು ಕರಣಗಳನ್ನು ಜನಪ್ರಿಯ ಸಂಗೀತ ಸಂಯೋಜನೆಗಳಾದ 'ಪ್ರಭುಂ ಪ್ರಾಣನಾಥಂ', 'ಆನಂದ ರೂಪಿಣಿ ನಾರಾಯಣಿ'ಗೆ ಅಳವಡಿಸಿ ಪ್ರಸ್ತುತಪಡಿಸಿದರು. ಅವರ ಹಿರಿಯ ಶಿಷ್ಯೆ ವಿದುಷಿ ಮೇಘಾ ಅವರು ತ್ಯಾಗರಾಜರ 'ಮರುಕೇಳರಾ ಓ ರಾಘವ' ರಚನೆಗೆ ಸಮ್ಮೋಹಕ ಅಭಿನಯವನ್ನು ಪ್ರಸ್ತುತಪಡಿಸಿದರು.

ಕಾರ್ಯಕ್ರಮವು ಚಂಪಕ ಅಕಾಡೆಮಿ ಸಂಸ್ಥಾಪಕಿ ವಿದುಷಿ ಡಾ.ನಾಗಲಕ್ಷ್ಮಿ ನಾಗರಾಜನ್ ಅವರ ಶಿಷ್ಯೆಯರ ಭರತನಾಟ್ಯದೊಂದಿಗೆ ಆರಂಭಗೊಂಡಿತು. ಯುವ ಪ್ರತಿಭೆಗಳಾದ ಮಂಜುಷಾ, ಅಪೇಕ್ಷಾ, ಇಶಾನಿ, ಖುಶಿ, ಸಂಹಿತಾ, ಚಾರ್ವಿ, ಸೌಮ್ಯ ಎಲ್ಲರೂ ಮೇಳಪ್ರಾಪ್ತಿ, ಗಣೇಶ ವಂದನೆ, ಜನಪ್ರಿಯ ಸ್ವರಜತಿ 'ರಾರವೇಣು' ಮತ್ತು ದೇವರನಾಮ 'ಹರಿ ಕುಣಿದ' ಪ್ರಸ್ತುತಿಗಳಿಗೆ ನೃತ್ಯ ಮಾಡಿದರು. ವಿದುಷಿ ಶ್ರುತಿ ಪ್ರಸಾದ್, ವಿದ್ವಾನ್ ಕಿರಣ್ ಮತ್ತು ಚಿ. ಶ್ರೀನಿಧಿ ಸಂಗೀತ ಮೇಳದಲ್ಲಿ ಹಾಗೂ ನಟುವಾಂಗದಲ್ಲಿ ಡಾ.ನಾಗಲಕ್ಷ್ಮಿ ನಾಗರಾಜನ್ ಸಹಕರಿಸಿದರು.

ಚಾಮರಾಜನಗರದ ಶ್ರೀ ಶಾರದಾ ನೃತ್ಯ ಕಲಾ ಶಾಲೆ ಸಂಸ್ಥಾಪಕರಾದ ವಿದ್ವಾನ್ ಮಹೇಶ್ ವಿ. ಅವರು ತಮ್ಮ ಶಿಷ್ಯರೊಂದಿಗೆ "ನೃತ್ಯ ವೈಭವ" ಭರತನಾಟ್ಯ ವೈಶಿಷ್ಟ್ಯವನ್ನು ಪ್ರಸ್ತುತಪಡಿಸಿ ಪ್ರೇಕ್ಷಕರ ಮನ ಸೂರೆಗೊಂಡರು. ಪುಷ್ಪಾಂಜಲಿ ಮತ್ತು ಗಣೇಶ ಕೃತಿಗಳೊಂದಿಗೆ ಪ್ರಾರಂಭಿಸಿ, ವಿದ್ವಾನ್ ಮಹೇಶ್ ಭಗವಾನ್ ಹನುಮಂತನ ಜೀವನದ ಅನೇಕ ಕಥೆಗಳನ್ನು ಚಿತ್ರಿಸುವ 'ಹನುಮಂತ ದೇವ ನಮೋ' ಪ್ರಸ್ತುತಪಡಿಸಿದರು. ಅವರ ಶಿಷ್ಯರು 'ಐಗಿರಿ ನಂದಿನಿ', 'ಅಷ್ಟಲಕ್ಷ್ಮಿ ಸ್ತೋತ್ರ' ಮತ್ತು ಇತರ ನೃತ್ಯ ಪ್ರಸ್ತುತಿಗಳಿಗೆ ಆಕರ್ಷಕವಾಗಿ ನೃತ್ಯ ಮಾಡಿದರು. ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಶಿಕ್ಷಣ ತಜ್ಞ ಹಾಗೂ ಸಹಾಯಕ ನಿರ್ದೇಶಕ ನಿರಂಜನ ಮೂರ್ತಿ ಬಿ. ಅವರು ಉದ್ಘಾಟಿಸಿ ಮಾತನಾಡಿ, ಸಾಮಾಜಿಕ–ಸಾಂಸ್ಕೃತಿಕ ಬೆಳವಣಿಗೆಯ ಎಲ್ಲಾ ಅಂಶಗಳಲ್ಲಿ ಮಕ್ಕಳ ಅಭಿವೃದ್ಧಿಗೆ ಚಂಪಕ ಅಕಾಡೆಮಿಯು ಹಲವು ವರ್ಷಗಳಿಂದ ಶ್ರಮಿಸುತ್ತಿದೆ. ಕಲೆಯ ಬೆಳವಣಿಗೆಗೆ ಇಂತಹ ವೇದಿಕೆಗಳ ಮಹತ್ವ ಹೆಚ್ಚು ಎಂದು ತಿಳಿಸಿದರು. ಗುರು ಡಾ.ಶೋಭಾ ಶಶಿಕುಮಾರ್ ಅವರು ಕಲಾವಿದರ ದೃಷ್ಟಿಕೋನದಿಂದ ಇಂತಹ ಉತ್ಸವಗಳನ್ನು ಆಯೋಜಿಸುವ ಮಹತ್ವದ ಬಗ್ಗೆ ಮಾತನಾಡಿದರು.

ಆಕಸ್ಮಿಕ ಬೆಂಕಿ ಅವಘಡ: ತುರ್ತಾಗಿ ಪರಿಹಾರ ನೀಡಲು ಶಾಸಕ ಹರೀಶ್‌ಗೌಡ ಅಧಿಕಾರಿಗಳಿಗೆ ತಾಕೀತು



ಮೈಸೂರು, ನ. 15– ಮೈಸೂರಿನ ಲಷ್ಕರ್ ಮೊಹಲ್ಲಾದ ಬಾಲನಂದ ಎಂಬುವರ ಕಾರ್ಖಾನೆ ಹಾಗೂ ಮನೆಗೆ ಆಕಸ್ಮಿಕವಾಗಿ ಬೆಂಕಿ ಬಿದ್ದು, ಭಾರಿ ಹಾನಿಯಾಗಿದ್ದು, ಸ್ಥಳಕ್ಕೆ ಶಾಸಕ ಹರೀಶ್‌ಗೌಡ ಭೇಟಿ ನೀಡಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಪರಿಹಾರ ನೀಡಲು ತಾಕೀತು ಮಾಡಿದರು. ಈ ಸಂದರ್ಭದಲ್ಲಿ ಸಂತ್ರಸ್ತರ ಕುಟುಂಬಕ್ಕೆ ಶಾಸಕ ಹರೀಶ್‌ಗೌಡ ಸಾಂತ್ವನ ಹೇಳಿದರು. ಮಾಲೀಕರಾದ ಜಯಂತ್, ಆರ್.ರವಿಕುಮಾರ್, ವೆಂಕಿ, ನಗರಪಾಲಿಕೆ ಸದಸ್ಯರಾದ ಬಾಲರಾಜ್, ರವಿ(ಜೆಸ್ಕೋ), ಮನುಗೌಡ, ಪ್ರವೀಣ್, ನಂಜುಂಡಿ, ಭರತ್ ದೇವಾಂಗ, ಮಹೇಶ್ ಇನ್ನಿತರರು ಇದ್ದರು.

ನ.18ರಂದು ಕುವೆಂಪು ಶಿಕ್ಷಣ ಚೇತನ ಪ್ರಶಸ್ತಿ ಪ್ರದಾನ; ಮಕ್ಕಳ ನಾಟಕ ಪ್ರದರ್ಶನ

ಮೈಸೂರು, ನ.15–ಅದಮ್ಯ ರಂಗಶಾಲೆಯ ವತಿಯಿಂದ ನ.18 ರಂದು ಸಂಜೆ 5.30ಕ್ಕೆ ನಗರದ ಜಯಲಕ್ಷ್ಮಿಪುರಂನ ಸ್ವಾಮಿ ವಿವೇಕಾನಂದ ಪದವಿ ಪೂರ್ವ ಕಾಲೇಜಿನ ಕುವೆಂಪು ರಂಗಮಂದಿರದಲ್ಲಿ 'ಕುವೆಂಪು ಶಿಕ್ಷಣ ಚೇತನ ಪ್ರಶಸ್ತಿ ಪ್ರದಾನ ಹಾಗೂ ಮಕ್ಕಳ ನಾಟಕ ಪ್ರದರ್ಶನ ನಡೆಯಲಿದೆ ಎಂದು ರಂಗಶಾಲೆಯ ಕಾರ್ಯದರ್ಶಿ ಚಂದ್ರು ಮಂಡ್ಯ ತಿಳಿಸಿದ್ದಾರೆ.

ಸಮಾರಂಭವನ್ನು ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಲೋಕನಾಥ್ ಉದ್ಘಾಟಿಸಲಿದ್ದು, ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ನಿರ್ದೇಶಕ ಹಾಗೂ ಜಾನಪದ ವಿದ್ವಾಂಸ ಪ್ರೊ. ನಂಜಯ್ಯ ಹೊಂಗನೂರು ಅಧ್ಯಕ್ಷತೆ ವಹಿಸುವರು. ಅದಮ್ಯ ರಂಗಶಾಲೆಯ ಗೌರವ ಕಾರ್ಯದರ್ಶಿ ಟಿ.ಸತೀಶ್ ಜವರೇಗೌಡ ಆಶಯ ನುಡಿಗಳನ್ನಾಡುವರು. ಪಂಪ ಪ್ರಶಸ್ತಿ ಪುರಸ್ಕೃತ ಬಹುಶ್ರುತ ವಿದ್ವಾಂಸ ಡಾ.ಸಿ.ಪಿ. ಕೃಷ್ಣಕುಮಾರ್ (ಸಿಪಿಕೆ) ಪ್ರಶಸ್ತಿ ಪ್ರದಾನ ಮಾಡುವರು. ಮುಖ್ಯ ಅತಿಥಿಯಾಗಿ ದಿ ನೆಸ್ಟ್ ಟ್ರಸ್ಟಿನ ಅಧ್ಯಕ್ಷ ಲಯನ್ ಡಿ.ಎಸ್. ಸತೀಶ್ ಪಾಲ್ಗೊಳ್ಳುವರು.

ಕುವೆಂಪು ಶಿಕ್ಷಣ ಚೇತನ ಪ್ರಶಸ್ತಿ ಪುರಸ್ಕೃತರು: ಮೈಸೂರಿನ ಬಿಜಿಎಸ್ ಶಿಕ್ಷಣ ಸಂಸ್ಥೆಗಳ ಆಡಳಿತಾಧಿಕಾರಿ ಡಾ. ಆರ್.ಎಸ್.ನರಸೇಗೌಡ, ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಎನ್. ಉದಯಶಂಕರ್, ಹಾಸನದ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲೆ ಜಿ.ಟಿ. ಅನ್ನಪೂರ್ಣ, ಹುಣಸೂರಿನ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಎ. ರಾಮೇಗೌಡ, ನಂಜನಗೂಡಿನ ಬಾಲಕರ ಸರ್ಕಾರಿ ಪದವಿಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕಿ ಕೆ. ಮಾಲತಿ, ಮಂಡ್ಯ ತಾಲೂಕಿನ ಬಸರಾಳು ಗ್ರಾಮದ ಸರ್ಕಾರಿ ಪದವಿಪೂರ್ವ ಕಾಲೇಜಿನ ಲೋಕೇಶ ಬೆಕ್ಕಳಲೆ, ಮೈಸೂರಿನ ಸದ್ವಿದ್ಯಾ ಸಂಯುಕ್ತ ಪದವಿಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕ ಕೃ.ಪಾ. ಮಂಜುನಾಥ್, ಗೋಪಾಲಸ್ವಾಮಿ ಪದವಿಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕ ಜಿ.ಆರ್. ಶ್ರೀವತ್ಸ 'ಕುವೆಂಪು ಶಿಕ್ಷಣ ಚೇತನ ಪ್ರಶಸ್ತಿ' ಸ್ವೀಕರಿಸುವರು.

ಪ್ರಶಸ್ತಿ ಪ್ರದಾನದ ಬಳಿಕ ಅದಮ್ಯ ರಂಗಶಾಲೆಯ ಮಕ್ಕಳಿಂದ ಕೃಷ್ಣಮೂರ್ತಿ ಬಿಳಿಗೆರೆ ರಚನೆಯ 'ಹುಯ್ಯೋ ಹುಯ್ಯೋ ಮಳೆರಾಯ' ನಾಟಕ ಪ್ರದರ್ಶನ ನಡೆಯಲಿದೆ. ಈ ನಾಟಕವನ್ನು ಎಂ.ಮನೋಜ್ ನಿರ್ದೇಶನ ಮಾಡಿದ್ದು, ಲೋಕನಾಥ್ ಸೋಗಂ ಅವರ ಸಂಗೀತ ನಿರ್ದೇಶನವಿದೆ.

ಮಹರ್ಷಿ ವಿದ್ಯಾಸಂಸ್ಥೆಯಲ್ಲಿ ಮುತ್ತಜ್ಜಿ, ಮುತ್ತಾತಂದಿರ ದಿನ ಆಚರಣೆ



ಮೈಸೂರಿನ ಮಹರ್ಷಿ ವಿದ್ಯಾಸಂಸ್ಥೆಯಲ್ಲಿ ಮುತ್ತಜ್ಜಿ, ಮುತ್ತಾತಂದಿರ ದಿನವನ್ನು ಆಚರಿಸಲಾಯಿತು. ಈ ವೇಳೆ ಮೈಸೂರು ಆಕಾಶವಾಣಿಯ ನಿವೃತ್ತ ನಿರ್ದೇಶಕರಾದ ಜಯಶ್ರೀ ಶ್ಯಾನಭಾಗ್, ಮಹರ್ಷಿ ವಿದ್ಯಾಸಂಸ್ಥೆಯ ವ್ಯವಸ್ಥಾಪಕ ವಿಶ್ವಸ್ಥ ಡಾ ಭವಾನಿಶಂಕರ್, ಸಂಸ್ಥೆಯ ಹಿರಿಯ ಪ್ರಾಚಾರ್ಯ ಗೋಪಾಲಸ್ವಾಮಿ, ಕಾಲೇಜು ಪ್ರಾಚಾರ್ಯ ಮಹದೇವಸ್ವಾಮಿ, ಪ್ರಾಚಾರ್ಯ ಸತೀಶ್ ಉಪಸ್ಥಿತರಿದ್ದರು.

ನಾಳೆ ಶ್ರೀ ಕಡೇಮಾಲಮ್ಮನವರ ದೇವಾಲಯ ಲೋಕಾರ್ಪಣೆ



ಮೈಸೂರು, ನ.15(ಜಿಎ)–ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಕಳಲೆ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಪುರಾತನವಾದ ಶ್ರೀಕಡೇಮಾಲಮ್ಮನವರ ದೇವಾಲಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನ.17 ರಂದು ಲೋಕಾರ್ಪಣೆ ಮಾಡಲಿದ್ದಾರೆ ಎಂದು ಶ್ರೀ ಕಡೇಮಾಲಮ್ಮನವರ ದೇವಸ್ಥಾನ ಸೇವಾ ಸಮಿತಿ ಟ್ರಸ್ಟ್‌ನ ಗೌರವ ಸಲಹೆಗಾರ ಡಾ.ಪಿ.ಮಾಲೇಗೌಡ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮಧ್ಯಾಹ್ನ 3 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಲೋಕಾರ್ಪಣೆಗೊಳಿಸುವರು. ಕನಕಗುರು ಪೀಠದ ಶ್ರೀ ಶಿವಾನಂದಪುರಿ ಸ್ವಾಮೀಜಿ, ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಶಿಲಾನ್ಯಾಸ ನೆರವೇರಿಸಲಿದ್ದು, ಶಾಸಕ ದರ್ಶನ್ ಧ್ರುವನಾರಾಯಣ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಸಂಸದ ವಿ.ಶ್ರೀನಿವಾಸ್ ಪ್ರಸಾದ್, ಪಶು ಸಂಗೋಪನೆ ಇಲಾಖೆ ಸಚಿವ ಕೆ.ವೆಂಕಟೇಶ್, ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ವಿಶ್ವನಾಥ್, ಅನಿಲ್ ಚಿಕ್ಕಮಾದು, ರವಿಶಂಕರ್, ಗಣೇಶ್ ಪ್ರಸಾದ್, ಜಿ.ಡಿ.ಹರೀಶ್ ಗೌಡ, ತಿಮ್ಮಯ್ಯ ಸೇರಿ ಅನೇಕ ಗಣ್ಯರು ಪಾಲ್ಗೊಳ್ಳುವರು ಎಂದರು. ಇದಕ್ಕೂ ಮುನ್ನ ನ.16ರ ಗುರುವಾರ ಸಂಜೆ 6ಕ್ಕೆ ಗೋಧೂಳಿ ಮುಹೂರ್ತದಲ್ಲಿ ಗಣಪತಿ ಪೂಜೆ, ಮಹಾಸಂಕಲ್ಪ, ಪಂಚಗವ್ಯಾಮೇಳನ, ಕಳಶ ಸ್ಥಾಪನೆ, ವಾಸ್ತುಹೋಮ, ಜಲಾಧಿವಾಸದಂತಹ ಧಾರ್ಮಿಕ ಕಾರ್ಯ ಜರುಗಲಿದ್ದು, ಮಹಾಮಂಗಳಾರತಿ ಪ್ರಸಾದ ವಿನಿಯೋಗ ನಡೆಯಲಿದೆ.


ನ.17ರ ಬೆಳಿಗ್ಗೆ 6ಕ್ಕೆ ಶ್ರೀಗುರು ರೇವಣ್ಣ ಸಿದ್ದೇಶ್ವರ ದೇವಾಸ್ಥಾನದಿಂದ ಕಳಲೆ ಗ್ರಾಮದ ಪ್ರಮುಖ ಬೀದಿಗಳ ಮೂಲಕ ವೀರಮಕ್ಕಳ ಕುಣಿತ, ವೀರಗಾಸೆ, ನಂದಿಧ್ವಜ, ಸತ್ತಿಗೆ ಸಮೇತ ಮಹಿಳೆಯರು ಗಂಗಾಪೂಜೆ ಮತ್ತು ದೇವರು ತರುವ ಕಾರ್ಯಕ್ರಮ ನಡೆಯಲಿದೆ. ಬೆಳಗ್ಗೆ 9.30 ರಿಂದ 10.30ರ ಸಮಯದೊಳಗಿನ ಧನುರ್ ಲಗ್ನದಲ್ಲಿ ದೇವಿಯ ಪ್ರತಿಷ್ಠಾಪನೆ, ನವಗ್ರಹಹೋಮ, ಪ್ರಾಯಶ್ಚಿತ್ತ ಹೋಮ, ಪೂರ್ಣಾಹುತಿ, ಪಂಚಾಫಲಾಭಿಷೇಕ, ಮಹಾಮಂಗಳಾರತಿ ಆಶೀರ್ವಚನ ನಡೆಯಲಿದೆ. ಬೆ.10ರ ಬಳಿಕ ಗೋಪುರ ಕಳಸ ಪ್ರತಿಷ್ಠಾಪನೆ, ಕಳಸಾಭಿಷೇಕ ನಡೆಯಲಿದ್ದು, 12.30ರ ನಂತರ ಪ್ರಸಾದ ವಿನಿಯೋಗ ಇರಲಿದೆ. ಮಧ್ಯಾಹ್ನ 2ಗಂಟೆಗೆ ಕಲಾವಿದ ಅಮ್ಮ ರಾಮಚಂದ್ರ ತಂಡದವರಿಂದ ಜಾನಪದ ಕಾರ್ಯಕ್ರಮ ಜರುಗಲಿವೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್‌ನ ಗೌರವಾಧ್ಯಕ್ಷ ಎಂ.ಸಣ್ಣೇಗೌಡ, ಅಧ್ಯಕ್ಷ ಪಿ.ಬಸವರಾಜು, ಉಪಾಧ್ಯಕ್ಷರಾದ ಶಿವಮಲ್ಲಪ್ಪ ಬಿ.ಶಂಕರ್, ಕೊಂಗಳ್ಳಿ, ಕಾರ್ಯಾಧ್ಯಕ್ಷ ಮಹದೇವೇಗೌಡ, ಖಜಾಂಚಿ ಕೆಂಪಯ್ಯನ ಚಿಕ್ಕಣ್ಣ, ಸಂಘಟನಾ ಕಾರ್ಯದರ್ಶಿ ಮಾದೇಗೌಡ, ನಿರ್ದೇಶಕ ಸೋಮಣ್ಣ, ಬಿ.ಬಸವರಾಜು ದೊಡ್ಡಹುಂಡಿ, ನಾಗೇಂದ್ರ ದೊಡ್ಡಹುಂಡಿ, ರೇವಣ್ಣ, ತಮ್ಮಣ್ಣೇಗೌಡ, ಜವರೇಗೌಡ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಗುರುವಾರ 16 ನವೆಂಬರ್ 2023

ಮನೆಯ ಸಮೀಪ ಮರಿಗೆ ಜನ್ಮ ನೀಡಿದ ಕಾಡಾನೆ

ಕಿಲೋ ಮೀಟರ್‌ಗಟ್ಟಲೆ ಕಾರ್ಯಾಚರಣೆ ನಡೆಸಿ ತಾಯಿ-ಮರಿಯನ್ನು ಒಂದುಗೂಡಿಸಿದ ಅರಣ್ಯ ಸಿಬ್ಬಂದಿ



ಮಡಿಕೇರಿ, ನ.15– ಜನರು ವಾಸಿಸುತ್ತಿದ್ದ ಮನೆಯೊಂದರ ಸಮೀಪದಲ್ಲೇ ಕಾಡಾನೆಯೊಂದು ಮರಿ ಆನೆಗೆ ಜನ್ಮ ನೀಡಿದ ಘಟನೆ ಚೆಯ್ಯಂಡಾಣೆ ಬಳಿಯ ನರಿಯಂದಡ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕರಡ ಗ್ರಾಮದ ಕೀಮಲೆ ಕಾಡುವಿನಲ್ಲಿ ನಡೆದಿದೆ.

ಕೀಮಲೆ ಕಾಡುವಿನ ವೊಣ್ಣಕುಟ್ಟಂಡ ಮಂಜು ಎಂಬುವರ ಮನೆಯ ಸಮೀಪ 4 ಕಾಡಾನೆಗಳ ಹಿಂಡಿನಲ್ಲಿದ್ದ ಹೆಣ್ಣಾನೆಯೊಂದು ಸೋಮವಾರ ರಾತ್ರಿ ಹೆಣ್ಣಾನೆ ಮರಿಗೆ ಜನ್ಮ ನೀಡಿತ್ತು. ವಿಷಯ ತಿಳಿದ ಗ್ರಾಮಸ್ಥರು ಕುತೂಹಲದಿಂದ ತಂಡೋಪತಂಡವಾಗಿ ಆಗಮಿಸಿ ಮರಿ ಆನೆಯನ್ನು ವೀಕ್ಷಿಸಿದರು. ಈ ಸಂದರ್ಭ ತಾಯಿ ಆನೆ ಸಮೀಪದ ತೋಟದಲ್ಲಿ ಮರಿ ಆನೆಗಾಗಿ ಘೀಳಿಡುತ್ತಾ ಕಾಯುತ್ತಿತ್ತು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖಾಧಿಕಾರಿಗಳನ್ನು ತಡವಾಗಿ ಆಗಮಿಸಿದ್ದಾರೆಂದು ಗ್ರಾಮಸ್ಥರು ತರಾಟೆಗೆತ್ತಿಕೊಂಡ ಪ್ರಸಂಗ ಕೂಡ ನಡೆಯಿತು.

ಮಡಿಲು ಸೇರಿದ ಆನೆ ಮರಿ: ತಾಯಿಯಿಂದ ಬೇರ್ಪಟ್ಟ ಮರಿ ಆನೆಯನ್ನು ತಾಯಿ ಬಳಿಗೆ ಸೇರಿಸುವ ಮಹತ್ತರ ಜವಾಬ್ದಾರಿ ಅರಣ್ಯಾಧಿಕಾರಿಗಳ ಮೇಲಿತ್ತು. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮನೋಜ್‌ಕುಮಾರ್ ತ್ರಿಪಾಠಿ ಹಾಗೂ ಡಿಸಿಎಫ್ ಶರಣ ಬಸಪ್ಪ, ನೆಹರು ಅವರ ಮಾರ್ಗದರ್ಶನದಂತೆ ವಿರಾಜಪೇಟೆ ವಲಯ ಅರಣ್ಯಾಧಿಕಾರಿ ಕಳ್ಳಿರ ದೇವಯ್ಯ ಅವರ ನೇತೃತ್ವದಲ್ಲಿ ಮರಿ ಆನೆಯನ್ನು ಅದರ ತಾಯಿ ಬಳಿ ಕರೆದೊಯ್ಯುವ ಕಾರ್ಯಾಚರಣೆ ನಡೆಸಲಾಯಿತು. ವಿರಾಜಪೇಟೆ ವಲಯದ ಅರಣ್ಯ ಇಲಾಖೆ ಸಿಬ್ಬಂದಿಗಳು, ಎಲಿಫೆಂಟ್ ಟಾಸ್ಕ್‌ಫೋರ್ಸ್‌ನ ಸಿಬ್ಬಂದಿಗಳು ನಿಶಕ್ತವಾಗಿದ್ದ ಮರಿ ಆನೆಗೆ ಮೊದಲು ಗ್ಲೂಕೋಸ್ ನೀಡಿದರು. ಬಳಿಕ ಆನೆ ಮರಿಗೆ ಜನ್ಮ ನೀಡಿದ ಕಾಡಾನೆಯ ರಕ್ತಸ್ರಾವದ ಜಾಡು ಹಿಡಿದು ಹರಸಾಹಸದಿಂದ ಸುಮಾರು 7 ಕಿ.ಮೀ. ದೂರದವರೆಗೆ ತೆರಳಿದರು. ಬಳಿಕ ಮಾಕುಟ್ಟ ಮೀಸಲು ಅರಣ್ಯದೊಳಗೆ ಸುಮಾರು 2 ಕಿ.ಮೀ. ದೂರದಲ್ಲಿದ್ದ ತಾಯಿ ಆನೆಯನ್ನು ಪತ್ತೆ ಹಚ್ಚಲಾಯಿತು. ನಂತರ ಮರಿ ಆನೆಯನ್ನು ಅದರ ತಾಯಿಯ ಮಡಿಲಿಗೆ ಸೇರಿಸುವಲ್ಲಿ ಅರಣ್ಯ ಸಿಬ್ಬಂದಿಗಳ ತಂಡ ಕೊನೆಗೂ ಯಶಸ್ವಿಯಾಯಿತು. ಕಾರ್ಯಾಚರಣೆಯಲ್ಲಿ ಡಿಆರ್‌ಎಫ್‌ಓ ಅನಿಲ್, ಸಿಬ್ಬಂದಿಗಳಾದ ಸುರೇಶ್, ಭರತ್, ನಾಣಯ್ಯ, ಲತೇಶ್, ಅನಿಲ್, ವಿಕಾಸ್, ಪೊನ್ನಪ್ಪ, ದಿನೇಶ್ ಸೇರಿದಂತೆ ಸುಮಾರು ಹನ್ನೆರಡು ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಕೊಡಗು ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವೆ

ಗ್ರಾಮಾಂತರ ಕೈಲ್ ಮುಹೂರ್ತ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಸಂಸದ ಪ್ರತಾಪ್ ಸಿಂಹ ಭರವಸೆ



ನಾಪೋಕ್ಲು, ನ.15– ಕೊಡವ ಸಮಾಜಗಳ ಅಭಿವೃದ್ಧಿ ಕಾರ್ಯಗಳಿಗೆ ಸಂಸದರ ನಿಧಿಯಿಂದ ಅನುದಾನ ನೀಡಲಾಗಿದ್ದು, ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದು ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಪ್ರತಾಪ ಸಿಂಹ ತಿಳಿಸಿದ್ದಾರೆ.

ಪಾರಾಣೆ ಕೇಂದ್ರ ಕ್ರೀಡಾಮಂಡಳಿ ವತಿಯಿಂದ ಪಾರಾಣೆ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದ್ದ 62ನೇ ವರ್ಷದ ಅಂತರ ಗ್ರಾಮಾಂತರ ಕೈಲ್ ಮುಹೂರ್ತ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಅಭಿವೃದ್ಧಿ ಕಾರ್ಯಗಳಿಗೆ 30 ಕೊಡವ ಸಮಾಜಗಳಿಗೆ ತಲಾ 10 ಲಕ್ಷ ರೂ.ನಂತೆ ಮೂರು ಕೋಟಿ ಅನುದಾನ ಬಿಡುಗಡೆಯಾಗಿದೆ. ಬಾಳುಗೋಡು ಕೊಡವ ಕಲ್ಚರಲ್ ಸೆಂಟರ್‌ನಲ್ಲಿ ಹಾಕಿ ಸ್ಟೇಡಿಯಂ ನಿರ್ಮಾಣ ಮಾಡಲು 40 ಲಕ್ಷ ರೂ. ನೀಡಲಾಗಿದೆ ಎಂದರು.

ಕೇಂದ್ರ ಸರ್ಕಾರದಿಂದ ರಾಜ್ಯದಲ್ಲಿ ವಿವಿಧ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಹಾಗೆಯೇ ಗ್ರಾಮೀಣ ರಸ್ತೆಗಳ ನಿರ್ಮಾಣಕ್ಕೂ ಆದ್ಯತೆ ನೀಡಲಾಗುತ್ತಿದೆ. 5.5 ಕಿಲೋಮೀಟರ್ ಅಂತರದ ಬಾವಲಿ- ನರಿಯಂದಡ ಹಾಗೂ ಬಲಮುರಿ- ಕುಯ್ಯಂಗೇರಿ ರಸ್ತೆಗಳನ್ನು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಅಡಿ ಅಭಿವೃದ್ಧಿಪಡಿಸಲಾಗಿದೆ. ಉಳಿದ ಗ್ರಾಮೀಣ ರಸ್ತೆಗಳನ್ನು ನಾಲ್ಕನೇ ಹಂತದ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸಲಾಗುವುದು ಎಂದರು.

ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿ, ಕ್ರೀಡೆಯಲ್ಲಿ ಪಾಲ್ಗೊಳ್ಳುವುದರಿಂದ ಸೋಲು-ಗೆಲುವನ್ನು ಸಮಾನವಾಗಿ ಸ್ವೀಕರಿಸಲು ಸಾಧ್ಯ. ಜಿಲ್ಲೆಯಲ್ಲಿ ಹೆಚ್ಚು ಕ್ರೀಡಾ ಚಟುವಟಿಕೆಗಳು ನಡೆಯುತ್ತಿದ್ದು, ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸುವಂತಹ ಮನೋಭಾವನೆ ಬೆಳೆಯುತ್ತದೆ. ಕ್ರೀಡಾಕೂಟದಿಂದ ಉತ್ತಮ ಪ್ರತಿಭೆಗಳು ಹೊರಹೊಮ್ಮುವಂತಾಗಲಿ ಎಂದರು.

ಕೊಡಗು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಅಧ್ಯಕ್ಷ ಕೊಡಂದೇರ ಪಿ. ಬಾಂಡ್ ಗಣಪತಿ ಮಾತನಾಡಿ, 62 ವರ್ಷಗಳಿಂದ ನಿರಂತರವಾಗಿ 5 ಗ್ರಾಮಗಳ ಜನರು ಒಗ್ಗೂಡಿ ಕ್ರೀಡಾಕೂಟವನ್ನು ಆಯೋಜಿಸುತ್ತಿರುವುದು ಶ್ಲಾಘನೀಯ. ಶಾಲಾ ಕಾಲೇಜುಗಳ ಕ್ರೀಡಾಕೂಟವನ್ನು ಮೀರಿಸುವಂತೆ ಗ್ರಾಮಸ್ಥರು ಒಟ್ಟಾಗಿ ಕ್ರೀಡಾಕೂಟ ನಡೆಸುತ್ತಿದ್ದಾರೆ. ಹಿರಿಯರ ದೂರದೃಷ್ಟಿಯಿಂದ ಸಮಾಜದಲ್ಲಿ ಕ್ರೀಡಾಕೂಟದ ಮೂಲಕ ಉತ್ತಮ ಬಾಂಧವ್ಯ ನಿರ್ಮಾಣವಾಗುತ್ತಿದೆ ಎಂದರು.

ಪಾರಾಣೆ ಕೇಂದ್ರ ಕ್ರೀಡಾ ಮಂಡಳಿ ಅಧ್ಯಕ್ಷ ಮಚ್ಚಂಡ ಸಾಬಾ ದೇವಯ್ಯ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಅಂತಾರಾಷ್ಟ್ರೀಯ ಆಟಗಾರ್ತಿ ಮುಲ್ಲೇರ ಪೂವಮ್ಮ ಪೂವಣ್ಣ ಅವರನ್ನು ಕ್ರೀಡಾ ಮಂಡಳಿ ಅವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಪುರುಷರ ಹಾಕಿ ಪಂದ್ಯಾಟದಲ್ಲಿ ಬಾವಲಿ ಗ್ರಾಮದ ತಂಡವು ಪ್ರಥಮ ಸ್ಥಾನ ಕಿರುಂದಾಡು ಗ್ರಾಮದ ತಂಡ ದ್ವಿತೀಯ ಸ್ಥಾನ ಗಳಿಸಿತು. ವಾಲಿಬಾಲ್ ಪಂದ್ಯದಲ್ಲಿ ಕಿರುಂದಾಡು ತಂಡ ಪ್ರಥಮ ಸ್ಥಾನ ಗಳಿಸಿದರೆ ಬಾವಲಿ ತಂಡ ದ್ವಿತೀಯ ಸ್ಥಾನ ಗಳಿಸಿತು. ಮಹಿಳೆಯರ ಥ್ರೋಬಾಲ್ ಸ್ಪರ್ಧೆಯಲ್ಲಿ ಬಲಮುರಿ ತಂಡ ಪ್ರಥಮ ಸ್ಥಾನವನ್ನು, ಕೈಕಾಡು ತಂಡ ದ್ವಿತೀಯ ಸ್ಥಾನವನ್ನು ಗಳಿಸಿತು. ಹಗ್ಗಜಗ್ಗಾಟ ಸ್ಪರ್ಧೆಯಲ್ಲಿ ಬಲಮುರಿ ತಂಡ ಪ್ರಥಮ ಸ್ಥಾನ, ಹಾಗೂ ಕೈಕಾಡು ತಂಡ ದ್ವಿತೀಯ ಸ್ಥಾನ ಗಳಿಸಿತು.

ಪುರುಷರ ವಿಭಾಗದಲ್ಲಿ ಗ್ರಾಮಾಂತರ ವೈಯಕ್ತಿಕ ಚಾಂಪಿಯನ್ ಆಗಿ ಕೈಕಾಡಿನ ಬೊಳ್ಳಂಡ ರೋಶನ್ ಹಾಗೂ ಕಿರುಂದಾಡಿನ ಕುಮ್ಮಂಡ ಅಮಿನ್ ಸೋಮಯ್ಯ ಹೊರಹೊಮ್ಮಿದರು. ಮಹಿಳೆಯರ ವಿಭಾಗದಲ್ಲಿ ಬಲಮುರಿಯ ತ್ರಿಷಾ ದೇಚಮ್ಮ ಹಾಗೂ ರೀತ್ ಪಾಲಂದಿರ ವೈಯಕ್ತಿಕ ಚಾಂಪಿಯನ್‌ಶಿಪ್ ಗಳಿಸಿದರು. ಕಿರುಂದಾಡು ಗ್ರಾಮವು ಗ್ರಾಮಾಂತರ ಸಮಗ್ರ ಚಾಂಪಿಯನ್‌ಶಿಪ್ ಗಳಿಸಿತು. ಗೇಮ್ಸ್ ವಿಭಾಗದಲ್ಲಿ ಬಾವಲಿ ಮತ್ತು ಕಿರುಂದಾಡು ಗ್ರಾಮಗಳು ಸಮಾನ ಅಂಕ ಗಳಿಸಿ ಕಿರದಾಡ ಗ್ರಾಮ ಚಾಂಪಿಯನ್ ಆಗಿ ಕ್ರೀಡಾಕೂಟದ ಸಮಗ್ರ ಪ್ರಶಸ್ತಿಗೆ ಭಾಜನವಾಯಿತು. ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಟ್ರೋಫಿ ಹಾಗೂ ನಗದು ಬಹುಮಾನಗಳನ್ನು ವೇದಿಕೆಯಲ್ಲಿದ್ದ ಗಣ್ಯರು ವಿತರಿಸಿ ಶುಭ ಹಾರೈಸಿದರು.

ಈ ಸಂದರ್ಭ ಚೆಸ್ಕಾಮಿನ ಭಟ್ಟಾರಂಡ ಮುತ್ತಣ್ಣ., ಕೊಣಂಜಗೇರಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಕಟ್ಟಿ ಕುಶಾಲಪ್ಪ ಕಿರುಂದಾಡು ಗ್ರಾಮದ ಬಾದುಮಂಡ ನಂಜಪ್ಪ, ವಕೀಲ ಬಿಟ್ಟೀರ ರಾಜಪ್ಪ, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಅಪ್ಪನೆರವಂಡ ರಾಜಾ ಪೂವಯ್ಯ, ದತ್ತಿನಿಧಿ ಅಧ್ಯಕ್ಷ ನಾಯಕಂಡ ದೀಪು ಚಂಗಪ್ಪ, ಉಪಾಧ್ಯಕ್ಷರಾದ ಬೊಳ್ಳಚೆಟ್ಟಿರ ಶಾಂತಿ, ಗೌರವ ಕಾರ್ಯದರ್ಶಿ ಅಪ್ಪನೆರವಂಡ ರಾಜೇಶ್, ನಿರ್ದೇಶಕರು ಹಾಗೂ 5 ಗ್ರಾಮಗಳ ವಿವಿಧ ಸಮಿತಿ ಸದಸ್ಯರು ಉಪಸ್ಥಿತರಿದ್ದರು. ಬೊಳ್ಳಂಡ ಗೀತಾ ಗಿರೀಶ್ ಅವರ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡ ಕಾರ್ಯಕ್ರಮವನ್ನು ಚೈಯಂಡ ಕಸ್ತೂರಿ ರೂಪಿಸಿ ಬೋಳಕಾರಂಡ ಮಂಜು ಮಾಚಯ್ಯ ವಂದಿಸಿದರು.

ನ.20, ಕೇರಳ ದೇವಸಂ ಬೋರ್ಡ್, ಬೈತೂರು ದೇವಾಲಯದ ತಕ್ಕ ಮುಖ್ಯಸ್ಥರ ಜಂಟಿ ಸಭೆ



ವಿರಾಜಪೇಟೆ,ನ.15– ಕೊಡಗಿನ ಬಹುತೇಕ ದೇವರುಗಳು ಕೇರಳ ಮೂಲದ ದೇವರುಗಳಾಗಿದ್ದು, ಮೂಲಸ್ಥಾನವಾದ ಕೇರಳದ ಬೈತೂರು ದೇವಾಲಯದಲ್ಲಿ ಮೂಲಸೌಕರ್ಯಗಳ ಕೊರತೆಯಿದ್ದು, ನ.20 ರಂದು ಬೆಳಗ್ಗೆ 10.30 ಗಂಟೆಗೆ ವಿರಾಜಪೇಟೆ ಕೊಡವ ಸಮಾಜದ ರಿಕ್ರಿಯೇಷನ್ ಕ್ಲಬ್‌ನ ಸಭಾಂಗಣದಲ್ಲಿ ಕೇರಳ ದೇವಸಂ ಬೋರ್ಡ್ ಹಾಗೂ ಬೈತೂರು ದೇವಾಲಯದ ತಕ್ಕ ಮುಖ್ಯಸ್ಥರ ಜಂಟಿ ಸಭೆಯನ್ನು ಕರೆಯಲಾಗಿದೆ ಎಂದು ಬೈತೂರು ದೇವಾಲಯದ ದೇವತಕ್ಕರಾದ ಮುಗ್ಗೆರ ಪೊನ್ನಪ್ಪ ತಿಳಿಸಿದ್ದಾರೆ.

ವಿರಾಜಪೇಟೆ ಪ್ರೆಸ್ ಕ್ಲಬ್‌ನಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿವರ್ಷ ಜನವರಿ ನಾಲ್ಕನೇ ವಾರದಲ್ಲಿ ಬೈತೂರು ದೇವಾಲಯದಲ್ಲಿ ಉತ್ಸವ ನಡೆಯುತ್ತಿದ್ದು, ಕೊಡಗಿನವರ ಪ್ರಾತಿನಿಧ್ಯ ಹೆಚ್ಚಿನದಾಗಿದೆ. ದೇವಾಲಯದಲ್ಲಿ ಮೂಲ ಸೌಕರ್ಯಗಳ ಕೊರತೆ ಇದ್ದು ದೇವಾಲಯದಿಂದ ನದಿಗೆ ತೆರಳುವ ರಸ್ತೆ ಅಭಿವೃದ್ಧಿ, ದೇವಾಲಯದಲ್ಲಿ ಭಕ್ತರು ಕುಳಿತುಕೊಳ್ಳಲು ಗ್ಯಾಲರಿ ನಿರ್ಮಾಣ, ಬೇಟೆ ಕೋರ್‌ಮಗನ್ ದೇವಾಲಯದ ಸುತ್ತ ತಡೆಗೋಡೆ, ದೇವಾಲಯದ ಎಡಬದಿಯ ಗೋಪುರ ನಿರ್ಮಾಣ ಹಾಗೂ ಭೋಜನಾಲಯ ನಿರ್ಮಾಣ ಸೇರಿದಂತೆ ಇತ್ಯಾದಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದರು.

ಅಭಿವೃದ್ಧಿ ಕಾರ್ಯಗಳಿಗೆ ಒಂದು ಕೋಟಿಗೂ ಅಧಿಕ ವೆಚ್ಚವಾಗಲಿದೆ. ದೇವಾಲಯವು ಕೇರಳ ರಾಜ್ಯದ ಅಧೀನದಲ್ಲಿರುವ ಕಾರಣದಿಂದ, ನೇರವಾಗಿ ನಿರ್ಣಯ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಎಂದು ತಿಳಿಸಿದ ಅವರು, ಕಳೆದ ತಿಂಗಳು ಭಕ್ತರು ಮತ್ತು ತಕ್ಕಮುಖ್ಯಸ್ಥರು ಸೇರಿ ಸಭೆ ನಡೆಸಿ ಆ ಸಭೆಯಲ್ಲಿ ದೇವಸಂ ಬೋರ್ಡ್ ಹಾಗೂ ತಕ್ಕಮುಖ್ಯಸ್ಥರ ಜಂಟಿ ಸಭೆಯಲ್ಲಿ ಅಭಿವೃದ್ಧಿ ಕಾರ್ಯಗಳ ಚರ್ಚೆ ನಡೆಸುವಂತೆ ನಿರ್ಣಯ ಕೈಗೊಂಡ ಹಿನ್ನೆಲೆಯಲ್ಲಿ ನ.20 ರಂದು ಸಭೆ ಕರೆಯಲಾಗಿದೆ ಎಂದರು.

ದೇವಾಲಯ ಟ್ರಸ್ಟಿಯ ಮಾಳೇಟಿರ ರತ್ನ ಸುಬ್ಬಯ್ಯ ಮಾತನಾಡಿ, ಅಂದಿನ ಸಭೆಗೆ ಕೇರಳದ ಮಲಬಾರ್ ದೇವಾಲಯದ ಕಮಿಷನರ್ ನಂದಕುಮಾರ್, ದೇವಸಂ ಬೋರ್ಡ್‌ನ ಅಧ್ಯಕ್ಷ ಮುರುಳಿ, ನಿರ್ದೇಶಕ ಮಧುಸೂದನ್, ವಿರಾಜಪೇಟೆ ಶಾಸಕ ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ, ವಿಧಾನಪರಿಷತ್ ಸದಸ್ಯ ಸುಜಾಕುಶಾಲಪ್ಪ ಅವರುಗಳು ಭಾಗವಹಿಸುವರು. ಗೋಷ್ಠಿಯಲ್ಲಿ ಬೈತೂರಪ್ಪ ದೇವಸ್ಥಾನ ಭವನದ ಅಧ್ಯಕ್ಷರಾದ ಮುಗ್ಗೆರ ರಂಜಿ ದೇವಯ್ಯ, ಭಕ್ತ ಸಂಘದ ಸದಸ್ಯರಾದ ಚೇಂದಂಡ ಶಿವಕುಮಾರ್, ಮಾಳೇಟಿರ ಅಜಿತ್ ಪೂವಣ್ಣ ಉಪಸ್ಥಿತರಿದ್ದರು.

ಗುಡ್ಡೆಹೊಸೂರು ಬಳಿ ಕಾರು ಅಡ್ಡಗಟ್ಟಿ ದರೋಡೆ

ಇಬ್ಬರ ಬಂಧನ, ಉಳಿದವರ ಸೆರೆಗೆ ಶೋಧ

ಕುಶಾಲನಗರ, ನ.15– ತಾಲೂಕಿನ ಗುಡ್ಡೆಹೊಸೂರು ಬಳಿ ಶನಿವಾರ ರಾತ್ರಿ ಕಾರು ಅಡ್ಡಗಟ್ಟಿ ದರೋಡೆ ನಡೆಸಿ ಅವರಿಂದ ಹಣ, ಮೊಬೈಲ್ ಹಾಗೂ ಕಾರು ಅಪಹರಿಸಿ ದರೋಡೆಕೋರರು ಪರಾರಿಯಾಗಿದ್ದು, ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಕಾಸರಗೋಡಿನ ಲೋಹಿತ್ ದಾಸ್ ಹಾಗೂ ಜಶ್ವಿನ್ ಎಂಬುವವರು ಬೆಂಗಳೂರಿನಿಂದ ಕಾಸರಗೋಡಿಗೆ ಹೋಗುತ್ತಿದ್ದ ವೇಳೆ ಆರು ಮಂದಿ ಗುಂಪೊಂದು ಕಾರು ಅಡ್ಡಗಟ್ಟಿ ಅವರಿಂದ ಬೆಲೆ ಬಾಳುವ ಮೊಬೈಲ್ ಕಸಿದು ಕಾರು ತೆಗೆದುಕೊಂಡು ಹೋಗುತ್ತಿದ್ದ ವೇಳೆ ಅಪಘಾತಕ್ಕೆ ಒಳಗಾಗಿದ್ದು, ಅಲ್ಲಿಯೇ ಕಾರು ಬಿಟ್ಟು ಆರೋಪಿಗಳು ಪರಾರಿಯಾಗಿದ್ದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಮದಾಪಟ್ಟಣ ಗ್ರಾಮದ ವಿನು ಮತ್ತು ದಿನು ಎಂಬ ಇಬ್ಬರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ಕೈಗೊಂಡಿದ್ದಾರೆ. ಈ ಕುರಿತು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ವಿಶೇಷ ಪೊಲೀಸ ತಂಡ ರಚನೆ ಮಾಡಿ ಪ್ರಕರಣ ತನಿಖೆ ಕೈಗೊಂಡಿದ್ದಾರೆ. ವಶಕ್ಕೆ ಪಡೆದಿರುವ ಇಬ್ಬರನ್ನೂ ತೀವ್ರ ವಿಚಾರಣೆ ಒಳಪಡಿಸಿರುವ ಪೊಲೀಸರು ಉಳಿದ ನಾಲ್ವರ ಪತ್ತೆಗೆ ಕ್ರಮಕೈಗೊಂಡಿದ್ದಾರೆ. ಕುಶಾಲನಗರ ಗ್ರಾಮಾಂತರ ಠಾಣೆಗೆ ಭೇಟಿ ನೀಡಿದ ಎಸ್ಪಿ ರಾಮರಾಜನ್ ಪ್ರಕರಣ ಕುರಿತು ಮಾಹಿತಿ ಪಡೆದುಕೊಂಡರು. ದರೋಡೆ ಪ್ರಕರಣ ತನಿಖೆ ತೀವ್ರಗೊಳಿಸಿದ್ದು, ಸದ್ಯದಲ್ಲಿಯೇ ಉಳಿದ ದರೋಡೆಕೋರರನ್ನು ಬಂಧಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

ಇಂದು 70ನೇ ಅಖಿಲ ಭಾರತ ಸಹಕಾರ ಸಪ್ತಾಹ

ಮಡಿಕೇರಿ, ನ.15– ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ, ಕೊಡಗು ಜಿಲ್ಲಾ ಸಹಕಾರ ಯೂನಿಯನ್, ಸಹಕಾರ ಇಲಾಖೆ, ಮಡಿಕೇರಿ ಪಟ್ಟಣ ಸಹಕಾರ ಬ್ಯಾಂಕ್ ನಿ. ಇವರ ಸಂಯುಕ್ತ ಆಶ್ರಯದಲ್ಲಿ 70ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ 'ಸಹಕಾರ ಸಂಸ್ಥೆಗಳನ್ನು ಡಿಜಿಟಲೀಕರಣಗೊಳಿಸಲು ತಾಂತ್ರಿಕತೆಯ ಅಳವಡಿಕೆ ಮತ್ತು ಉನ್ನತೀಕರಣ' ದಿನಾಚರಣೆಯು ನ.16 ರಂದು ಬೆಳಗ್ಗೆ 11 ಗಂಟೆಗೆ ಕೊಹಿನೂರು ರಸ್ತೆಯ ಬಾಲಭವನ (ಚೇತನ ಚಿಲುಮೆ) ದಲ್ಲಿ ನಡೆಯಲಿದೆ. ಕೊಡಗು ಜಿಲ್ಲಾ ಸಹಕಾರ ಯೂನಿಯನ್‌ನ ಅಧ್ಯಕ್ಷರು ಹಾಗೂ ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ನಿರ್ದೇಶಕ ಎ.ಕೆ.ಮನುಮುತ್ತಪ್ಪ, ಮಡಿಕೇರಿ ಪಟ್ಟಣ ಸಹಕಾರ ಬ್ಯಾಂಕ್‌ನ ಅಧ್ಯಕ್ಷ ಸಿ.ಕೆ.ಬಾಲ ಕೃಷ್ಣ, ವಿಧಾನಸಭೆಯ ಮಾಜಿ ಸಭಾಪತಿ ಕೆ.ಜಿ.ಬೋಪಯ್ಯ, ಕೊಡಗು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ಅಧ್ಯಕ್ಷ ಕೊಡಂದೇರ ಪಿ.ಬಾಂಡ್ ಗಣಪತಿ, ಕರ್ನಾಟಕ ರಾಜ್ಯ ಸಹಕಾರ ಹಾಪ್‌ಕಾಮ್ಸ್, ಕೊಡಗು ಜಿಲಾ ಸಹಕಾರ ಯೂನಿಯನ್‌ನ ನಿರ್ದೇಶಕ ಬಿ.ಎ.ರಮೇಶ್ ಚಂಗಪ್ಪ ಇತರರು ಪಾಲ್ಗೊಳ್ಳಲಿದ್ದಾರೆ.

ಚಾಮರಾಜನಗರದಲ್ಲಿ ಬಿರ್ಸಾಮುಂಡ ಜಯಂತಿ, ಜನಜಾತೀಯ ಗೌರವ್ ದಿವಸ್-2023 ಆಚರಣೆ

ಬಿರ್ಸಾಮುಂಡ ಬುಡಕಟ್ಟು ಜನಾಂಗದ ದನಿ



ಚಾಮರಾಜನಗರ, ನ.15– ಅಪ್ರತಿಮ ದೇಶಪ್ರೇಮಿಯಾಗಿದ್ದ ಭಗವಾನ್ ಬಿರ್ಸಾಮುಂಡ ಅವರು ದೇಶದ ಎಲ್ಲಾ ಬುಡಕಟ್ಟು ಜನಾಂಗದ ದನಿಯಾಗಿದ್ದರು ಎಂದು ಯುವ ಜನ ಸೇವಾ ಮತ್ತು ಕ್ರೀಡೆ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವ ಬಿ. ನಾಗೇಂದ್ರ ಅಭಿಪ್ರಾಯಪಟ್ಟರು.

ನಗರದ ಡಾ. ಬಿ.ಆರ್ ಅಂಬೇಡ್ಕರ್ ಭವನದಲ್ಲಿಂದು ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ ರಾಜ್ಯಮಟ್ಟದ 'ಭಗವಾನ್ ಶ್ರೀ ಬಿರ್ಸಾಮುಂಡ ಜಯಂತಿ' ಹಾಗೂ 'ಜನಜಾತೀಯ ಗೌರವ್ ದಿವಸ್-2023' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬ್ರಿಟಿಷರು ಬುಡಕಟ್ಟು ಜನಾಂಗದವರ ಹಕ್ಕುಗಳನ್ನು ಕಸಿದು ಶೋಷಣೆ ಮಾಡುತ್ತಿದ್ದುದನ್ನು ಬಾಲ್ಯದಿಂದಲೇ ಅರಿತಿದ್ದ ಬಿರ್ಸಾಮುಂಡ ಅವರು ಅದಿವಾಸಿ ಯುವಕರನ್ನು ಸಂಘಟಿಸಿ ಗೆರಿಲ್ಲಾ ಯುದ್ಧದ ತರಬೇತಿ ನೀಡಿ ಬ್ರಿಟಿಷರೊಂದಿಗೆ ಯುದ್ಧ ಮಾಡಿ ಹಿಮ್ಮೆಟ್ಟಿಸಿದ್ದರು. ಉತ್ತಮ ನಾಯಕತ್ವ ಗುಣ ಹೊಂದಿದ್ದ ಬಿರ್ಸಾಮುಂಡ ಜೀವಂತವಿರುವವರೆಗೂ ಬ್ರಿಟಿಷರು ಅರಣ್ಯ ಪ್ರವೇಶಿಸದಂತೆ ತಡೆದು ಬ್ರಿಟಿಷರಿಗೆ ಸಿಂಹಸ್ವಪ್ನರಾಗಿದ್ದರು ಎಂದರು.

ರಾಜ್ಯಸರ್ಕಾರ ಬುಡಕಟ್ಟು ಸಮುದಾಯದ ಅಭಿವೃದ್ಧಿಗಾಗಿ ಹಲವಾರು ಯೋಜನೆ, ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ. ಅದಿವಾಸಿ ಜನರಲ್ಲಿ ಅಪೌಷ್ಟಿಕತೆಯನ್ನು ಹೋಗಲಾಡಿಸಲು ಈ ಹಿಂದೆ 6 ತಿಂಗಳ ಅವಧಿಗೆ ನೀಡುತ್ತಿದ್ದ ಪೌಷ್ಟಿಕ ಆಹಾರವನ್ನು ವರ್ಷಪೂರ್ತಿ ನೀಡಲು ಸರ್ಕಾರ ಮುಂದಾಗಿದೆ. ಅದಿವಾಸಿ ಜನರ ಜೊತೆ ಸರ್ಕಾರವಿದೆ. ಬುಡಕಟ್ಟು ಜನರು ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಉತ್ತಮ ಆರೋಗ್ಯ ಹೊಂದಬೇಕು. ಸರ್ಕಾರದ ಸೌಲಭ್ಯಗಳನ್ನು ಅದಿವಾಸಿಗಳು ಸದ್ಬಳಕೆ ಮಾಡಿಕೊಂಡು ಆರ್ಥಿಕವಾಗಿ ಸದೃಢರಾಗಬೇಕು. ಬಿರ್ಸಾಮುಂಡ ಅವರ ಆದರ್ಶ ನಾಯಕತ್ವ ಗುಣಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸಚಿವರಾದ ನಾಗೇಂದ್ರ ಅವರು ತಿಳಿಸಿದರು.

ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಿ, ಕುಡುಗೋಲು-ಕಣರೋಗ ಕುರಿತ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ಪಶುಸಂಗೋಪನೆ ಹಾಗೂ ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್, ಬಿರ್ಸಾಮುಂಡ ಜಯಂತಿ ವಿಶೇಷವಾದ ಕಾರ್ಯಕ್ರಮವಾಗಿದ್ದು, ದೇಶಾದ್ಯಂತ ಆಚರಿಸಲಾಗುತ್ತಿದೆ. ಬಿರ್ಸಾಮುಂಡ ಅವರು ಬ್ರಿಟಿಷರ ವಿರುದ್ಧ ಹೋರಾಡಿ ಸಾಮಾನ್ಯ ಬುಡಕಟ್ಟು ಜನಾಂಗಕ್ಕೆ ಬದುಕು ಕಟ್ಟಿಕೊಟ್ಟರು. ಅದಿವಾಸಿ ಜನರ ಏಳಿಗೆಗೆ ಹಾಗೂ ಒಳಿತಿಗೆ ಶ್ರಮಿಸಿದ ಮುಂಚೂಣಿ ನಾಯಕರಾಗಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು, ಬಿರ್ಸಾಮುಂಡ ಬುಡಕಟ್ಟು ಜನರ ಶಕ್ತಿಯಾಗಿದ್ದಾರೆ. ಅವರ ಹೋರಾಟ ಗುಣಗಳನ್ನು ಆದಿವಾಸಿಗಳು ಮೈಗೂಡಿಸಿಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಸಿ. ಪುಟ್ಟರಂಗಶೆಟ್ಟಿ, ಹನೂರು ಶಾಸಕ ಎಂ.ಆರ್. ಮಂಜುನಾಥ್ ಮಾತನಾಡಿದರು. ಮುಖ್ಯ ಭಾಷಣ ಮಾಡಿದ ಯಳಂದೂರು ಬಿಳಿಗಿರಿರಂಗನಬೆಟ್ಟದ ಬುಡಕಟ್ಟು ಸಮುದಾಯದ ಮುಖಂಡರಾದ ಡಾ. ಸಿ. ಮಾದೇಗೌಡ ಅವರು ಬುಡಕಟ್ಟು ಜನರ ಹಕ್ಕುಗಳಿಗಾಗಿ ಹೋರಾಡಿದ ಬಿರ್ಸಾಮುಂಡ ಅವರಿಗೆ ಗೌರವ ಸಲ್ಲಿಸಲು ಸರ್ಕಾರವು ಜನಜಾತೀಯ ಗೌರವ್ ದಿವಸ್ ಎಂದು ಘೋಷಣೆ ಮಾಡಿದೆ. ಹಿಂದೆ ತಾಲೂಕು ಮಟ್ಟದಲ್ಲಿ ಆಚರಿಸಲಾಗುತ್ತಿದ್ದ ಬಿರ್ಸಾಮುಂಡ ಅವರ ಜಯಂತಿ ರಾಜ್ಯಮಟ್ಟದಲ್ಲಿ ಆಯೋಜನೆಯಾಗಿದೆ. ಇದು ಅದಿವಾಸಿ ಸಮುದಾಯಕ್ಕೆ ಸಿಕ್ಕ ಬಹುದೊಡ್ಡ ಗೌರವವಾಗಿದೆ ಎಂದರು.

ಇದೇ ವೇಳೆ ಬುಡಕಟ್ಟು ಸಮುದಾಯದ ಒಳಿತಿಗೆ ಶ್ರಮಿಸಿ ಸಾಧನೆಗೈದ ಬೆಟ್ಟಕುರುಬ ಜನಾಂಗದ ರಮೇಶ, ನಾಟಿ ವೈದ್ಯರಾದ ಮಾದಮ್ಮ ಹಾಗೂ ಸೋಲಿಗ ಸಂಸ್ಕೃತಿಗೆ ಕೊಡುಗೆ ನೀಡಿದ ಕೋಣೂರುಗೌಡ ಸೇರಿದಂತೆ ಇತರರನ್ನು ಸನ್ಮಾನಿಸಿ, ಗೌರವಿಸಲಾಯಿತು. ಅಲ್ಲದೆ ಸ್ವಾತಂತ್ರ್ಯ ಹೋರಾಟಗಾರರ ವೇಷಭೂಷಣಗಳನ್ನು ಧರಿಸಿದ ಮಕ್ಕಳು ಕಾರ್ಯಕ್ರಮದಲ್ಲಿ ಗಮನ ಸೆಳೆದರು. ವೇದಿಕೆ ಮುಂಭಾಗದಲ್ಲಿ ಉತ್ತರಕನ್ನಡ ಜಿಲ್ಲೆಯ ಡೆಕ್ಕೆ ಕುಣಿತ ಹಾಗೂ ಸೋಲಿಗರ ಗೊರವರ ನೃತ್ಯ ಎಲ್ಲರ ಮನಸೂರೆಗೊಂಡಿತು.

ಶಾಸಕ ಎ.ಆರ್. ಕೃಷ್ಣಮೂರ್ತಿ, ಮರಿತಿಬ್ಬೇಗೌಡ, ನಗರಸಭಾ ಸದಸ್ಯ ಎಂ. ಮಹೇಶ್, ದೆಹಲಿಯ ಆದಿವಾಸಿ ಸಮನ್ವಯ ಮಂಚ್ ಭಾರತ್ ಅಧ್ಯಕ್ಷ ವಿ. ಮುತ್ತಯ್ಯ, ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆನಂದ್ ಪ್ರಕಾಶ್ ಮೀನಾ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ನಿರ್ದೇಶಕ ಬಿ. ಕಲ್ಲೇಶ್, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕ ಪ್ರೊ. ಎಲ್. ಶ್ರೀನಿವಾಸ್, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಕೆ. ಮಂಜುಳ, ಗಿರಿಜನ ಪ್ರಗತಿ ಫೌಂಡೇಷನ್ ಅಧ್ಯಕ್ಷೆ ಡಾ. ರತ್ನಮ್ಮ, ಗಿರಿಜನ ಮುಖಂಡರಾದ ಕೇತಮ್ಮ, ರಾಜ್ಯ, ಜಿಲ್ಲಾ ಹಾಗೂ ತಾಲೂಕು ಬುಡಕಟ್ಟು ಸೋಲಿಗ ಅಭಿವೃದ್ಧಿ ಸಂಘಗಳ ಪದಾಧಿಕಾರಿಗಳು, ವಿವಿಧ ಸಂಘ ಸಂಸ್ಥೆಗಳ ಮುಖಂಡರು ಕಾರ್ಯಕ್ರಮದಲ್ಲಿ ಇದ್ದರು.

ಮಾದಪ್ಪನ ಸನ್ನಿಧಿಯಲ್ಲಿ ಅದ್ಧೂರಿ ದೀಪಾವಳಿ ರಥೋತ್ಸವ

ಸಾವಿರಾರು ಭಕ್ತರಿಂದ ಉಘೇ ಮಾದಪ್ಪ ಉದ್ಘೋಷ



ಚಾಮರಾಜನಗರ, ನ.15– ಜಿಲ್ಲೆಯ ಪ್ರಮುಖ ಯಾತ್ರಾಸ್ಥಳವಾದ ಹನೂರು ತಾಲೂಕಿನ ಶ್ರೀಮಲೆ ಮಹದೇಶ್ವರ ಬೆಟ್ಟದಲ್ಲಿ ಮಂಗಳವಾರ ದೀಪಾವಳಿ ರಥೋತ್ಸವ ಅದ್ಧೂರಿಯಾಗಿ ನೆರವೇರಿತು.

ಬೆಳಗ್ಗೆ 8.50ರಿಂದ 9.10 ರವರೆಗಿನ ಶುಭ ಲಗ್ನದಲ್ಲಿ ನಡೆದ ರಥೋತ್ಸವಕ್ಕೆ ಮೊದಲು ಮಲೆ ಮಹದೇಶ್ವರ ಬೆಟ್ಟದ ಬೇಡಗಂಪಣ ಸಮುದಾಯದ ಅರ್ಚಕರಿಂದ ಪೂಜೆ ಸಲ್ಲಿಸಲಾಯಿತು. ಬಳಿಕ ಬೇಡಗಂಪಣ ಸಮುದಾಯದ ಹೆಣ್ಣು ಮಕ್ಕಳು ರಥಕ್ಕೆ ಬೆಲ್ಲದಾರತಿ ಮಾಡಿದರು.

ನಂತರ ರಥದಲ್ಲಿ ಸ್ವಾಮಿಯ ಉತ್ಸವ ಮೂರ್ತಿ ಪ್ರತಿಷ್ಠಾಪಿಸಿ ದೇವಾಲಯದ ಸುತ್ತ ಒಂದು ಬಾರಿ ತೇರು ಎಳೆಯಲಾಯಿತು. ದೇವಾಲಯದ ಆವರಣದಲ್ಲಿ ಸೇರಿದ್ದ ಸಾವಿರಾರು ಭಕ್ತರ 'ಉಘೇ ಮಾದಪ್ಪ' ಎಂಬ ಹರ್ಷೋದ್ಗಾರದೊಂದಿಗೆ ರಥವನ್ನು ಎಳೆದರು. ರಥೋತ್ಸವವನ್ನು ಕಣ್ತುಂಬಿಕೊಂಡ ಸಾವಿರಾರು ಭಕ್ತರು ತೇರಿಗೆ ಹೂ, ಹಣ್ಣು, ಧಾನ್ಯ, ನಾಣ್ಯ ಎಸೆದು ಹರಕೆ ತೀರಿಸಿದರು. ಸಾಲೂರು ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಅವರ ನೇತೃತ್ವದಲ್ಲಿ ರಥೋತ್ಸವದ ಧಾರ್ಮಿಕ ವಿಧಿ ವಿಧಾನಗಳು ನಡೆದವು. ಪ್ರಾಧಿಕಾರದ ಕಾರ್ಯದರ್ಶಿ ಸರಸ್ವತಿ ನೇತೃತ್ವದಲ್ಲಿ ಸಕಲ ವ್ಯವಸ್ಥೆಯನ್ನು ಕೈಗೊಳ್ಳಲಾಗಿತ್ತು. ಕಳೆದ 3 ದಿನಗಳಿಂದ ಕ್ಷೇತ್ರಕ್ಕೆ ರಾಜ್ಯ, ಹೊರ ರಾಜ್ಯದಿಂದ 4ರಿಂದ 5ಲಕ್ಷ ಮಂದಿ ಭೇಟಿ ನೀಡಿದ್ದಾರೆ.

ಬೆಟ್ಟದಲ್ಲಿ ಬೆಳಗ್ಗೆಯಿಂದಲೇ ಜಿಟಿ ಜಿಟಿ ಮಳೆ ಸುರಿಯುತ್ತಿದ್ದು, ಅದನ್ನು ಲೆಕ್ಕಿಸದೆ ದೂರದ ಊರು, ಹೊರ ಜಿಲ್ಲೆ, ಹೊರ ರಾಜ್ಯಗಳಿಂದ ಬಂದಿದ್ದ ಭಕ್ತರು ರಥೋತ್ಸವದಲ್ಲಿ ಉತ್ಸಾಹದಿಂದ ಪಾಲ್ಗೊಂಡರು.

ನಿರಂತರ ದಾಸೋಹ ವ್ಯವಸ್ಥೆ: ಜಾತ್ರೆಗೆ ಬರುವ ಲಕ್ಷಾಂತರ ಮಂದಿ ಭಕ್ತರಿಗೆ ಪ್ರಾಧಿಕಾರವು ನಿರಂತರ ದಾಸೋಹಕ್ಕೆ ಮುಂದಾಗಿದ್ದು ಬೆಳಗ್ಗೆ ತಿಂಡಿ, ಮಧ್ಯಾಹ್ನ, ರಾತ್ರಿ ಊಟದ ವ್ಯವಸ್ಥೆ ಮಾಡಲಾಗಿತ್ತು. ಭಕ್ತರಿಗೆ ಅಲ್ಲಲ್ಲಿ ಕುಡಿಯುವ ನೀರು, ಶೌಚಗೃಹದ ವ್ಯವಸ್ಥೆ ಮಾಡಲಾಗಿದೆ. ಜೊತೆಗೆ ಭಕ್ತರಿಗೆ ಪ್ರಸಾದವನ್ನಾಗಿ ನೀಡುವ ಸಲುವಾಗಿ ಸುಮಾರು ನಾಲ್ಕರಿಂದ ಐದು ಲಕ್ಷ ಲಡ್ಡು ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

ಕಂಗೊಳಿಸಿದ ಮಾದಪ್ಪನ ಸನ್ನಿಧಿ: ದೀಪಾವಳಿ ಜಾತ್ರೆ ಅಂಗವಾಗಿ ದೇವಾಲಯದ ರಾಜಗೋಪುರ, ಮುಖ್ಯ ದ್ವಾರ ಹಾಗೂ ಇತರೆ ದ್ವಾರಗಳನ್ನು ತಳಿರು ತೋರಣ, ಹೂಗಳಿಂದ ಅಲಂಕರಿಸಲಾಗಿತ್ತು. ಅಲ್ಲದೇ ದೇವಾಲಯ ಹಾಗೂ ಸಾಲೂರು ಮಠಕ್ಕೆ ತೆರಳುವ ಮಾರ್ಗವನ್ನು ಹಾಗೂ ಪ್ರಮುಖ ರಸ್ತೆಗಳಲ್ಲಿ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಪಾದಯಾತ್ರೆ ಸೇರಿದಂತೆ ಬೆಟ್ಟಕ್ಕೆ ಬಂದ ಲಕ್ಷಾಂತರ ಭಕ್ತರು ಮಾದಪ್ಪನಿಗೆ ಉಘೇ ಎಂದು ದೇವಾಲಯದ ಸೌಂದರ್ಯವನ್ನು ಕಣ್ತುಂಬಿಕೊಂಡರು.

ಪೊಲೀಸ್ ಬಂದೋಬಸ್ತ್: ಬೆಟ್ಟಕ್ಕೆ ಹೋಗಲು ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸುವ ಸಲುವಾಗಿ ತಾಳಬೆಟ್ಟದಲ್ಲಿ ಬಸ್ ನಿಲ್ದಾಣ ಮಾಡಲಾಗಿದೆ. ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳ ಸಂಚಾರಕ್ಕೆ ತಡೆಯೊಡ್ಡಲಾಗಿದೆ. ಜಾತ್ರಾ ಮಹೋತ್ಸವದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯಬಾರದು ಎನ್ನುವ ಮುನ್ನೆಚ್ಚರಿಕೆ ಕ್ರಮವಹಿಸಿ ಪೊಲೀಸ್ ಇಲಾಖೆಯಿಂದ ಕೆಎಸ್‌ಆರ್‌ಪಿ ತುಕಡಿ, ಜಿಲ್ಲೆಯ ವಿವಿಧೆಡೆಯಿಂದ ಪೊಲೀಸ್ ಅಧಿಕಾರಿಗಳು ಹಾಗೂ ಹೋಂ ಗಾರ್ಡ್ಸ್‌ಗಳನ್ನು ನಿಯೋಜಿಸಲಾಗಿತ್ತು

ದೀಪಾವಳಿ ಅಂಗವಾಗಿ ಬೇಗೂರಲ್ಲಿ ವೈಭವದ ಮಹದೇಶ್ವರಸ್ವಾಮಿ ಉತ್ಸವ



ಬೇಗೂರು(ಗುಂಡ್ಲುಪೇಟೆ), ನ.15– ಗ್ರಾಮದಲ್ಲಿ ದೀಪಾವಳಿ ಹಬ್ಬದ ಅಂಗವಾಗಿ ಶ್ರೀ ಬಂಡಿಗೇರೆ ಮಹದೇಶ್ವರ ಸ್ವಾಮಿಯ ಉತ್ಸವ ಗ್ರಾಮದಲ್ಲಿ ನಡೆಯಿತು.

ಉತ್ಸವದ ಅಂಗವಾಗಿ ಗ್ರಾಮದ ಶ್ರೀ ಆಂಜನೇಯಸ್ವಾಮಿ ದೇವಾಲಯದ ಆವರಣವನ್ನು ತಳಿರು ತೋರಣಗಳಿಂದ ಶೃಂಗರಿಸಿ ಶ್ರೀ ಬಂಡೀಗೆರೆ ಮಹದೇಶ್ವರಸ್ವಾಮಿಯ ಉತ್ಸವ ಮೂರ್ತಿಯನ್ನು ಹುಲಿ ವಾಹನದಲ್ಲಿರಿಸಿ ವಿವಿಧ ಹೂಗಳಿಂದ ಅಲಂಕರಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಉತ್ಸವ ಸಾಗುವ ಮಾರ್ಗದುದ್ದಕ್ಕೂ ಪಟಾಕಿ ಸಿಡಿಸಿ ಸಂಭ್ರಮ ಸಡಗರದಿಂದ ಗ್ರಾಮದ ಪ್ರತಿ ಮನೆಯವರೂ ಪೂಜೆ ಸಲ್ಲಿಸುತ್ತಿದ್ದುದು ವಿಶೇಷವಾಗಿತ್ತು

ಯಳಂದೂರು ಪಪಂ ಮುಖ್ಯಾಧಿಕಾರಿಯಾಗಿ ಮಹೇಶ್‌ಕುಮಾರ್



ಯಳಂದೂರು, ನ.15– ಯಳಂದೂರು ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿಯಾಗಿ ಎಂ.ಪಿ. ಮಹೇಶ್‌ಕುಮಾರ್ ಅಧಿಕಾರ ವಹಿಸಿಕೊಂಡರು.

ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿ ಹುದ್ದೆ ಖಾಲಿ ಇದ್ದ ಹಿನ್ನೆಲೆಯಲ್ಲಿ ಕೊಳ್ಳೇಗಾಲದಲ್ಲಿ ಹಿರಿಯ ಆರೋಗ್ಯ ನಿರೀಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದ ಇವರನ್ನು ಯಳಂದೂರು ಪಪಂನ ಮುಖ್ಯಾಧಿಕಾರಿಯಾಗಿ ಸರ್ಕಾರ ಆದೇಶ ಹೊರಡಿಸಿದೆ.

ರಾಷ್ಟ್ರೀಯ ಹೆದ್ದಾರಿಯಲ್ಲಿ ಮಣ್ಣು ಎರಚಿ ಪ್ರತಿಭಟನೆ



ಚಾಮರಾಜನಗರ, ನ.15– ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವ ಕ್ರಮವನ್ನು ಖಂಡಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ನಗರದಲ್ಲಿ ಕಳೆದ 66 ದಿನಗಳಿಂದ ನಿರಂತರವಾಗಿ ಪ್ರತಿಭಟನೆ ನಡೆಸುತ್ತಿದ್ದು, ಇಂದು ಕೂಡ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಣ್ಣು ಎರಚಿ ವಿನೂತನ ಪ್ರತಿಭಟನೆ ನಡೆಸಲಾಯಿತು.

ನಗರದ ಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾನಿತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಣ್ಣು ಎರಚಿ ಕೇಂದ್ರ ಮತ್ತು ರಾಜ್ಯ ಸರ್ಕಾರ, ತಮಿಳುನಾಡು ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಶಾ.ಮುರಳಿ, ಪಣ್ಯದಹುಂಡಿ ರಾಜು, ಚಾ.ವೆಂ. ರಾಜ್‌ಗೋಪಾಲ್, ಗು.ಪುರುಷೋತ್ತಮ್, ನಿಜಧ್ವನಿಗೋವಿಂದರಾಜು, ನಾಗೇಂದ್ರಗೌಡ, ಮಹೇಶ್‌ಗೌಡ, ಲಿಂಗರಾಜು ಇತರರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಸೈಟು ಮಾರಾಟಕ್ಕಿದೆ

30x40 W/F
ನಂ.439, ಬ್ರಾಹ್ಮಿನ್ಸ್ ಲೇಔಟ್
ಸಿ.ಬ್ಲಾಕ್, ಮೈಸೂರು
8105131811

ಪತ್ರಿಕಾ ಪ್ರಕಟಣೆ

ಹೊಸಹುಂಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಒಬ್ಬ ಪಿಗ್ಮಿ ಏಜೆಂಟರ ಅವಶ್ಯಕತೆಯಿದ್ದು ಈ ಜಾಹೀರಾತು ನೋಡಿದ ತಕ್ಷಣ ಸಂಘಕ್ಕೆ ಅರ್ಜಿ ಸಲ್ಲಿಸುವಂತೆ ಈ ಮೂಲಕ ವಿನಂತಿ.
ಸಹಿ/– ಮುಖ್ಯಕಾರ್ಯನಿರ್ವಾಹಕರು
ಹೊಸಹುಂಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ
ಹೊಸಹುಂಡಿ, ಕಸಬಾ ಹೋ, ಮೈಸೂರು ತಾ.

WANTED

COMPUTER TYPIST (Male / Female) FOR ADVOCATE OFFICE
Qualification: Typing - English & Kannada (Kan - Nudi / Baraha) in M.S. Word & Excel / Page Maker
9.30 am to 2 pm. Sunday: 10.30 to 3 pm. Salary: 7,500/- per month. For evening: (Male only). 6.30 pm to 11.30 pm. Salary: Rs. 7,500/- per month.
7349337469, 9448525072

WANTED

MALE SALES EXECUTIVE (Vehicle mandatory)
TELECALLING (FEMALE)
Qualification: 10th, PUC.
Salary, incentive 12 to 35K
for MAAN CERAMICS TILES SHOWROOM, Opp. SBI Bank, Vidyaranyapuram, Mysore-570 008
Mob: 7892510068

LAND FOR RENT

160ft., width X 320ft., length Land Suitable for : Car Showroom & Service Centre at Mysore - Nanjangud Main Road, Tandavapura with Water facilities & 10kv Power, Single Owner & Clear Documents.
Call: 99457 66671

SITES FOR SALE

* 50x80 Corner site for sale in SBM Bogadi * 40x80 site for sale in Gayatri Shankar Layout * 30x40 site for sale in Shri Nagar. *Contact:*
Mob: 9880344263

WANTED

Science, English,Maths Hindi and Social Science teaching staff for reputed institution
Send your resume through WhatsApp/Message
8971577685
9980631121

ಬೇಕಾಗಿದ್ದಾರೆ

ಕಡಿಮೆ ಬಂಡವಾಳದಲ್ಲಿ ನಮ್ಮಲ್ಲಿಯೇ ತರಬೇತಿ ಪಡೆದು ತಮ್ಮ ಮನೆಯಲ್ಲಿಯೇ ಬಿಡುವಿನ ಸಮಯದಲ್ಲಿ ಕೆಲಸ ಮಾಡಿ ಸಂಪಾದಿಸುವ ಅವಕಾಶ (ದೇವರಾಜ್ ಅರಸ್ ರೋಡ್ ಸುತ್ತಮುತ್ತಲಿನ ಮಹಿಳೆಯರಿಗೆ ಆದ್ಯತೆ)
9591071176

ನಿವೃತ್ತ ಅಧಿಕಾರಿಗಳಿಗೆ ಉದ್ಯೋಗಾವಕಾಶ

ಭಾರತ ಸರ್ಕಾರದಿಂದ ಮಾನ್ಯತೆ ಪಡೆದಿರುವ ರಾಷ್ಟ್ರೀಯ ಕಂಪನಿಯಲ್ಲಿ ವಿಶೇಷವಾಗಿ ರಾಜ್ಯ ಸರ್ಕಾರಿ/ಕೇಂದ್ರ ಸರ್ಕಾರಿ ನಿವೃತ್ತ, ಸ್ವಯಂ ನಿವೃತ್ತ ಅಧಿಕಾರಿಗಳಿಗೆ ಹಾಗೂ ಗೃಹಿಣಿಯರಿಗೆ ಪಾರ್ಟ್ ಟೈಂ ಅಥವಾ ಫುಲ್ ಟೈಂ ಉದ್ಯೋಗಾವಕಾಶ ಫಿಕ್ಸ್ಡ್ ತಿಂಗಳ ಸಂಬಳ, ESI / PF
9110676257
9739239004

40×60 SITE for SALE

MUDA APPROVED
East Facing
Rajeev Nagar 2nd Stage
Near Gupta Store, MYSORE
Rs. 1 Crore
Call : 9845286583

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್

Mob: 9108566022

ಸುವರ್ಣಯಾತ್ರ

1) ರಾಜಸ್ಥಾನ ಪ್ರವಾಸ 9 ದಿನಗಳು 18/11/23
2) ಮಧ್ಯಪ್ರದೇಶ ಪ್ರವಾಸ 2 ಜ್ಯೋತಿರ್ಲಿಂಗ ಸೇರಿ 4 ದಿನಗಳು–18/11/23
3) ಪುರಿ ಜಗನ್ನಾಥ್ ಪ್ರವಾಸ 4 ದಿನಗಳು 25/11/23
4) ನೇಪಾಳ 9 ದಿನಗಳು 30/11/23
5) ಭೂತಾನ್ ಪ್ರವಾಸ 7 ದಿನಗಳು 23/12/23
8660233673,9480843945

ಉತ್ತಮ ಅವಕಾಶ

ಮನೆಯಲ್ಲಿ ಬಟ್ಟೆ ವ್ಯಾಪಾರ ಮಾಡಲು ನಮ್ಮಲ್ಲಿ ಹೋಲ್ ಸೇಲ್ ದರದಲ್ಲಿ ಎಲ್ಲಾ ರೀತಿಯ ಸೀರೆಗಳು ಮತ್ತು ಎಲ್ಲಾ ರೀತಿಯ ಬಟ್ಟೆಗಳು ಸಿಗುತ್ತದೆ ಒಮ್ಮೆ ಭೇಟಿ ನೀಡಿ
Call After 10.30 AM
9986731199

DOCUMENTS LOST

I, H I Mohammed Hyder Ali, S/o. Mohammed Ismail, R/at 47/3 1st main, 17th cross, B M Shree Nagar, Metagalli, Mysore 570016 have lost all the original property documents of Yadava giri Shed No. 25, Reg. No. 2467, while traveling. Finders please contact: 8050327712

ಕೂಡಲೇ ಬೇಕಾಗಿದ್ದಾರೆ

ಮ್ಯಾಚಿಂಗ್ ಸೆಂಟರ್‌ನಲ್ಲಿ ಕೆಲಸ ಮಾಡಲು ಸೇಲ್ಸ್‌ಗರ್ಲ್ಸ್ ಬೇಕಾಗಿದ್ದಾರೆ.
ಸಂಪರ್ಕಿಸಿ:
ಶ್ರೀ ಭಗವಾನ್ ಸಿಲ್ಕ್ಸ್
ಕೆ.ಆರ್.ಸರ್ಕಲ್, ಮೈಸೂರು

ಬಾಡಿಗೆಗೆ ಇದೆ

ಆಫೀಸ್ ರೂಮ್ ಬಾಡಿಗೆಗೆ ಇದೆ
2 ನೇ ಮೇನ್, 11ನೇ ಕ್ರಾಸ್, ಜಯನಗರ
9448087409

ಬೇಕಾಗಿದ್ದಾರೆ

ಪ್ರತಿಷ್ಠಿತ ಸಸ್ಯಾಹಾರಿ ಹೋಟೆಲ್‌ಗೆ ಜ್ಯೂಸ್, ಚಾಟ್ಸ್, ಕೆಲಸ ಮಾಡುವವರು ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ:
8762462011

SITE FOR SALE

1. Kesare II nd Stage 40x60 East Face
2. Kesare III rd Stage 40x60 West Face
3. 59x70 West Face Fully Commercial Opp. KSRTC Bus Stand
Call After 10.30 AM
9986731199

ಬೋಳು ತಲೆಯ ಸಮಸ್ಯೆಯೇ?



ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಥಳಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Aniketana Road, Kuvempunagar, Mysuru
MYSURU 9611028523 MANGALORE 9343142258

DTCP SITES FOR SALE

DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

ಬೇಕಾಗಿದ್ದಾರೆ

ಬಟ್ಟೆ ಅಂಗಡಿಯಲ್ಲಿ ಸೇಲ್ ಮ್ಯಾನ್ ಕೆಲಸ ಮಾಡಲು ಅನುಭವವುಳ್ಳ ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ESI+PF ಮತ್ತು ಇನ್ಸೆಂಟೀವ್ ಸೌಲಭ್ಯದೊಂದಿಗೆ
ಗಾಂಧಿಸರ್ಕಲ್, ಮೈಸೂರು
Call After 10.30 AM
9980620678

ಸೈಟು ಮಾರಾಟಕ್ಕೆ ಇದೆ

ಮುಡಾ 30x40/ 20x30 ಉತ್ತರ ಮತ್ತು ಪೂರ್ವಕ್ಕೆ ಆರ್.ಟಿ.ನಗರ ಪಕ್ಕ
7813942556
8453459670

HOUSES FOR SALE

30X40 (Muda)
3BHK Kesare III Stage, Kalpavrushanagar, Mysore
85 Lakhs (Negotiable)
30x50 (Revenue) House
2 Portions 45 lakhs (Negotiable
Raghavendra Nagar
9611069918,9980423977

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್

ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

9/11A ಹಾಗೂ 11B ಖಾತೆಗಳಿಗೆ ಲೋನ್ ಮಾಡಿಕೊಡಲಾಗುವುದು

ಶೀಟಿನ ಮನೆ, ಹೆಂಚಿನ ಮನೆ, ಆರ್‌ಸಿಸಿ ಮನೆ ಮೇಲೆ ಸಾಲ ಮತ್ತು ಮನೆ ಖರೀದಿಸಲು, ಮನೆ ನವೀಕರಣ ಮಾಡಲು ಬ್ಯಾಂಕ್ ಲೋನ್ ಮಾಡಿಕೊಡಲಾಗುವುದು
9008504456

WANTED

1) Office Assistant (Should know Excel). 2) Accountant (Min. 3 years exp.).
3) Heavy Vehicle Drivers.
Send resume on Whatsapp only.
Strictly communicate through Whatsapp.
Mob: 6366042342

SITE FOR SALE

30x40 Site
SBM, Bogadi

FOR RENT

2 BHK apartment,
Vijayanagar 3rd Stage.
Mob: 9845074836

SPEEDPRINT PRINTER SERVICE CENTRE

URGENT REQUIRED
* Office Boy, age 20 years to 40 years. Salary 10K. * Front Office Customer Care. Salary 9K. Sayyaji Rao Road, Bamboo Bazaar, Mysore.
9632019096, 7349060511

KABINI CARE HOSPITAL

WANTED
B.Sc and GNM Staff Nurses for the Hospital Immediate Hiring, Accomodation Provided. Wanted hospital marketing Executive Fresher/Experienced
8073785702,9886655883
kchkote@gmail.com

ನಿವೃತ್ತ ನೌಕರರಿಗೆ ಉದ್ಯೋಗಾವಕಾಶ ಸೆಮಿನಾರ್

ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶ ಸೆಮಿನಾರ್ ಏರ್ಪಡಿಸಲಾಗಿದೆ Benifits : Fixed Salary + PF + ESI + ಇತರೆ ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗುವ ದಾಖಲಾತಿಗಳು: 1) ಫೋಟೊ 2) ಪಾನ್‌ಕಾರ್ಡ್ 3) ಆಧಾರ್ ಕಾರ್ಡ್, 4) ಬ್ಯಾಂಕ್ ಪಾಸ್‌ಬುಕ್. ಸ್ಥಳ: ಮೌರ್ಯ ರೆಸಿಡೆನ್ಸಿ, ಶ್ರೀ ಹರ್ಷ ರಸ್ತೆ, ಮೈಸೂರು. ದಿ.18–11–23, ಸಮಯ: ಬೆಳಿಗ್ಗೆ 11.00. Followed by Lunch
9448376423,9886883858

Accountant

Required for an Industry at Mysore
Commerce Graduate with minimum 3 years of experience and having knowledge of Tally ERP9, GST, TDS, Stock maintenance.
APPLY WITH RESUME:
hr.sipltd@yahoo.com

WANTED

3 Male Sales Representative.
Compulsory 2 wheeler with DL.
2 Female Accountant, fresher.
Tally course completed preferred.
SAPTHAGIRI ENTERPRISES
Hootagalli Industrial Area, Mysuru.
Mob: 9686926448

Wanted Permanent Employees

Square India Pest Control Private Limited Looking for permanent job follows. Mysore & Coorg, Mangalore Location. Business Developer officer (BDO). Male, freshers or experienced in Business Development, well acquainted and ability to generating business. Permanent job ! Job Guarantee! PF, ESI, Gratuity, Bonus & other benefits ! Contact for scheduling interview.
Mob: 9886465745

Space Available for

NEET / CET and other Coaching Centres.
Mob: 9663680463

WANTED

1) Electricians
2) Welders
3) Helpers
4) Marketing Rep. (Ele. Goods)
Call: 7259016509 / 512

ಅನುಬಂಧ ಮ್ಯಾರೇಜಸ್

ಎಲ್ಲಾ ಜಾತಿಯ ಸುಂದರ ಶ್ರೀಮಂತ ವಿದ್ಯಾವಂತ ವಧುವರರು, ವಿಧುರರು ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ
6361740552

ಮನೆ ಮಾರಾಟಕ್ಕಿದೆ

100x90
ಉತ್ತರ ದಿಕ್ಕು,
ಕೂರ್ಗಳ್ಳಿಯಲ್ಲಿ
9945434953

Sudarshan Saur

SOLAR WATER HEATER



SUNZONE SOLAR SYSTEM
Vishwamanava Double Road,
Kuvempunagar, Mysuru
9845175443

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್

Mob: 7975101020

DOCUMENT LOST

Rizwan Pasha, S/o Late H.K. Babajan Saheb, MIG 2/22, 1st Cross, Kalyanagiri, Mysore, lost allotment letter of Property No. 2568, Devanur 2nd Stage, Mysore.
Finders please contact:
Mob: 9945007242

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ

ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

ಬೇಕಾಗಿದ್ದಾರೆ

Finance ಕಂಪನಿಯಲ್ಲಿ ಕೆಲಸ ಮಾಡಿ ಅನುಭವವುಳ್ಳ ಯುವಕ ಮತ್ತು ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ(T&C).
98450 28614

ತಕ್ಷಣವೇ ಬೇಕಾಗಿದ್ದಾರೆ

ಪ್ರತಿಷ್ಠಿತ ಫೈನಾನ್ಸ್ ಕಂಪನಿಯಲ್ಲಿ ಕೆಲಸ ಮಾಡಲು ಹುಡುಗ–ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ.
ಹುದ್ದೆ 1– ಸೇಲ್ಸ್ ಮ್ಯಾನೇಜರ್.
ಹುದ್ದೆ 2– ಟೆಲಿಸೇಲ್ಸ್ ಎಕ್ಸಿಕ್ಯೂಟೀವ್.
ಅನುಭವ : Fresher/experienced
ಸಂಬಳ: ಆಕರ್ಷಕ ಸಂಬಳ ಜೊತೆಗೆ ಇನ್ಸೆಂಟೀವ್ (Incentive)
ವಿದ್ಯಾರ್ಹತೆ: SSLC to Any Degree
8050923846,08214255550

3 SHOPS FOR RENT

(10X20)
@ J.P.NAGAR
POLICE BOOTH
MAIN ROAD TOWARDS
BRIGADE SPARKLE
APARTMENT ROAD
9342125252

AFFIDAVIT

I, Asha Santhosh. L, W/o Santhosh Kumar. V, #2442/1, 7th Cross, Kailaspuram, Mandi Mohalla, Mysuru-570 021, that I was called as **Asha Rani. L, W/o Santhosh Kumar .V**, since 15 years after my marriage and I have give the name is my children in their school as on 15-09-2023, I have changed my name from **Asha Rani. L.** to **Asha Santhosh L.** vide affidavit before the Judicial Magistrate I Class III Court, Mysore.
Sd/- Asha Santhosh. L

Wanted Teachers

1) B.A. / M.A. with B.Ed. (English & Hindi)
2) Housekeeping
Free accommodation.
8722073456, 8722093456
nalandakrn@gmail.com,
Web: sainalanda.com

ಚಾಮುಂಡೇಶ್ವರಿ ಮ್ಯಾರೇಜ್ ಬ್ಯೂರೋ

ಒಕ್ಕಲಿಗ 54 ವರ್ಷ ವಯಸ್ಸಿನ ಮೈಸೂರಿನಲ್ಲಿ ವಾಸಿಸುತ್ತಿರುವ, ವಿಚ್ಛೇದಿತ ಮಹಿಳೆಗೆ ವರಬೇಕು (Caste no bar). ಪವಿತ್ರವಾದ ಸಂಬಂಧಗಳ ಬೆಸೆಯುವ ಕೊಂಡಿ ಎಲ್ಲಾ ಜಾತಿಯ ವಧು, ವರರಿಗೆ, ಮೊದಲನೇ ಹಾಗೂ ಎರಡನೇ ಮದುವೆಯಾಗುವ ವಧು–ವರರು ಫೋಟೋ ಹಾಗೂ ವಿವರ ವಾಟ್ಸಪ್ ಮಾಡಿ ನೇರವಾಗಿ ಸಂಪರ್ಕಿಸಿ:
Mob: 8951241381

Aquaguard & Kent Sales and Service

Service Charge : 300/-
9901200444

WANTED

For an injection Moulding, Unit in Mysuru requires
Line Quality and Final Quality for an above industry in a similar position.
Experience : 2-3 years
Qualification:- ITI fitter, Diploma mechanical and BE mechanical
aerospacemys@gmail.com

ತಕ್ಷಣ ಬೇಕಾಗಿದ್ದಾರೆ

RTO ಸರ್ಕಲ್ ಮತ್ತು ಬಳ್ಳಾಲ್ ಸರ್ಕಲ್ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC ಮೇಲ್ಪಟ್ಟು
ಸಂಬಳ: 17500+W/o
9620667819
9880727819

ಬೇಕಾಗಿದ್ದಾರೆ

ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು/ ಕಂಪ್ಯೂಟರ್ ಬಿಲ್ಲಿಂಗ್ ಕ್ಯಾಷಿಯರ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ: ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್, ನಜರ್‌ಬಾದ್, ಮೈಸೂರು
1) ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು. 2)ಶಿಶ್ಯರಣಿ ಸ್ಕೂಲ್ ಹತ್ತಿರ, ಹೆಬ್ಬಾಳ್, ಮೈಸೂರು

HOUSE FOR SALE

4 BHK Duplex new house, 30x40, MUDA, E/F Door & site at Ramakrishnanagar 'I' Block, near Andolana Circle.
PRICE: Rs. 1.60 Cr.
(Brokers Excuse)
Mob: 8660105902

HOUSE FOR SALE

3 BHK Duplex New House 20x30, MUDA, furnished house, N/F Door at Vijayanagar 4th Stage, Near Marimallappa School.
Price: Rs. 84 Lakhs
Mob: 8660105902

ಬೇಕಾಗಿದ್ದಾರೆ

ಕಂಪ್ಯೂಟರ್ ಟೈಪಿಂಗ್ ಮಾಡಲು ಬರುವಂತಹ ಅಭ್ಯರ್ಥಿಗಳು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ.
ಶೇಖರ್ : 9945911118
ಅನಿಲ್ : 7026996123
Arthor Services Pvt. Ltd.
No. L-89, 2nd Floor, 'M' Block, Opp. Karuna Hospital, Kuvempunagar, Mysroe-570 023

ಸೈಟು ಮಾರಾಟಕ್ಕಿದೆ

ಮೈಸೂರು–ಬನ್ನೂರು ರಸ್ತೆ, DTCP ಅಪ್ರೂವ್ಡ್ (9&11ಎ ಖಾತೆ) ನೊಂದಣಿಗೆ ಸಿದ್ಧವಾಗಿದೆ. ಎಲ್ಲಾ ಬ್ಯಾಂಕ್‌ಗಳಲ್ಲಿ ಲೋನ್ ದೊರೆಯುತ್ತದೆ. ಮಾಲೀಕ ರಿಂದ ನೇರ ಮಾರಾಟ.
40x40 - Rs. 24,80,000
30x40 - Rs. 18,60,000
28x40 - Rs. 16,50,000
9945558166

ಬೇಕಾಗಿದ್ದಾರೆ

ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ
ಸಂಬಳ: 10,000/– ರಿಂದ 12,000/–
ಸ್ಥಳ: ಆಲನಹಳ್ಳಿ, ಸಿದ್ಧಾರ್ಥ ಲೇಔಟ್, ಎನ್.ಆರ್. ಮೊಹಲ್ಲಾ, ಬೋಗಾದಿ, ಬನ್ನಿಮಂಟಪ. ಸಂಪರ್ಕಿಸಿ:
9741616826, 6361740914

WANTED

TELECALLERS 05 Nos.
PUC + Computer Knowledge
For the Collection Agency (banking Sector)
Office at Vijayanagara 4th Stage, Mysore,
8867574400

ಉತ್ತಮ ಕೆಲಸಗಾರರು ತಮಗೆ ತಕ್ಷಣ ಬೇಕೇ?

ಉಪಯುಕ್ತ ಮತ್ತು ಉತ್ತಮ ಕೆಲಸಗಾರರು ಸ್ವತಂತ್ರ ನಿರುದ್ಯೋಗ ಮೇಳದಲ್ಲಿ ನವೆಂಬರ್ 19, ಭಾನುವಾರ ಬಾಸುದೇವ ಸೋಮಾನಿ ಕಾಲೇಜು, ಕುವೆಂಪುನಗರದಲ್ಲಿ (ಬೆ.10ರಿಂದ ಸಂಜೆ 6 ರವರೆಗೆ) ಆರಿಸಿಕೊಳ್ಳಿ. ಸಂಪೂರ್ಣ ವಿವರಗಳಿಗಾಗಿ ತಕ್ಷಣ ಸಂಪರ್ಕಿಸಿ:
9449923880,8217580980

ಮನೆ ಮಾರಾಟಕ್ಕಿದೆ

20x30 (ಪೂರ್ವ) ನಿವೇಶನದಲ್ಲಿ GF - ಕಾರ್ ಪಾರ್ಕಿಂಗ್ + 2 ವ್ಹೀಲರ್ ಪಾರ್ಕಿಂಗ್ + 1 ರೂಂ + ಅಟ್ಯಾಚ್ ಬಾತ್‌ರೂಂ. FF + SF - 3 ರೂಂ ನೊಂದಿಗೆ ಡೂಪ್ಲೆಕ್ಸ್ + 2 ಅಟ್ಯಾಚ್ ಹಾಗೂ 1 ಜನರಲ್ ಬಾತ್ ರೂಂ + ಹಾಲ್ + ಕಿಚನ್.
Location: ಮಾತೃಶ್ರೀ ಬಡಾವಣೆ, ಲಿಂಗಾಬುದಿ ಪಾಳ್ಯದ ಹತ್ತಿರ, ಮಾರಮ್ಮ ದೇವಸ್ಥಾನದ ಹತ್ತಿರ, ರಿಂಗ್ ರಸ್ತೆ ಪಕ್ಕ. ಬೆಲೆ: ರೂ. 70 ಲಕ್ಷ.
9845310014, 9844689577

ಸೈಟುಗಳು ಮಾರಾಟಕ್ಕೆ ಇದೆ

30x40, 20x40, 30x35 ಸೈಟುಗಳು ಮಾರಾಟಕ್ಕೆ ಇದೆ. ಗೊರೂರು ಬಸ್ ನಿಲ್ದಾಣ ಹತ್ತಿರ, ರಮಾಬಾಯಿನಗರ, ಮೈಸೂರು. DTCP ಅನುಮೋದಿತ (ಕಾರ್ಪೋರೇಶನ್ ಮಿತಿ).
1.5 kms from JP Nagar Ring Road.
Mob: 8660105902

ಸೈಟು ಮಾರಾಟಕ್ಕೆ ಇದೆ

ಮುಡಾ ಅನುಮೋದಿತ ಸೈಟ್‌ಗಳು
30x50 - 50 ಲಕ್ಷಗಳು
75% ವರೆಗೆ ಬ್ಯಾಂಕ್ ಸಾಲ ಸೌಲಭ್ಯ ಪಡೆಯಬಹುದು.
ಜೆಎಸ್‌ಎಸ್ / ಪೋಲೀಸ್ ಲೇಔಟ್ ಹತ್ತಿರ, ಟಿನರಸೀಪುರ ರಸ್ತೆ, ಮೈಸೂರು
1.5 Kms from Ring Road
9900363084, 8660105902

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ

NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ತಕ್ಷಣ ಬೇಕಾಗಿದ್ದಾರೆ

ಕುಶಾಲ ನಗರದಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಸಸ್ಯಹಾರಿ ಹೋಟೆಲ್‌ಗೆ ಈ ಕೆಳಕಂಡ ಕೆಲಸಗಾರರು ಬೇಕಾಗಿದ್ದಾರೆ.
ಚೈನಿಸ್ – 2, ತಂದೂರಿ – 2, ನಾರ್ತ್ ಇಂಡಿಯನ್ ಕುಕ್ – 2, ಕ್ಯಾಪ್ಟನ್ – 2, ಸೆಕ್ಯೂರಿಟಿ ಗಾರ್ಡ್ – 4, ವಾಶಿಂಗ್ – 4.
ಕೂಡಲೇ ಸಂಪರ್ಕಿಸಿ:
7338520100, 7899929233

ಬೇಕಾಗಿದ್ದಾರೆ

ಮೈಸೂರಿನ ಶ್ರೀ ನಗರದಲ್ಲಿರುವ (ಜೆಪಿ ನಗರ ಹತ್ತಿರ) ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ವಿದ್ಯಾಸಂಸ್ಥೆಗೆ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ.
ಸಂಬಳ: 13000/ತಿಂಗಳಿಗೆ
PF & ESI ಸೌಲಭ್ಯಗಳು ಲಭ್ಯವಿದೆ.
ಶಿಕ್ಷಣ: ಪಿಯುಸಿ, ವಯಸ್ಸು: 25 ರಿಂದ 40 ವರ್ಷಗಳು
6366761766

ಬೇಕಾಗಿದ್ದಾರೆ

ಪ್ರಗತಿ ವಿದ್ಯಾ ಸಂಸ್ಥೆ ಸರಗೂರು ಟೌನ್, ಸರಗೂರು ತಾ–571121
9448063043,7795913405
1) ಪ್ರಾಥಮಿಕ ಶಾಲಾ ಶಿಕ್ಷಕರು PUC, DEd- 01
2) ಕಂಪ್ಯೂಟರ್ ಶಿಕ್ಷಕರು (ಸಂಬಂಧಿಸಿದಂತೆ ವಿದ್ಯಾಭ್ಯಾಸ)- 01
3) ಸ್ಪೋಕನ್ ಇಂಗ್ಲಿಷ್ ಶಿಕ್ಷಕರು – 01
ಆಡಳಿತಾಧಿಕಾರಿ/–

FOR SALE

1) 30x40, 30x50 sites 16 Lakhs Kote Road. 2) 30x40, T. Narasipura Road, Saptamatruke Layout attach. 3) 20x70 Aswini Choultry near and 30x40 East site Preethi Layout, Srirampura. 4) Bogadi road 20x30, 30x40 Trendz Apartments near. 5) 20x30 house Lal Bahadur Shastri Nagar.
PRAKRUTHI PROPERTIES
9538690359, 9035990359

ಬೇಕಾಗಿದ್ದಾರೆ

ದಂಪತಿಗಳ ಮನೆಗೆ ಕೆಲಸದವರು ಮಧ್ಯವಯಸ್ಸಿನ ಹೆಂಗಸರು–1
ಆದ್ಯತೆ – ಅರವಿಂದನಗರ
ವಿಳಾಸ: # 721, ನೆಲ ಮಹಡಿ, ಆದಿ ಚುಂಚನಗಿರಿ ರಸ್ತೆ, ಅರವಿಂದನಗರ, ಮೈಸೂರು
9986756866

ತಕ್ಷಣ ಬೇಕಾಗಿದ್ದಾರೆ

1) ಸೆಕ್ಯೂರಿಟಿ ಗಾರ್ಡ್ಸ್ – SSLC/PUC ಪುರುಷರು
ಸ್ಥಳ: ನಾಗಮಂಗಲ, ಹಾಸನ, ಚನ್ನರಾಯಪಟ್ಟಣ ಮತ್ತು ಮೈಸೂರು
2) ಹೌಸ್ ಕೀಪರ್– ಪುರುಷ & ಮಹಿಳೆಯರು ಸ್ಥಳ : ಮೈಸೂರು
9739199355
9844235981

HOUSE FOR LEASE

Newly Built 2BHK Independent House, Fully Furnished with Solar @ Lalithadri Nagar, Near Ring Road, Behind Indian Oil Petrol Bunk
9964414484

FOR SALE

50X80 N/E
Property Near
Blue INN HOTEL
Bannimantapa
Brokers Excuse
9739738989

ಬೇಕಾಗಿದ್ದಾರೆ (WANTED)

ಮೈಸೂರಿನಲ್ಲಿ ಕಾಳಿದಾಸ ರಸ್ತೆಯಲ್ಲಿ ಇರುವ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್‌ಗೆ ಅನುಭವವುಳ್ಳ (1) ಅಸಿಸ್ಟೆಂಟ್ ಕುಕ್–ಹೆಲ್ಪರ್ (ಸಹಾಯಕ ಕುಕ್) Cutting, Grinding (2) ಮತ್ತು ದೋಸಾ ಭಟ್ರು (Dosa Chef)ಗೆ ಬೇಕಾಗಿದ್ದಾರೆ.
ಆಕರ್ಷಕ ಸಂಬಳ, ವಸತಿ ಹಾಗೂ ಉತ್ತಮ ಸೌಲಭ್ಯ ಗಳನ್ನು ನೀಡಲಾಗುತ್ತದೆ.
8884066266

ಜಮೀನು ಖರೀದಿಗೆ ಬೇಕಾಗಿದೆ

ಅತೀ ಕಡಿಮೆ ಬೆಲೆಯಲ್ಲಿ 5 ರಿಂದ 8 ಎಕರೆ ಒಳಗೆ ತೋಟ ಮಾಡಲು ರಸ್ತೆಗೆ ಹೊಂದಿಕೊಂಡಿರುವ ಕೆಂಪು ಮಣ್ಣಿನ ಜಮೀನು ಬೇಕಾಗಿದೆ.
7411223692

WANTED

Required a Male or Female Staff experienced in Electronic Showroom (TV, Home Appliances & Mobiles) to work in a showroom at Srirampura (Parasayyana Hundi) Mysore to Handle day today activities of the showroom
9482676099

HOUSE FOR LEASE

20x30 2 BHK
Mosac Floring S/Floor
University Layout
Near Lingabuddi Palya
(3 Years Lease)
9008020919

ಮನೆಯಿಂದಲೇ ಕೆಲಸ

ಗೃಹಿಣಿಯರಿಗೆ, ವಿದ್ಯಾರ್ಥಿಗಳಿಗೆ, ವಯಸ್ಸಾದವರು, ವಿದ್ಯಾರ್ಥಿಗಳು, ವಯಸ್ಸಿನ ಮಿತಿ ಇಲ್ಲ, ಡಾಟಾ ಎಂಟ್ರಿ, ಫಾರಂ ಫಿಲ್ಲಿಂಗ್, ಬುಕ್ ರೈಟಿಂಗ್,ಕೆಲಸಗಳು ನಿಮ್ಮ ಮೊಬೈಲ್ ಬಳಸಿ ಗಳಿಸಿ ದಿನಕ್ಕೆ 5000 ರಿಂದ 10000 ವರೆಗೆ ತಿಂಗಳಿಗೆ 20000 ರಿಂದ 30000 ವರೆಗೆ, ವಿಶೇಷ ಸೂಚನೆ: 5 ಗಂಟೆ ಒಮ್ಮೆ ಸಂಬಳ ನೀಡಲಾಗುವುದು.
7353473398

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮೈಸೂರು ಮಿತ್ರ
ಗುರುವಾರ 16 ನವೆಂಬರ್ 2023

ಮಂಡ್ಯದ ಮೃತ್ಯುಂಜಯ ಸೇರಿ ಹಲವರಿಗೆ 'ಅಮ್ಮ ಪ್ರಶಸ್ತಿ' ನ. 26ಕ್ಕೆ ಸೇಡಂನಲ್ಲಿ ಪ್ರದಾನ



ಕಲಬುರಗಿ, ನ. 15– ಕಲಬುರಗಿ ಜಿಲ್ಲೆಯ ಸೇಡಂ ತಾಲೂಕಿನ ಮಾತೋಶ್ರೀ ಮಹಾದೇವಮ್ಮ ನಾಗಪ್ಪ ಮುನ್ನೂರ್ ಪ್ರತಿಷ್ಠಾನದಿಂದ ಕೊಡಮಾಡುವ ರಾಜ್ಯಮಟ್ಟದ ಪ್ರತಿಷ್ಠಿತ 'ಅಮ್ಮ ಪ್ರಶಸ್ತಿ'ಗೆ ಮಂಡ್ಯದ ಕೆ.ಪಿ.ಮೃತ್ಯುಂಜಯ ಅವರ 'ಉಳಿದುಬಿಡು ಒಂದು ಬಿಂದುವಾಗಿ' ಮತ್ತು ವಿಜಯಪುರದ ಚೈತ್ರಾ ಶಿವ ಯೋಗಿಮಠ 'ಪೆಟ್ರಿಕೋರ್' (ಕಾವ್ಯ), ಕಲಬುರ್ಗಿಯ ದಯಾ ಗಂಗನಘಟ್ಟ 'ಉಪ್ಪುಚ್ಚಿ ಮುಳ್ಳು' ಮತ್ತು ಕಲಬುರ್ಗಿಯ ಕೃಷ್ಣನಾಯಕ 'ಕಾಂತಾಮಣಿಯ ಕನಸುಗಳು' (ಕಥೆ), ಕಾರವಾರದ ಸಂತೋಷಕುಮಾರ ಮೆಹಂದಳೆ 'ವೈಜಯಂತಿಪುರ' ಮತ್ತು ಕೋಲಾರದ ಡಾ.ಸಿ. ಚಂದ್ರಪ್ಪ 'ಅಶೋಕ' (ಕಾದಂಬರಿ), ತುಮಕೂರಿನ ಡಾ.ಮಿರ್ಜಾ ಬಷೀರ್ 'ಗಂಗೆ ಬಾರೆ ಗೌರಿ ಬಾರೆ' ಮತ್ತು ಮೈಸೂರಿನ ಸುಚಿತ್ರಾ ಹೆಗಡೆ ಅವರ 'ಜಗವ ಸುತ್ತುವ ಮಾಯೆ' (ಸಂಕೀರ್ಣ), ತುಮಕೂರಿನ ನಾಗೇಶನಾಯಕ 'ಕಾಡುವ ಕವಿತೆ (ವಿಮರ್ಶೆ) ಮತ್ತು ಕಲಬುರ್ಗಿಯ ಡಾ.ಸ್ವಾಮಿರಾವ್ ಕುಲಕರ್ಣಿ 'ದಾಸ ಸಾಹಿತ್ಯ: ದೃಷ್ಟಿ–ಸೃಷ್ಟಿ' ಕೃತಿಗಳನ್ನು 23 ನೇ ವರ್ಷದ 'ಅಮ್ಮ ಪ್ರಶಸ್ತಿ'ಗೆ ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ತಲಾ 5000 ರೂ. ನಗದು ಪುರಸ್ಕಾರ, ನೆನಪಿನ ಕಾಣಿಕೆ, ಪ್ರಮಾಣ ಪತ್ರ, ಸತ್ಕಾರ ಮತ್ತು ಈ ನೆಲದ ಸಿರಿ ಧಾನ್ಯ ತೊಗರಿಬೇಳೆ ಒಳಗೊಂಡಿರುತ್ತದೆ. ಎಲ್ಲ ವಿಭಾಗದಲ್ಲಿ ಲೇಖಕರು ಪ್ರಶಸ್ತಿಯನ್ನು ಹಂಚಿಕೊಂಡಿದ್ದು, ಇದೇ ನವೆಂಬರ್ 26ರಂದು ಸಂಜೆ 5–30ಕ್ಕೆ ಸೇಡಮ್‌ನ ಶ್ರೀ ಪಂಚಲಿಂಗೇಶ್ವರ ದೇವಾಲಯದ ಶಾಂಭವಿ ರಂಗಮಂಟಪದಲ್ಲಿ ಜರುಗುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಶಸ್ತಿ ಸಂಚಾಲಕಿ ರತ್ನಕಲಾ ಮಹಿಪಾಲರೆಡ್ಡಿ ಮುನ್ನೂರ್ ತಿಳಿಸಿದ್ದಾರೆ.

ಇಂದು, ನಾಳೆ ಚಕ್ರವರ್ತಿ ಸೂಲಿಬೆಲೆ ಉಪನ್ಯಾಸ



ಮೈಸೂರು, ನ.15(ಜಿಎ)–ನಮೋ ಬ್ರಿಗೇಡ್ ವತಿಯಿಂದ ನ. 16 ಮತ್ತು 17 ರಂದು ನಗರದ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಸಂಜೆ 6ಕ್ಕೆ ಇನ್ನೂ 'ಮಲಗಿದರೆ, ಏಳುವಾಗ ಭಾರತವಿರುವುದಿಲ್ಲ' ಶೀರ್ಷಿಕೆಯಡಿ ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಅವರ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಬ್ರಿಗೇಡ್ ಕಾರ್ಯಕರ್ತ ಗಿರೀಶ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನರೇಂದ್ರ ಮೋದಿ ಅವರು ಪ್ರಧಾನಿ ಆದ ಬಳಿಕ ದೇಶ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಆದ ಬದಲಾವಣೆ. ಯಾಕೆ ಮತ್ತೆ ಪ್ರಧಾನಿ ಆಗಬೇಕು. ದೇಶದ ಹಿತಾಸಕ್ತಿಗೆ ಮಾರಕವಾಗಿ ಮಾಡುವ ಕೆಲಸ ಹೇಗೆ ದೇಶದ್ರೋಹಿ ಆಗಲಿದೆ ಎಂಬ ವಿಷಯ ಕುರಿತು ಚಕ್ರವರ್ತಿ ಸೂಲಿಬೆಲೆ ಮಾತನಾಡಲಿದ್ದಾರೆ. ಅಲ್ಲದೆ, ಭಾರತ ವಿರೋಧಿ ಕೆಲಸಗಳು ಹೇಗೆ ನಡೆಯುತ್ತಿವೆ ಎಂಬ ವಿಷಯ ಕುರಿತು ಮಾತನಾಡಲಿದ್ದು, ಸುಮಾರು 800 ಮಂದಿ ಆಗಮಿಸುವ ನಿರೀಕ್ಷೆಯಿದೆ. ಮೋದಿ ಅವರ ಅಭಿಮಾನಿಗಳೂ, ದೇಶಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಘಟನೆಯ ಮಹೇಂದ್ರ, ನಿಖಿಲ್ ವೆಂಕಟೇಶ್, ರಾಮಾನುಜಂ ಉಪಸ್ಥಿತರಿದ್ದರು.

ಕುಂಬಾರಕೊಪ್ಪಲು ಶ್ರೀ ಮಹದೇಶ್ವರಸ್ವಾಮಿ ಜಾತ್ರೆ ಸಂಪನ್ನ

ಮೈಸೂರು,ನ.15(ಪಿಎಂ)– ಶ್ರೀ ಮಲೆ ಮಹದೇಶ್ವರಸ್ವಾಮಿಗೆ ಭಕ್ತಿಯ ಪರಾಕಾಷ್ಠೆ ಮೆರೆಯುವ ಮೂಲಕ ಕುಂಬಾರಕೊಪ್ಪಲಿನ ಮೂರು ದಿನಗಳ ಶ್ರೀ ಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವ ಬುಧವಾರ ಸಂಪನ್ನಗೊಂಡಿತು.

ಭಾವೈಕ್ಯತೆಯ ಸಂಭ್ರಮದ ಹಬ್ಬವೂ ಆದ ಈ ಜಾತ್ರಾ ಮಹೋತ್ಸವ ಸೋಮವಾರ ಆರಂಭಗೊಂಡು, ಇಲ್ಲಿನ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನ ಸೇರಿದಂತೆ ಗ್ರಾಮದ ಎಲ್ಲಾ ದೇವಾಲಯಗಳಲ್ಲಿ ಜರುಗಿದ ವಿಶೇಷ ಪೂಜಾ ಕೈಂಕರ್ಯದಲ್ಲಿ ಭಕ್ತರು ಪಾಲ್ಗೊಂಡಿದ್ದರು.

ಮಂಗಳವಾರ ರಾತ್ರಿ ಮೈಸೂರು–ಕೆಆರ್‌ಎಸ್ ರಸ್ತೆಯಲ್ಲಿರುವ ಶಿಪ್ಪಾಜಿ ಕೊಳದಿಂದ ಪ್ರಾರಂಭಗೊಂಡ ಹಾಲರವಿ ಮತ್ತು ಬಾಯಿಬೀಗ ಉತ್ಸವವು ಕುಂಬಾರಕೊಪ್ಪಲಿನ ಪ್ರಮುಖ ಬೀದಿಗಳಲ್ಲಿ ಸಾಗಿ, ಅಂತಿಮವಾಗಿ ಗ್ರಾಮದ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನ ತಲುಪಿ ಸಮಾಪ್ತಿಗೊಂಡಿತು.





ಮೈಸೂರಿನ ಕುಂಬಾರಕೊಪ್ಪಲಿನಲ್ಲಿ ಶ್ರೀ ಮಹದೇಶ್ವರಸ್ವಾಮಿ ಜಾತ್ರೆಯ ಪ್ರಯುಕ್ತ ಮಂಗಳವಾರ ರಾತ್ರಿ ಹಾಲರವಿ ಮತ್ತು ಬಾಯಿಬೀಗ ಉತ್ಸವ ನಡೆಯಿತು.

ಬಳಿಕ ಬುಧವಾರ ಬೆಳಗಿನ ಜಾವ ಶ್ರೀ ಮಹದೇಶ್ವರಸ್ವಾಮಿಯ ಹುಲಿ ವಾಹನೋತ್ಸವ ಜರುಗಿತು. ಶ್ರೀಮಹದೇಶ್ವರಸ್ವಾಮಿ ದೇವಸ್ಥಾನದಿಂದ ಹೊರಟ, ಹುಲಿವಾಹನೋತ್ಸವವು ಊರಿನ ಪ್ರಮುಖ ಬೀದಿಗಳಲ್ಲಿ ಸಾಗಿತು. ನಂತರ ಇದೇ ದಿನ ಮಧ್ಯಾಹ್ನ ಗ್ರಾಮದ ಶ್ರೀ ಮಹದೇಶ್ವರ ಸಮುದಾಯ ಭವನದಲ್ಲಿ ಅನ್ನ ಸಂತರ್ಪಣೆ ನಡೆಯಿತು.

ರೋಚಕ ಕುಸ್ತಿ ಪಂದ್ಯಾವಳಿ: ಜಾತ್ರೆಯ ಪ್ರಯುಕ್ತ ಗ್ರಾಮದ ಶ್ರೀ ಕೆಂಪೇಗೌಡ ಕ್ರೀಡಾಂಗಣದಲ್ಲಿ ಬುಧವಾರ 35 ಜೊತೆ ನಾಡಕುಸ್ತಿ ಪಂದ್ಯಗಳು ನಡೆದವು. ಮದಗಜಗಳಂತೆ ಕಾದಾಡಿದ ಪೈಲ್ವಾನರು, ಕುಸ್ತಿ ಅಭಿಮಾನಿಗಳಲ್ಲಿ ರೋಮಾಂಚನ ಉಂಟು ಮಾಡಿದರು. ಇದಕ್ಕೂ ಮುನ್ನ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಕುಸ್ತಿಗೆ ಚಾಲನೆ ನೀಡಿದರು. ಈ ವೇಳೆ ಮಹಾನಗರ ಪಾಲಿಕೆ ಸದಸ್ಯ ಪೈ.ಶ್ರೀನಿವಾಸ್, ಗ್ರಾಮದ ಮುಖಂಡರಾದ ಅನಿಲ್‌ಕುಮಾರ್, ಭೈರಪ್ಪ, ಮಂಜು, ರಾಮಪ್ರಸಾದ್, ಮಹೇಶ್, ಕುಮಾರ್ ಮತ್ತಿತರರು ಹಾಜರಿದ್ದರು.



ಕುಂಬಾರಕೊಪ್ಪಲಿನ ಶ್ರೀ ಕೆಂಪೇಗೌಡ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಕುಸ್ತಿ ಪಂದ್ಯಾವಳಿಯ ರೋಚಕ ದೃಶ್ಯ.

ಕಬಡ್ಡಿ ಪಂದ್ಯಾವಳಿ; ಬೆಂಗಳೂರು ನಗರ ತಂಡ ಚಾಂಪಿಯನ್

ಮೈಸೂರು,ನ.15(ಪಿಎಂ)– ಶ್ರೀ ಮಹದೇಶ್ವರಸ್ವಾಮಿ ಜಾತ್ರೆ ಪ್ರಯುಕ್ತ ಕುಂಬಾರಕೊಪ್ಪಲಿನ ಶ್ರೀ ಕೆಂಪೇಗೌಡ ಕ್ರೀಡಾಂಗಣದಲ್ಲಿ ನಡೆದ ಮಡ್ ಕಬಡ್ಡಿ ಪಂದ್ಯಾವಳಿಯಲ್ಲಿ 'ಬೆಂಗಳೂರು ನಗರ' ತಂಡ ಚಾಂಪಿಯನ್ ಆಗಿ ಹೊರಹೊಮ್ಮಿತು.

ಕುಂಬಾರಕೊಪ್ಪಲಿನ ಮಾರುತಿ ಕಬಡ್ಡಿ ಕ್ರೀಡಾ ಸಂಸ್ಥೆ ವತಿಯಿಂದ 'ಸ್ಟೇಟ್ ಚಾಂಪಿಯನ್‌ಶಿಪ್' ಶೀರ್ಷಿಕೆಯಡಿ ನಡೆದ ಈ ಪಂದ್ಯಾವಳಿಗೆ ಸೋಮವಾರ ಚಾಲನೆ ಸಿಕ್ಕಿತ್ತು. ರಾಜ್ಯದ 29 ಜಿಲ್ಲೆಗಳಿಂದ ತಲಾ ಒಂದರಂತೆ 29 ತಂಡಗಳು ಪಂದ್ಯಾವಳಿಯಲ್ಲಿ ಪಾಲ್ಗೊಂಡಿದ್ದವು.

ಬುಧವಾರ ನಡೆದ ಫೈನಲ್ ಪಂದ್ಯದಲ್ಲಿ ಮೈಸೂರು ತಂಡ ಹಾಗೂ ಬೆಂಗಳೂರು ನಗರ ತಂಡ ಗೆಲುವಿಗಾಗಿ ಕಾದಾಡಿದವು. ಕೊನೆಗೆ ಬೆಂಗಳೂರು ನಗರ ತಂಡಕ್ಕೆ (ಆಕರ್ಷಕ ಟ್ರೋಫಿ ಮತ್ತು ಲಕ್ಷ ರೂ. ನಗದು ಬಹುಮಾನ) ವಿಜಯ ಮಾಲೆ ಒಲಿದು ಬರುವ ಮೂಲಕ ಮೈಸೂರು ತಂಡ ದ್ವಿತೀಯ ಸ್ಥಾನಕ್ಕೆ (75 ಸಾವಿರ ರೂ. ನಗದು ಬಹುಮಾನ) ತೃಪ್ತಿಪಟ್ಟಿತು. ಮಂಡ್ಯ ತಂಡ ತೃತೀಯ ಸ್ಥಾನ (25 ಸಾವಿರ ರೂ. ನಗದು ಬಹುಮಾನ) ಮತ್ತು ಉಡುಪಿ ತಂಡ ನಾಲ್ಕನೇ ಸ್ಥಾನ (25 ಸಾವಿರ ರೂ. ನಗದು ಬಹುಮಾನ) ಪಡೆದವು.



ಕುಂಬಾರಕೊಪ್ಪಲಿನ ಶ್ರೀ ಕೆಂಪೇಗೌಡ ಕ್ರೀಡಾಂಗಣದಲ್ಲಿ ಬುಧವಾರ ಸಂಜೆ ಕೃಷಿ ಸಚಿವ ಚಲುವರಾಯಸ್ವಾಮಿ ಕಬಡ್ಡಿ ಪಂದ್ಯಾವಳಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ ಬೆಂಗಳೂರು ನಗರ ತಂಡಕ್ಕೆ ಬಹುಮಾನ ವಿತರಿಸಿದರು.

ಸರ್ವೋತ್ತಮ ಆಟಗಾರನಾಗಿ ಮೈಸೂರು ತಂಡದ ಆನಂದ್, ಉತ್ತಮ ದಾಳಿಗಾರನಾಗಿ ಬೆಂಗಳೂರು ನಗರ ತಂಡದ ಅರುಣ್ ಮತ್ತು ಇದೇ ಬೆಂಗಳೂರು ನಗರದ ತಂಡದ ಶ್ರೇಯಸ್ಸು ಉತ್ತಮ ಹಿಡಿತಗಾರನಾಗಿ ಹೊರಹೊಮ್ಮಿದರು.

ಕೃಷಿ ಸಚಿವ ಚಲುವರಾಯಸ್ವಾಮಿ ಬಹುಮಾನಗಳನ್ನು ವಿತರಣೆ ಮಾಡಿದರು. ಶಾಸಕ ಕೆ.ಹರೀಶ್‌ಗೌಡ, ಕಾಂಗ್ರೆಸ್ ಮುಖಂಡ ಶುಶ್ರುತ್‌ಗೌಡ, ಕುಂಬಾರಕೊಪ್ಪಲು ಅಭ್ಯುದಯ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಚೇತನ್ ವಿಷಕಂಠೇಗೌಡ, ರಾಜ್ಯ ಅಮೆಚೂರ್ ಕಬಡ್ಡಿ ಅಸೋಸಿಯೇಷನ್ ಉಪಾಧ್ಯಕ್ಷ ಅನಿಲ್ ಮತ್ತಿತರರು ಹಾಜರಿದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಫೋರ್ಜರಿ ಮಾಡಿ ಪರಭಾರೆಗೆ ಕಡಿವಾಣ ಹಾಕಲು


ಮೈಸೂರು ಪಾಲಿಕೆಯಿಂದ 'ಇ–ಆಸ್ತಿ' ಯೋಜನೆಯಡಿ

ದಾಖಲೆ ಪತ್ರ ಸಂರಕ್ಷಣೆ ಕ್ರಮ

ಪಾಲಿಕೆಯಿಂದ ಗಣಕೀಕರಿಸಿದ ಮಾಹಿತಿಯನ್ನು ಆಸ್ತಿ ಕಣಜ ತಂತ್ರಾಂಶದಲ್ಲಿ ದಾಖಲಿಸುವ ಕಾರ್ಯ ಆರಂಭ

ಮೈಸೂರು, ನ.15(ಆರ್‌ಕೆ)–ನಕಲಿ ದಾಖಲೆ ಸೃಷ್ಟಿಸಿ ಆಸ್ತಿಗಳ ಪರಭಾರೆ ಮಾಡುವುದನ್ನು ತಪ್ಪಿಸಲು ಮೈಸೂರು ಮಹಾನಗರ ಪಾಲಿಕೆಯು ಗಣಕೀಕರಿಸಿದ ಮಾಹಿತಿಯನ್ನು ಆಸ್ತಿ ಕಣಜ ತಂತ್ರಾಂಶದಲ್ಲಿ ದಾಖಲಿಸುವ ಇ–ಆಸ್ತಿ ಯೋಜನೆಯನ್ನು ಜಾರಿ ಕಾರ್ಯಕ್ಕೆ ಚಾಲನೆ ನೀಡಿದೆ.

ಆಸ್ತಿಗಳ ದಾಖಲೆ ಪತ್ರಗಳನ್ನು ಕಂಪ್ಯೂಟರೀಕರಣ ಮಾಡಲು ಮನೆ–ಮನೆಯಿಂದ ಕಸ ಸಂಗ್ರಹಿಸಲು ಬರುವ ಪೌರಕಾರ್ಮಿಕರ ಮೂಲಕ ಇ–ಆಸ್ತಿ ನೋಂದಣಿ ಅರ್ಜಿ ನಮೂನೆ, ಮಾಹಿತಿಯನ್ನು ಪಾಂಪ್ಲೆಟ್‌ಗಳ ರೂಪದಲ್ಲಿ ಸಾರ್ವಜನಿಕರಿಗೆ ತಲುಪಿಸುತ್ತಿರುವ ಪಾಲಿಕೆಯು, ಆಸ್ತಿ ಮಾಲೀಕರಿಗೆ ಅರಿವು ಮೂಡಿಸಲಾರಂಭಿಸಿದೆ. ವಲಯ ಕಚೇರಿ ಗಳಲ್ಲಿ ಈಗಾಗಲೇ ಆಸ್ತಿಗಳ ಸಂಬಂಧ ಲಭ್ಯವಿರುವ ಮಾಹಿತಿ ಆಧರಿಸಿ ಕೆಎಂಎಫ್–24 ವಹಿಯನ್ನು ತಯಾರಿಸುವುದು, ಸಮೀಕ್ಷೆಗೆ ಬೇಕಾದ ಮಾಹಿತಿಯನ್ನು ಅನುಬಂಧ–2ರ ನಮೂನೆಯಲ್ಲಿ ಪಡೆ ಯುವುದು, ಸ್ವತ್ತಿನ ಮಾಲೀಕರಿಂದ ಆಗತ್ಯ ದಾಖಲೆ ಖಚಿತಪಡಿಸಿಕೊಳ್ಳುವುದು, ಡೇಟಾ ಎಂಟ್ರಿ ಆಪರೇಟರ್‌ಗಳಿಂದ ಗಣಕೀಕರಣ ಪ್ರಕ್ರಿಯೆ ನಡೆಸಲು ಪಾಲಿಕೆ ಕಾರ್ಯಪ್ರವೃತ್ತವಾಗಿದೆ. ಅಧಿಕೃತ, ಅನಧಿಕೃತ ಮತ್ತು ಅಕ್ರಮ ಸ್ವತ್ತುಗಳು, ಸರ್ಕಾರಿ, ಪಾಲಿಕೆ ಆಸ್ತಿ ಹಾಗೂ ಬಫರ್ ಜೋನ್ ವ್ಯಾಪ್ತಿ ಮತ್ತು ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಸ್ವತ್ತುಗಳ ವಿವರಗಳನ್ನು ಪ್ರತ್ಯೇಕ ವಹಿಗಳಲ್ಲಿ ದಾಖಲಿಸಲು ಇ–ಸ್ವತ್ತು ಯೋಜನೆ ಸಹಾಯಕವಾಗಲಿದೆ. ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಆಸ್ತಿ ಮಾಲೀಕರು ತಮ್ಮ ನಿವೇಶನ, ಮನೆ, ವಾಣಿಜ್ಯೋದ್ಯಮ ಹಾಗೂ ಇತರ ಆಸ್ತಿಗಳಿಗೆ ಸಂಬಂಧಿಸಿದ ಇ–ಆಸ್ತಿ ತಂತ್ರಾಂಶವನ್ನು ಸರಳೀಕರಿಸುವ ಸಲುವಾಗಿ ಸಂಪೂರ್ಣ ದಾಖಲೆಗಳನ್ನು ತಮ್ಮ ವ್ಯಾಪ್ತಿಯ ವಲಯ ಕಚೇರಿಗಳಿಗೆ ನೀಡುವಂತೆ ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.


ಮೈಸೂರು ಮಹಾನಗರ ಪಾಲಿಕೆ, ವಲಯ ಕಛೇರಿ –
(Owner NAME)
(FATHER / SPOUSE NAME)
MOBILE NUMBER
PID NUMBER (IF KNOWN)
(PROPERTY NUMBER)
(PROPERTY ADDRESS)
(OWNER PHOTO)
(PROPERTY PHOTO)
(lang) : (lat) :
PAN CARD / DRIVING LICENCE VOTER ID / PASSPORT
Please include the below documents if in case property is building
CR (Completion Report)
(Current Bill)
(Water Bill)

ಇ–ಆಸ್ತಿ ನೋಂದಾಯಿಸಲು ಭರ್ತಿ ಮಾಡಬೇಕಾದ ಅರ್ಜಿ ಫಾರಂ

ಆಸ್ತಿಯ ನೋಂದಾಯಿತ ಕ್ರಯಪತ್ರ, ಭಾವಚಿತ್ರ, ಮಾಲೀಕರ ಭಾವಚಿತ್ರ, ಗುರುತಿನ ಚೀಟಿ, ವಿದ್ಯುತ್ ಸಂಪರ್ಕದ ಆರ್‌ಆರ್ ಸಂಖ್ಯೆ, ನೀರಿನ ಬಿಲ್, ಕಂದಾಯ ರಶೀದಿ, ಕಟ್ಟಡ ಪರವಾನಗಿ ಪ್ರತಿಗಳನ್ನು ಅರ್ಜಿ ನಮೂನೆ ಜೊತೆ ನೀಡಿದಲ್ಲಿ ಅದರ ಮಾಹಿತಿಯನ್ನು ಗಣಕೀಕರಣಗೊಳಿಸಿ ಆಸ್ತಿ ಕಣಜ ತಂತ್ರಾಂಶದಲ್ಲಿ ದಾಖಲಿಸಲಾಗುವುದು. ಅದರಿಂದ ಮುಂದೆ ನಕಲಿ ದಾಖಲೆ ಸೃಷ್ಟಿಸುವುದು, ಅಕ್ರಮ ಪರಭಾರೆಯಂತಹ ಕೃತ್ಯಗಳಿಗೆ ಕಡಿವಾಣ ಹಾಕಿದಂತಾಗುತ್ತದೆ. ಇ–ಆಸ್ತಿ ಯೋಜನೆಯನ್ನು ನಂತರದ ಹಂತದಲ್ಲಿ ಕಂದಾಯ ಆಸ್ತಿಗಳಿಗೂ ವಿಸ್ತರಿಸಲಾಗುವುದು ಎಂದು ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

ಸರ್ಕಾರದಿಂದ ಗ್ರಂಥಾಲಯಗಳ ಕಡೆಗಣನೆ

ಪ್ರೊ.ಎನ್.ಎಸ್.ಹರಿನಾರಾಯಣ ವಿಷಾದ



ಮೈಸೂರು, ನ.15(ಎಸ್‌ಪಿಎನ್)– ರಾಜ್ಯದ ವಿವಿಗಳಲ್ಲಿನ ಗ್ರಂಥಾಲಯ ವಿಭಾಗ ಹಾಗೂ ಸಾರ್ವಜನಿಕ ಗ್ರಂಥಾಲಯಗಳನ್ನು ಸಂಪೂರ್ಣ ಕಡೆಗಣಿಸಿದೆ ಎಂದು ಮೈಸೂರು ವಿವಿ ಪ್ರೊ. ಎನ್.ಎಸ್. ಹರಿನಾರಾಯಣ ವಿಷಾದ ವ್ಯಕ್ತಪಡಿಸಿದರು.

ಮೈಸೂರು ವಿವಿ ಮಾನಸಗಂಗೋತ್ರಿ ಆವರಣದ ಡಾ.ಎಸ್.ಆರ್.ರಂಗನಾಥನ್ ಸಭಾಂಗಣದಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ, ಮೈಸೂರು ವಿವಿ ಮಾಹಿತಿ ಮತ್ತು ಗ್ರಂಥಾಲಯ ಹಿರಿಯ ವಿದ್ಯಾರ್ಥಿಗಳ ಸಂಘ (ಎಂಐಎಲ್‌ಎಎನ್) ಸಹಯೋಗದೊಂದಿಗೆ ಐದು ದಿನಗಳ 'ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ'ಕ್ಕೆ ಸರಸ್ವತಿ ವಿಗ್ರಹಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಲಾಯಿತು.

1965ರಲ್ಲಿ ಮೈಸೂರು ವಿವಿ ಗ್ರಂಥಾಲಯ ವಿಭಾಗ ಆರಂಭವಾಯಿತು. ಅನೇಕ ದಶಕಗಳು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಸಾಕಷ್ಟು ಹೆಸರುವಾಸಿಯಾಗಿತು. ಆದರೆ, ಇತ್ತೀಚಿನ ದಿನಗಳಲ್ಲಿ ಗ್ರಂಥಾಲಯಕ್ಕೆ ಭೇಟಿ ನೀಡುತ್ತಿರುವ ಓದುಗರ ಸಂಖ್ಯೆ ಕಡಿಮೆಯಾಗುತ್ತಿವೆ. ಅಲ್ಲದೆ, ಸರ್ಕಾರದ ನೀಡುತ್ತಿರುವ ಅನುದಾನದಲೂ ಕಡಿತವಾಗಿದೆ. ಅಂತೆಯೇ ಸಿಬ್ಬಂದಿಗಳ ನೇಮಕಾತಿ ವಿಚಾರದಲ್ಲಿ ಅನಗತ್ಯ ತಡೆಯಾಗಿದೆ. ಅಲ್ಲದೆ ಸಾರ್ವಜನಿಕ ಗ್ರಂಥಾಲಯಗಳ ಅಭಿವೃದ್ಧಿಗೆ ಸಾರ್ವಜನಿಕರಿಂದ ವಸೂಲಿ ಮಾಡುತ್ತಿರುವ ತೆರಿಗೆ ಹಣ ಉಪಯೋಗಕ್ಕೆ ಸರ್ಕಾರ ಅನುಮತಿ ನೀಡದಿರುವುದು ಬೇಸರದ ಸಂಗತಿ ಎಂದರು. ತಂತ್ರಜ್ಞಾನ ಬೆಳವಣಿಗೆಯಿಂದ ಗ್ರಂಥಾಲಯ ಬೆಳವಣಿಗೆಗೆ ಮಾರಕ ಎಂಬ ಭಾವನೆ ಸಾರ್ವಜನಿಕರಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ಮೂಡುತ್ತಿದೆ. ತಂತ್ರಜ್ಞಾನ ಬದಲಾದಂತೆ, ಪುಸ್ತಕಗಳ ಸ್ವರೂಪ ಬದಲಾಗಬಹುದು. ಆದರೆ, ಪುಸ್ತಕಗಳನ್ನು ಓದುವುದರಲ್ಲಿ ಸಿಗುವ ಸುಖ– ಅನುಭವ, ಕಂಪ್ಯೂಟರ್, ಲ್ಯಾಪ್‌ಟಾಪ್ ಮೂಲಕ ಆ ಅನುಭವ ಸಿಗುವುದಿಲ್ಲ. ಹಾಗಾಗಿ ಹಿರಿಯ ಲೇಖಕರ ಪುಸ್ತಕಗಳು ಗ್ರಂಥಾಲಯದಲ್ಲಿನ ಶಕ್ತಿ ಕೇಂದ್ರವಾಗಿ ಪರಿವರ್ತಿತವಾಗುತ್ತವೆ ಎಂದರು.

ಮೈಸೂರು ವಿವಿ ಸಂಜೆ ಕಾಲೇಜಿನ ನಿವೃತ್ತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು, 'ಗ್ರಂಥಗಳಿಂದ ಜ್ಞಾನಾಭಿವೃದ್ಧಿ' ಕುರಿತು ಮಾತನಾಡಿದರು. ಈ ವೇಳೆ ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ.ಎಂ.ಚಂದ್ರಶೇಖರ, ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷೆ ಡಾ.ಬಿ.ಎಂ.ಮೀರಾ ಸೇರಿದಂತೆ ಇತರರಿದ್ದರು.

ಕೊಡಗು–ಕೇರಳ ಗಡಿಯಲ್ಲಿ ನಕ್ಸಲರು; ಗುಂಡಿನ ಚಕಮಕಿ

ಓರ್ವ ನಕ್ಸಲ್‌ಗೆ ಗುಂಡೇಟು ಶಂಕೆ; ಜಿಲ್ಲೆಯಾದ್ಯಂತ ಹೈ ಅಲರ್ಟ್



ಮಡಿಕೇರಿ,ನ.15– ಕೊಡಗು–ಕೇರಳ ಗಡಿಯ ಕಣ್ಣೂರು ಜಿಲ್ಲಾ ವ್ಯಾಪ್ತಿಯ ಅರಣ್ಯ ಪ್ರದೇಶದಲ್ಲಿ ಸೋಮವಾರ ನಕ್ಸಲರು ಹಾಗೂ ಕೇರಳದ ನಕ್ಸಲ್ ನಿಗ್ರಹ ದಳ ಥಂಡರ್ ಬೋಲ್ಟ್ ಕಮಾಂಡೋಗಳ ನಡುವೆ ಗುಂಡಿನ ಚಕಮಕಿ ನಡೆದಿದೆ. ಈ ಕಾರ್ಯಾಚರಣೆ ವೇಳೆ ಓರ್ವ ನಕ್ಸಲ್ ಗಾಯಗೊಂಡಿರುವುದಾಗಿ ತಿಳಿದುಬಂದಿದ್ದು, ಈತ ಚಿಕಿತ್ಸೆ ಅಥವಾ ರಕ್ಷಣೆಗಾಗಿ ಕೊಡಗು ಜಿಲ್ಲೆಯನ್ನು ಪ್ರವೇಶಿಸುವ ಸಾಧ್ಯತೆಗಳಿರುವುದರಿಂದ ಜಿಲ್ಲಾ ಪೊಲೀಸರು 'ಹೈ ಅಲರ್ಟ್' ಘೋಷಿಸಿದ್ದಾರೆ.

ಕೊಡಗು–ಕೇರಳ ಗಡಿ ಪ್ರದೇಶದ ಅರಣ್ಯ ವ್ಯಾಪ್ತಿಯ 4–5 ಕಿ.ಮೀ ವೈಮಾನಿಕ ದೂರದಲ್ಲಿ ಗುಂಡಿನ ಚಕಮಕಿ ನಡೆದಿದ್ದು, ನಕ್ಸಲರು ಕೇರಳ ಅರಣ್ಯ ಪ್ರದೇಶದಿಂದ ಕೊಡಗನ್ನು ಪ್ರವೇಶಿಸಿರುವ ಬಗ್ಗೆ ಶಂಕೆ ವ್ಯಕ್ತವಾಗಿದೆ. ಆದ್ದರಿಂದ ಜಿಲ್ಲೆಯ ಚೆಕ್‌ಪೋಸ್ಟ್‌ಗಳಲ್ಲಿ ಹೆಚ್ಚುವರಿಯಾಗಿ ಜಿಲ್ಲಾ ಸಶಸ್ತ್ರ ಪೊಲೀಸರನ್ನು ನಿಯೋಜಿಸಲಾಗಿದ್ದು, ಎಲ್ಲಾ ವಾಹನಗಳನ್ನು ತಪಾಸಣೆಗೆ ಒಳಪಡಿಸಲಾಗುತ್ತಿದೆ. ಗಡಿ ಭಾಗದ ಎಲ್ಲಾ ಆಸ್ಪತ್ರೆಗಳು, ಮೆಡಿಕಲ್ ಶಾಪ್‌ಗಳು ಮತ್ತು ಹೋಂಸ್ಟೇಗಳಿಗೂ ಈ ಕುರಿತು ಎಚ್ಚರದಿಂದ ಇರುವಂತೆ ತಿಳಿಸಲಾಗಿದೆ. ಅಲ್ಲದೆ ಪೊಲೀಸರನ್ನು ನಿಯೋಜಿಸಿ ನಿಗಾ ಇರಿಸಲಾಗಿದೆ. ಗಡಿ ಭಾಗದಲ್ಲಿ ನಕ್ಸಲ್ ಚಟುವಟಿಕೆ ತೀವ್ರಗೊಂಡಿರುವ ಹಿನ್ನೆಲೆಯಲ್ಲಿ ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅವರು ಗಡಿ ಭಾಗವಾದ ಬಿರುನಾಣಿ, ತೆರಾಲು, ಪರಕಟಗೇರಿ ಮತ್ತು ಕುಟ್ಟ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಎಸ್.ಪಿ. ರಾಮರಾಜನ್ ಅವರು ಕೂಂಬಿಂಗ್ ಕಾರ್ಯಾಚರಣೆ ಕುರಿತು ಚರ್ಚಿಸಿದರು.

ಕಳೆದ ಮಂಗಳವಾರ ಕೇರಳ ವೈನಾಡು ಜಿಲ್ಲೆಯ ತಳಪುಳ್ಳ ಪೊಲೀಸ್ ಠಾಣಾ ವ್ಯಾಪ್ತಿಯ ಪಿರಿಯ ಅರಣ್ಯ ಪ್ರದೇಶದ ಚಪ್ಪರ ಕಾಲೋನಿಗೆ 5 ಮಂದಿ ನಕ್ಸಲರು ಬಂದಿದ್ದರು. ಈ ಮಾಹಿತಿ ಪಡೆದ ಕೇರಳ ನಕ್ಸಲ್ ನಿಗ್ರಹ ದಳದ ಥಂಡರ್ ಬೋಲ್ಟ್ ಕಮಾಂಡೋಗಳು ಕೂಂಬಿಂಗ್ ಕಾರ್ಯಾಚರಣೆ ಆರಂಭಿಸಿದ್ದರು.

ಈ ವೇಳೆ ನಕ್ಸಲರು ಮತ್ತು ಥಂಡರ್ ಬೋಲ್ಟ್ ಕಮಾಂಡೋಗಳ ನಡುವೆ ಗುಂಡಿನ ಚಕಮಕಿ ನಡೆದಿತ್ತು. ಈ ಸಂದರ್ಭ 3 ಮಂದಿ ನಕ್ಸಲರು ಪರಾರಿಯಾಗಿದ್ದರೆ, ಕೇರಳದ ನಕ್ಸಲ್ ನಾಯಕ ಚಂದ್ರು ಅಲಿಯಾಸ್ ತಿರುವೆಂದಿಗಂ ಮತ್ತು ಕರ್ನಾಟಕ ಶೃಂಗೇರಿ ಮೂಲದ ಶ್ರೀಮತಿ ಅಲಿಯಾಸ್ ಉನ್ನಿಮಾಯ ಎಂಬಾಕೆಯನ್ನು ಬಂಧಿಸಲಾಗಿತ್ತು. ಇದೀಗ ಕೇರಳ ಕಣ್ಣೂರು–ಕೊಡಗು ಗಡಿಯ ಬಿರುನಾಣಿ ಅರಣ್ಯ ವ್ಯಾಪ್ತಿಯಲ್ಲಿ ನಕ್ಸಲರು ಕಾಣಿಸಿಕೊಂಡಿದ್ದು, ಜಿಲ್ಲೆಗೆ ನುಸುಳದಂತೆ ಕಟ್ಟೆಚ್ಚರ ವಹಿಸಲಾಗಿದೆ.

ಕೊಡಗಿನಲ್ಲಿ ನಕ್ಸಲ್ ನೆರಳು

ಕೇರಳ ರಾಜ್ಯದೊಂದಿಗೆ ಗಡಿ ಹಂಚಿಕೊಂಡಿರುವ ಕೊಡಗು ಜಿಲ್ಲೆಯಲ್ಲೂ ನಕ್ಸಲರ ಹೆಜ್ಜೆ ಗುರುತುಗಳಿವೆ. 2010ರಲ್ಲಿ ಭಾಗಮಂಡಲ–ಕೇರಳ ಗಡಿಯ ಅರಣ್ಯ ಪ್ರದೇಶದ ಮುಂಡ್ರೋಟು ಎಂಬಲ್ಲಿ ನಕ್ಸಲರು ಪ್ರತ್ಯಕ್ಷವಾಗಿದ್ದರು. ಆ ಬಳಿಕ ಕಾಲೂರು, ಸಂಪಾಜೆಯ ಕೂಡುಗದ್ದೆ, ಕರಿಕೆ ಭಾಗಗಳ ಕುಗ್ರಾಮಗಳಲ್ಲಿ ನಕ್ಸಲರು ಕಂಡು ಬಂದಿದ್ದರು. ಈ ವೇಳೆ ಕೊಡಗು ನಕ್ಸಲ್ ನಿಗ್ರಹ ದಳ ಸತತ ಕೂಂಬಿಂಗ್ ಕಾರ್ಯಾಚರಣೆ ನಡೆಸಿತ್ತು.

ಮೈಸೂರು ಮಿತ್ರ

ಗುರುವಾರ 16 ನವೆಂಬರ್ 2023

ಸಿದ್ದೇಶ್ವರಸ್ವಾಮಿಯ ಅದ್ದೂರಿ ರಥೋತ್ಸವ



ನಂಜನಗೂಡು ತಾಲೂಕಿನ ಕಾರ್ಯ ಸಿದ್ದೇಶ್ವರಸ್ವಾಮಿಯ ಖಿರ್ಜುನ್ನು ಬೆಟ್ಟಕ್ಕೆ ಕೊಂಡೊಯ್ಯುತ್ತಿರುವುದು.

ಕಾರ್ಯ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ

ನಂಜನಗೂಡು, ನ.15– ತಾಲೂಕಿನ ಕಾರ್ಯ ಗ್ರಾಮದ ಸಿದ್ದೇಶ್ವರಸ್ವಾಮಿಯ ರಥೋತ್ಸವ ಬುಧವಾರ ಸಹಸ್ರಾರು ಭಕ್ತರ ಜಯಘೋಷಗಳೊಂದಿಗೆ ವಿಜೃಂಭಣೆಯಿಂದ ನೆರವೇರಿತು.

ಗ್ರಾಮದ ಗದ್ದಿಗೆ ಆವರಣದಲ್ಲಿ ಸಿದ್ದೇಶ್ವರಸ್ವಾಮಿ ಉತ್ಸವ ಮೂರ್ತಿಯನ್ನು ಹೂವಿನಿಂದ ಅಲಂಕೃತಗೊಳಿಸಿ ಖಿರ್ಜಿನಲ್ಲಿ ಪ್ರತಿಷ್ಠಾಪಿಸಲಾಯಿತು. ನಂತರ ವಾಟಾಳು ಶ್ರೀಗಳು ಮತ್ತು ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ ಜಾತ್ರೆಗೆ ಚಾಲನೆ ನೀಡಿದರು. ಬಗೆ ಬಗೆಯ ಹೂವು ಮತ್ತು ಹೊಂಬಾಳೆ ಅಲಂಕಾರದೊಂದಿಗೆ ರಥ ಕಂಗೊಳಿಸುತ್ತಿತ್ತು. ರಥವನ್ನು ಮಧ್ಯಾಹ್ನ ಮಂಗಳವಾದ್ಯದೊಂದಿಗೆ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ, ಬೆಟ್ಟದ ಸಮೀಪಕ್ಕೆ ಬಂದ ರಥದಿಂದ ಗ್ರಾಮ ಪಂಚಾಯಿತಿ ಕಚೇರಿ ಬಳಿ ಖಿರ್ಜನ್ನು ಬೇರ್ಪಡಿಸಲಾಯಿತು. ನಂತರ ಗ್ರಾಮಸ್ಥರು ಉತ್ಸವ ಮೂರ್ತಿಯ ಖಿರ್ಜನ್ನು ಕಡಿದಾದ ಸಿದ್ದೇಶ್ವರ ಬೆಟ್ಟಕ್ಕೆ ಹೊತ್ತು ಹತ್ತುತ್ತಿದ್ದಂತೆ ನವದಂಪತಿಗಳು ಸೇರಿದಂತೆ ನೆರೆದಿದ್ದ ಭಕ್ತರು ಹಣ್ಣು–ಜವನ ಎಸೆದು ಹರಕೆ ತೀರಿಸಿದರು.

ಇದೇ ವೇಳೆ ಸುತ್ತಮುತ್ತಲಿನ ಗ್ರಾಮದ ರೈತರು ಜಾನುವಾರುಗಳಿಗೆ ರೋಗ–ರುಜಿನಗಳು ಹರಡದಂತೆ ಹರಕೆ ಕಟ್ಟಿ ಬೆಟ್ಟದ ಬಸವನ ವಿಗ್ರಹಕ್ಕೆ ಪಂಜಿನ ದೀವಟಿಗೆ ಸೇವೆ ನೆರವೇರಿಸಿದರು. ದೀಪಾವಳಿ ಹಬ್ಬದ ಮರುದಿನವಾದ ಬುಧವಾರ ತಾಲೂಕಿನ ಕಾರ್ಯ, ಕಾರೇಪುರ, ತಗಡೂರು, ಚಿನ್ನಂಬಳ್ಳಿ, ಕಾಮಹಳ್ಳಿ, ಬಾಣೂರು, ಹನುಮನಪುರ, ಚುಂಚನಹಳ್ಳಿ, ಅರಳಿಕಟ್ಟೆಹುಂಡಿ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಕಾರ್ಯ ಸಿದ್ದೇಶ್ವರಸ್ವಾಮಿಯ ಜಾತ್ರೆಯನ್ನು ಅದ್ದೂರಿಯಾಗಿ ಆಚರಿಸುವುದು ವಾಡಿಕೆಯಾಗಿದೆ. ದೊಡ್ಡಕೌಲಂದೆ ಠಾಣೆ ಪೊಲೀಸರು ಬಂದೋಬಸ್ತ್ ಏರ್ಪಡಿಸಿದ್ದರು. ಜಿಪಂ ಮಾಜಿ ಅಧ್ಯಕ್ಷ ಸಿದ್ದವೀರಪ್ಪ, ಕೃಷ್ಣಕುಮಾರ್, ಡಿವೈಎಸ್ಪಿ ಗೋವಿಂದರಾಜು ಇದ್ದರು.

ಹಂಪಾಪುರದಲ್ಲಿ ಭಕ್ತರ ಸಮ್ಮುಖದಲ್ಲಿ ಉಯ್ಯಾಲೋತ್ಸವ



ಕೆ.ಆರ್.ನಗರ: ತಾಲೂಕಿನ ಹಂಪಾಪುರ ಗ್ರಾಮದಲ್ಲಿ ಮಂಗಳವಾರ ರಾತ್ರಿ ದೀಪಾವಳಿ ಹಬ್ಬದ ಪ್ರಯುಕ್ತ ನಾಲ್ಕು ಕಂಬಗಳ ಮೆರವಣಿಗೆ (ಉಯ್ಯಾಲೋತ್ಸವ) ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಹಬ್ಬದ ಅಂಗವಾಗಿ ಗ್ರಾಮದ ಪ್ರಮುಖ ಬೀದಿಗಳನ್ನು ತಳಿರು–ತೋರಣಗಳಿಂದ ಸಿಂಗರಿಸುವ ಮೂಲಕ ಹಾಸನ–ಮೈಸೂರು ರಸ್ತೆಯ ಇಕ್ಕೆಲಗಳಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು. ಸನ್ಯಾಸಿಪುರ ಮತ್ತು ಹಂಪಾಪುರದ ಪ್ರಮುಖ ಬೀದಿಗಳಲ್ಲಿ ಕಂಬದ ಮೆರವಣಿಗೆ ನಡೆಸಿ ದೇವಾಲಯದ ಆವರಣದಲ್ಲಿ ನಿಲ್ಲಿಸಿ ಪೂಜೆ ಸಲ್ಲಿಸಲಾಯಿತು.

ಮೆರವಣಿಗೆ ಸಾಗುವ ಬೀದಿಗಳಲ್ಲಿ ಮನೆಗಳ ಮುಂದೆ ಮಹಿಳೆಯರು ನೀರು ಸುರಿದು ಬಣ್ಣ ಬಣ್ಣದ ರಂಗೋಲಿಗಳನ್ನು ಬಿಡಿಸಿದರು. ಮೆರವಣಿಗೆ ತಮ್ಮ ಮನೆಯ ಮುಂಭಾಗ ಆಗಮಿಸುತ್ತಿದ್ದಂತೆ ಕೆಲವರು ಬಲಿ ಪೂಜೆ ಸಲ್ಲಿಸಿ ಹರಕೆ ತೀರಿಸಿದರು. ಸುಮಾರು 12 ಕಿ.ಮೀ. ದೂರದ ತಿಪ್ಪೂರು ಗ್ರಾಮದಿಂದ ಬರಿಗಾಲಿನಲ್ಲಿ ಅಡಕೆ ಮರಗಳನ್ನು ಹೊತ್ತು ತಂದು ಹಂಪಾಪುರದ ದೇವಾಲಯದ ಮುಂಭಾಗ ಪ್ರತಿಷ್ಠಾಪಿಸಿ, ಬುಧವಾರ ಸಂಜೆ ದೇವಿಯ ಉತ್ಸವ ಮೂರ್ತಿಯನ್ನು ಇದೇ ಅಡಕೆ ಮರಗಳಿಗೆ ಕಟ್ಟಿದ ಉಯ್ಯಾಲೆಯಲ್ಲಿ ಕೂರಿಸಿ ವೈಭವದಿಂದ ಉಯ್ಯಾಲೋತ್ಸವ ನಡೆಸಲಾಯಿತು.

ಶಾಸಕ ಡಿ.ರವಿಶಂಕರ್ ಮತ್ತು ಪತ್ನಿ ಸುನಿತಾ ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ, ಉತ್ತಮ ಮಳೆ, ಬೆಳೆಯಾಗಿ ಕ್ಷೇತ್ರ ಅಭಿವೃದ್ಧಿ ಹೊಂದಿ ಜನತೆಯ ಇಷ್ಟಾರ್ಥಗಳನ್ನು ದುರ್ಗಾಪರಮೇಶ್ವರಿ ನೆರವೇರಿಸುವಂತೆ ಪ್ರಾರ್ಥಿಸಿದರು. ಗ್ರಾಪಂ ಅಧ್ಯಕ್ಷೆ ರಮ್ಯ ಮಂಜುನಾಥ್, ಉಪಾಧ್ಯಕ್ಷ ಹೆಚ್.ಈ.ಮಹದೇವಕುಮಾರ್, ಸದಸ್ಯರಾದ ಹೆಚ್.ಡಿ.ನಾಗೇಶ್, ರವಿಕುಮಾರ್, ವಿದ್ಯಾ ನಾರಾಯಣ್, ಗೌರಮ್ಮ ಪರಶುರಾಮ್, ಲೋಕೇಶ್, ರೇವಣ್ಣ, ಹರಿರಾಜು, ಟಿಎಪಿಸಿಎಂಎಸ್‌ನ ನಿರ್ದೇಶಕ ಹೆಚ್.ಪಿ.ಪ್ರಶಾಂತ್, ಎಪಿಎಂಸಿ ಮಾಜಿ ನಿರ್ದೇಶಕ ಬಿ.ಎಂ. ನಾಗರಾಜು, ಹಂಪಾಪುರ ವಿಎಸ್‌ಎಸ್‌ಎನ್ ನಿರ್ದೇಶಕ ಕುಚೇಲ, ಮುಖಂಡರಾದ ದೇವರಾಜು, ಗೋವಿಂದೇಗೌಡ, ಮಂಚನಹಳ್ಳಿ ಧನು ಮತ್ತಿತರರು ಹಾಜರಿದ್ದರು.



ತಿ.ನರಸೀಪುರದ ಪುರಾಣ ಪ್ರಸಿದ್ಧ ಶ್ರೀ ಗುಂಜಾನರಸಿಂಹಸ್ವಾಮಿ ದೇವಾಲಯದಲ್ಲಿ ದೀಪಾವಳಿ ಹಬ್ಬದ ವಿಶೇಷವಾಗಿ ಗೋಪೂಜೆ ನೆರವೇರಿಸಲಾಯಿತು. ಅರ್ಚಕ ಜಜ್ಜಪ್ಪ, ಪಾರುಪತ್ತೇದಾರ ದೀಪು ಇದ್ದರು.



ಪಿರಿಯಾಪಟ್ಟಣ ತಾಲೂಕಿನ ಕಂಪಲಾಪುರದ ಹೆದ್ದಾರಿ ಪಕ್ಕದ ಶ್ರೀ ಕೋಡಿ ಬಸವೇಶ್ವರ ದೇವಾಲಯದಲ್ಲಿ ದೀಪಾವಳಿ ಹಬ್ಬದ ಪ್ರಯುಕ್ತ ಮಂಗಳವಾರ ವಿಶೇಷ ಪೂಜೆ ಹಾಗೂ ಪ್ರಸಾದ ವಿನಿಯೋಗ ನೆರವೇರಿಸಲಾಯಿತು.

ಕಂತೆ ಮಹದೇಶ್ವರಸ್ವಾಮಿಯ ಜಾತ್ರೆ



ಮಲ್ಕುಂಡಿ, ನ.15– ನಂಜನಗೂಡು ತಾಲೂಕಿನ ತರಗನಹಳ್ಳಿ ಗ್ರಾಮದ ಬಳಿಯ ಶ್ರೀ ಕಂತೆ ಮಹದೇಶ್ವರ ಬೆಟ್ಟದಲ್ಲಿ ದೀಪಾವಳಿ ಹಬ್ಬದ ಪ್ರಯುಕ್ತ ಮಂಗಳವಾರ ಜಾತ್ರೆ ಮಹೋತ್ಸವ ವಿಜೃಂಭಣೆಯಿಂದ ಜರುಗಿತು.

ರಥೋತ್ಸವ ಹಾಗೂ ಕೊಂಡೋತ್ಸವಕ್ಕೆ ಕಂತೆ ಮಹದೇಶ್ವರ ಶಿಲಾ ಮಠದ ಶ್ರೀ ಮಹಾಂತ ದೇಶಿಕೇಂದ್ರಸ್ವಾಮೀಜಿ ಚಾಲನೆ ನೀಡಿದರು. ಸುತ್ತಮುತ್ತಲಿನ ಗ್ರಾಮಸ್ಥರು ಭಾಗವಹಿಸಿದರು.

ಕಾಂಪೋಸ್ಟ್ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಬದನವಾಳು ಮೂರ್ತಿ, ಮಹದೇವಪ್ಪ, ಬಸವರಾಜ್, ನಟರಾಜ್, ಮಹೇಶ್ ಮತ್ತಿತರರು ಭೇಟಿ ನೀಡಿ, ದೇವರ ದರ್ಶನ ಪಡೆದರು.

ಹೆಚ್.ಡಿ.ಕೋಟೆಯಲ್ಲಿ ರೋಚಕ ಎತ್ತಿನಗಾಡಿ ಓಟ

ಹೆಚ್.ಡಿ.ಕೋಟೆ, ನ.15–ಪಟ್ಟಣದಲ್ಲಿ ಮಂಗಳವಾರ ದೀಪಾವಳಿ ಹಬ್ಬವನ್ನು ಎತ್ತಿನಗಾಡಿ ಓಟದ ಮೂಲಕ ವಿಜೃಂಭಣೆಯಿಂದ ಆಚರಿಸಲಾಯಿತು.

ಪಟ್ಟಣದ ಮೊದಲನೇ ಮುಖ್ಯರಸ್ತೆಯಲ್ಲಿ ವಿಶೇಷವಾಗಿ ಎತ್ತುಗಳು ಹಾಗೂ ಗಾಡಿಗಳಿಗೆ ಹೂವು, ಬಣ್ಣಗಳಿಂದ ಅಲಂಕರಿಸಿ, ಕನ್ನಡ ಬಾವುಟಗಳನ್ನು ಕಟ್ಟಿ ಓಡಿಸಲಾಯಿತು. ಎತ್ತಿನಗಾಡಿ ಓಟವನ್ನು ನೋಡಲು ಸುತ್ತಮುತ್ತಲಿನ ಗ್ರಾಮಗಳಿಂದ ಸಾವಿರಾರು ಜನ ಸೇರಿದ್ದರು. ತಾಲೂಕಿನ ಕೇರಳ ಗಡಿಭಾಗವಾದ ಡಿ.ಬಿ.ಕುಪ್ಪೆ, ಒಡಕನಮಾಳ, ಕಡೆಗದ್ದೆ, ಬಾವಲಿ ಸುತ್ತಮುತ್ತಲಿನ ಗ್ರಾಮಸ್ಥರು ದೀಪಾವಳಿ ಆಚರಿಸಿದರು. ಡಿ.ಬಿ.ಕುಪ್ಪೆ ಗ್ರಾಮದ ಭೈರವೇಶ್ವರ ಹಾಗೂ ಬಸವೇಶ್ವರ ಜಾತ್ರೆ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಭೈರವೇಶ್ವರ ಹಾಗೂ ಬಸವೇಶ್ವರ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ, ಮಂಗಳವಾದ್ಯ, ಚೆಂಡೆ, ಡೊಳ್ಳು ಕುಣಿತ, ಕಾವಾಡಿ, ಕರಗವನ್ನು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಕೇರಳದಿಂದ ಬಂದ ಸಾವಿರಾರು ಭಕ್ತರು ಸ್ವಾಮಿಯ ದರ್ಶನ ಪಡೆದರು. ಜಾತ್ರಾ ಮಹೋತ್ಸವದ ಅಂಗವಾಗಿ ಹಾಕಿದ್ದ ಡಿಜೆ ಕನ್ನಡ ಗೀತೆಗಳಿಗೆ ಜನರು ನೃತ್ಯ ಪ್ರದರ್ಶಿಸಿದರು.



ಎತ್ತಿನಗಾಡಿ ಓಟದ ವೇಳೆ ವ್ಯಕ್ತಿಗೆ ಗಾಯ

ಹೆಚ್.ಡಿ.ಕೋಟೆಯಲ್ಲಿ ನಡೆಯುತ್ತಿದ್ದ ದೀಪಾವಳಿ ಎತ್ತಿನಗಾಡಿ ಓಟದ ವೀಕ್ಷಣೆ ವೇಳೆ ಪಟ್ಟಣದ ಸಿದ್ದನಾಯಕ ಎಂಬುವವರಿಗೆ ಗಾಡಿಯ ನೊಗ ತಗುಲಿ ತಲೆಯ ಭಾಗಕ್ಕೆ ತೀವ್ರ ಗಾಯವಾಗಿದೆ.

ರಕ್ತಸ್ರಾವದಿಂದ ಒದ್ದಾಡುತ್ತಿದ್ದ ಸಿದ್ದನಾಯಕನನ್ನು ತಕ್ಷಣ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಯಿತು. ಎತ್ತಿನಗಾಡಿಯ ಓಟದ ರಭಸದಿಂದ ನೊಗ ತಲೆಗೆ ತಗುಲಿದ್ದರಿಂದ ಕೆಳಗೆ ಬಿದ್ದು ರಕ್ತಸ್ರಾವವಾಗಿದೆ. ಸಿದ್ದನಾಯಕ ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.



ಸರಗೂರು ತಾಲೂಕಿನ ಪ್ರಸಿದ್ಧ ಶ್ರೀ ಚಿಕ್ಕದೇವಮ್ಮನವರ ಬೆಟ್ಟದಲ್ಲಿ ಗೋಪೂಜೆ ಮೂಲಕ ದೀಪಾವಳಿ ಹಬ್ಬವನ್ನು ಆಚರಿಸಲಾಯಿತು.

ಚಿಕ್ಕದೇವಮ್ಮ ಬೆಟ್ಟದಲ್ಲಿ ಗೋಪೂಜೆ

ಸರಗೂರು, ನ.15–ತಾಲೂಕಿನ ಪ್ರಸಿದ್ಧ ಶ್ರೀ ಚಿಕ್ಕದೇವಮ್ಮನವರ ಬೆಟ್ಟದಲ್ಲಿ ಮಂಗಳವಾರ ಗೋಪೂಜೆ ಮೂಲಕ ದೀಪಾವಳಿ ಹಬ್ಬವನ್ನು ಆಚರಿಸಲಾಯಿತು.

ರೈತರ ಪಾಲಿಗೆ ಬಹುದೊಡ್ಡ ಹಬ್ಬವಾದ ದೀಪಾವಳಿಯನ್ನು ಮೂರು ದಿನ ಬೆಟ್ಟದಲ್ಲಿ ಭಕ್ತಿಯಿದಿಂದ ಗೋವುಗಳಿಗೆ ವಿಶೇಷ ಪೂಜಾ ಕಾರ್ಯ ನಡೆಸುವ ಮೂಲಕ ಆಚರಿಸಲಾಯಿತು. ಇದೇ ವೇಳೆ ದೇವಾಲಯದ ಸುತ್ತ ಭಕ್ತರು ಪ್ರದಕ್ಷಿಣೆ ನಡೆಸಿ ಪ್ರಸಾದ ಸ್ವೀಕರಿಸಿದರು.

ವಿಶೇಷ ಪೂಜೆ ನೆರವೇರಿಸಿ ಮಾತನಾಡಿದ ದೇವಸ್ಥಾನದ ಪಾರುಪತ್ತೇದಾರ್ ಶಾಂತಿಪುರ ಮಹದೇವಸ್ವಾಮಿ, ದೀಪಾವಳಿಯ ಪೂಜೆಯಿಂದ ತಮ್ಮ ಇಷ್ಟಾರ್ಥಗಳು ನೆರವೇರಲಿದ್ದು, ಮನುಷ್ಯ ಮನಸ್ಸಿನಲ್ಲಿ ಪೂರ್ಣನಂಬಿಕೆ ಮತ್ತು ಭಕ್ತಿ ಬರುತ್ತದೆ ಎಂದು ತಿಳಿಸಿದರು.

ಪೂಜಾ ಕಾರ್ಯದಲ್ಲಿ ಚಿಕ್ಕದೇವಮ್ಮ ಬೆಟ್ಟದ ಅರ್ಚಕರಾದ ಪ್ರಸನ್ನಕುಮಾರ್, ವೀರಣ್ಣ, ಸಂತೋಷ, ಮಹದೇವಸ್ವಾಮಿ, ಚಿಕ್ಕದೇವಣ್ಣ, ದೇವಾಲಯದ ಸಿಬ್ಬಂದಿಗಳಾದ ಕೃಷ್ಣ, ರಮೇಶ್, ನಿಂಗಪ್ಪ, ರಾಜೇಶ್ ಹಾಗೂ ಇತರರಿದ್ದರು.

ದಲಿತ ಮಂಗಳವಾದ್ಯ ಕಲಾವಿದರ ನೇಮಕಕ್ಕೆ ಆಗ್ರಹ



ತಿ.ನರಸೀಪುರ: ಚಾಮುಂಡಿಬೆಟ್ಟ, ಮಲೆ ಮಹದೇಶ್ವರಬೆಟ್ಟ ಸೇರಿದಂತೆ ಯಾವುದೇ ದೇವಸ್ಥಾನಗಳಲ್ಲಿ ದಲಿತ ಮಂಗಳವಾದ್ಯ ಕಲಾವಿದರನ್ನು ನೇಮಕ ಮಾಡಿಕೊಂಡಿಲ್ಲ ಎಂದು ವಿರೋಧಿಸಿ ಶೀಘ್ರದಲ್ಲೇ ಮೈಸೂರಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ದಲಿತ ಸಂಘರ್ಷ ಸಮಿತಿ (ಬಣ ರಹಿತ) ಜಿಲ್ಲಾ ಸಂಚಾಲಕರಾದ ಸಿ. ಉಮಾ ಮಹದೇವ್ ಹೇಳಿದರು.

ಪಟ್ಟಣದ ಅಂಬೇಡ್ಕರ್ ಸಮುದಾಯ ಭವನದಲ್ಲಿ ನಡೆದ ದಲಿತ ಸಂಘರ್ಷ ಸಮಿತಿ, ದಲಿತ ಕಲಾವಿದರ ಸಂಘ, ದಲಿತ ಮಹಿಳಾ ಒಕ್ಕೂಟದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ತಾಲೂಕಿನ ಬೇವಿನಹಳ್ಳಿ ಗ್ರಾಮದ ದಲಿತರು, ಬಡಜನರಿಗೆ 2014ರಲ್ಲಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಹಾಗೂ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಕ್ಕುಪತ್ರ ನೀಡಿ ನಿವೇಶನ ಹಂಚಿಕೆ ಮಾಡಿದ್ದರು. ಪಂಚಾಯಿತಿಯವರು ಅದಕ್ಕೆ ಕಂದಾಯ ಕಟ್ಟಿಸಿಕೊಂಡು ಇ–ಸ್ವತ್ತು ಮಾಡಿಕೊಡದೆ, ಇಲ್ಲಸಲ್ಲದ ನೆಪ ಹೇಳಿ ಸತಾಯಿಸುತ್ತಿದ್ದಾರೆ. ಒಂದು ವಾರದೊಳಗೆ ಇ–ಸ್ವತ್ತು ನೀಡದಿದ್ದರೆ ನ.18ರಂದು ಕೇತುಪುರ ಗ್ರಾಮ ಪಂಚಾಯಿತಿ ಕಚೇರಿಗೆ ಬೀಗ ಜಡಿದು ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು.

ಕೆಎಸ್‌ಐಸಿ ರೇಷ್ಮೆ ನೂಲು ತೆಗೆಯುವ ಘಟಕದಲ್ಲಿ ಕ್ಷುಲ್ಲಕ ಕಾರಣಕ್ಕೆ ಕೆಲಸದಿಂದ ತೆಗೆದಿರುವ ಕಾರ್ಮಿಕರನ್ನ ಮರುನೇಮಕ ಮಾಡಿಕೊಳ್ಳಬೇಕು. ಕಾರ್ಮಿಕರ ಶೋಷಣೆ ವಿರುದ್ಧ ನಮ್ಮ ಮನವಿಗೆ ಸ್ಪಂದಿಸಿ ಕ್ರಮಕೈಗೊಳ್ಳುವಂತೆ ಉಸ್ತುವಾರಿ ವ್ಯವಸ್ಥಾಪಕರಿಗೆ ತಿಳಿಸಲಾಗಿದೆ. ಆದರೆ, ಇನ್ನೂ ಕ್ರಮವಹಿಸಿಲ್ಲ. ಆದ್ದರಿಂದ ಶೀಘ್ರದಲ್ಲಿ ಕ್ರಮ ವಹಿಸದಿದ್ದರೆ, ಫ್ಯಾಕ್ಟರಿ ಮುಂದೆ ಅನಿರ್ದಿಷ್ಟಾವಧಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಈ ಬಾರಿ ಮೈಸೂರು ದಸರಾ ಜಂಬೂ ಸವಾರಿಯಲ್ಲಿ ದಲಿತ ಕಲಾವಿದರ ಸಂಘಕ್ಕೆ ಅವಕಾಶ ನೀಡಿರುವುದಕ್ಕೆ ರಾಜ್ಯ ಸರ್ಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಿಗೆ ಸಭೆಯಲ್ಲಿ ಧನ್ಯವಾದ ತಿಳಿಸಿ, ದಸರಾದಲ್ಲಿ ಭಾಗವಹಿಸಿದ್ದ ಕಲಾವಿದರಿಗೆ ಅಭಿನಂದನಾ ಪತ್ರ ವಿತರಿಸಲಾಯಿತು.

ಸಭೆಯಲ್ಲಿ ದಸಂಸ ಜಿಲ್ಲಾ ಸಂಘಟನಾ ಸಂಚಾಲಕರಾದ ಆಲತ್ತೂರು ಶಿವರಾಜು, ಮೂಡಳ್ಳಿ ಮಹದೇವ್, ತಾಲೂಕು ಸಂಚಾಲಕ ಶಿವಪ್ರಕಾಶ್, ತಾಲೂಕು ಸಂಘಟನಾ ಸಂಚಾಲಕ ಚಂದಳ್ಳಿ ಮಲ್ಲೇಶ್, ಮರಡೀಪುರ ಮಲ್ಲಿಕಾರ್ಜುನ, ಹನುಮನಾಳು ಮಹದೇವ, ದಲಿತ ಕಲಾವಿರ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಬಿ.ಹುಂಡಿ ನಾಗೇಶ್, ಯಾಚಗನಳ್ಳಿ ಪವನ್ ಕುಮಾರ್, ಸುಜ್ಜಲೂರು ಮಹಾದೇವಯ್ಯ, ಸಿದ್ದರಾಜು, ಮಂಟಯ್ಯ, ಮಾದಾಪುರ ನಂಜುಂಡಯ್ಯ, ಕೇಮಪನಪುರ ಮಂಟಯ್ಯ, ಬಿನಕನಳ್ಳಿ ನಾರಾಯಣ, ಹೈಕನೂರು ಬಸವರಾಜು, ದಲಿತ ಮಹಿಳಾ ಒಕ್ಕೂಟದ ಬೇವಿನಳ್ಳಿ ಲತಾ, ಪ್ರೇಮ, ಹೇಮಾ ಮತ್ತಿತರರು ಇದ್ದರು.

ನೇಣು ಬಿಗಿದುಕೊಂಡು ರೈತ ಮಹಿಳೆ ಆತ್ಮಹತ್ಯೆ



ಹೆಚ್.ಡಿ.ಕೋಟೆ: ಸಾಲಬಾಧೆಯಿಂದ ರೈತ ಮಹಿಳೆ ಮನೆಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಹೊಸ ಹೊಳಲು ಗ್ರಾಮದಲ್ಲಿ ಬುಧವಾರ ನಡೆದಿದೆ.

ಗ್ರಾಮದ ದಿವಂಗತ ಪುಟ್ಟೇಗೌಡರ ಪತ್ನಿ ಕಮಲಮ್ಮ(58) ಆತ್ಮಹತ್ಯೆ ಮಾಡಿಕೊಂಡಿದ್ದು, ಈಕೆಗೆ ಮೂರು ಎಕರೆ ಕೃಷಿ ಭೂಮಿ ಹಾಗೂ ಇಬ್ಬರು ಗಂಡು ಮಕ್ಕಳಿದ್ದಾರೆ. ಇದರಲ್ಲಿ ಒಬ್ಬ ಬೆಂಗಳೂರಿನಲ್ಲಿದ್ದು, ಮತ್ತೊಬ್ಬ ಮಗನೊಂದಿಗೆ ಗ್ರಾಮದಲ್ಲಿ ವಾಸವಾಗಿದ್ದರು.

ಜಮೀನಿನಲ್ಲಿ ಕೊಳವೆ ಬಾವಿ ಕೊರೆಸಲು ಹಾಗೂ ಬೆಳೆ ಬೆಳೆಯಲು ರಾಷ್ಟ್ರೀಕೃತ, ಖಾಸಗಿ ಬ್ಯಾಂಕ್ ಮತ್ತು ಕೈ ಸಾಲ ಸೇರಿದಂತೆ ಒಟ್ಟು 20 ಲಕ್ಷ ರೂ. ಸಾಲ ಮಾಡಿದ್ದರು. ಆದರೆ, ಸಾಲದ ಒತ್ತಡ ಹೆಚ್ಚಾಗಿದ್ದರಿಂದ ಮನೆಯಲ್ಲಿ ಯಾರೂ ಇಲ್ಲದಿದ್ದಾಗ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಸಂಬಂಧ ಅಂತರಸಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಜಿಗರ್ ಥಂಡ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಘೋಸ್ಟ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಟೈಗರ್–3 (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗರಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲಿಯೋ (ಕ)	2 ಪ್ರದರ್ಶನಗಳು
ರಾಜಕಮಲ್	
ಟೈಗರ್–3 (ಹಿಂದಿ)	4 ಪ್ರದರ್ಶನಗಳು
ಸಂಗಂ	
ಟಗರುಪಲ್ಯ(ಕ)–2 ಆಟಗಳು	ಟೈಗರ್–3(ಹಿಂದಿ) 2 ಆಟಗಳು
ಲಿಡೋ	
ಗರಡಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಟೈಗರ್ ನಾಗೇಶ್ವರರಾವ್ (ತ)	4 ಪ್ರದರ್ಶನಗಳು
ಪ್ರಭಾ	
ಜಪಾನ್(ತ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಗರಡಿ (ಕ): ಬೆ.10.10ಕ್ಕೆ, ಮ.1.10ಕ್ಕೆ, ರಾ.7ಕ್ಕೆ, ರಾ.9.55ಕ್ಕೆ, ಟಗರುಪಲ್ಯ (ಕ): ಸಂ.4.15ಕ್ಕೆ.
ಸ್ಕ್ರೀನ್ 2	ಘೋಸ್ಟ್ (ಕ): ಬೆ.10.10ಕ್ಕೆ, ಜಿಗರ್‌ಥಂಡ ಡಬಲ್ x (ತ): ಮ.1ಕ್ಕೆ, ಸಂ.6.50ಕ್ಕೆ, ರೈಡ್ (ತ): ಸಂ.4.25ಕ್ಕೆ, ಟಗರುಪಲ್ಯ (ಕ): ರಾ.10.05ಕ್ಕೆ.
ಸ್ಕ್ರೀನ್ 3	ಜಪಾನ್ (ತ): ಬೆ.10.15ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ಟಗರುಪಲ್ಯ (ಕ): ಮ.1.20ಕ್ಕೆ, ಬಂದ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ದಿ ಮಾರ್ವೆಲ್ಸ್ (3ಡಿ)(ಇಂ): ಬೆ.8.30ಕ್ಕೆ, ಬೆ.10.45ಕ್ಕೆ, ಮ.1.05ಕ್ಕೆ, ಮ.3.25ಕ್ಕೆ, ಸಂ.5.40ಕ್ಕೆ, ರಾ.7.55ಕ್ಕೆ, ರಾ.10.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ದಿ ಮಾರ್ವೆಲ್ಸ್ (3ಡಿ)(ಇಂ): ಬೆ.9.30ಕ್ಕೆ, ಮ.12ಕ್ಕೆ, ಮ.2.30ಕ್ಕೆ, ಸಂ.5ಕ್ಕೆ, ರಾ.7.30ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಗರಡಿ (ಕ): ರಾ.10.15ಕ್ಕೆ, ಮ.1.20ಕ್ಕೆ, ರಾ.7.15ಕ್ಕೆ, ಟಗರುಪಲ್ಯ (ಕ): ಮ.12.55ಕ್ಕೆ, ಜಿಗರ್‌ಥಂಡ ಡಬಲ್ x (ತ): ರಾ.10.20ಕ್ಕೆ.
ಸ್ಕ್ರೀನ್ 3	ಜಿಗರ್‌ಥಂಡ ಡಬಲ್ x (ತ): ಬೆ.10.35ಕ್ಕೆ, ಮ.2.10ಕ್ಕೆ, ಸಂ.5.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 4	ಜಪಾನ್ (ತ): ಬೆ.9.30ಕ್ಕೆ, ಮ.12.45ಕ್ಕೆ, ಸಂ.4ಕ್ಕೆ, ರಾ.7.15ಕ್ಕೆ, ರಾ.10.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಸೈಕಲ್ ಸವಾರಿ (ಕ): ಬೆ.10.30ಕ್ಕೆ, ಕ್ರೇಜಿ ಕೀರ್ತಿ (ಕ): ಮ.1.30ಕ್ಕೆ, ಗರುಡ ಪುರಾಣ (ಕ): ಸಂ.4ಕ್ಕೆ, ಬಸ್ರಿಕಟ್ಟೆ (ಕ): ಸಂ.6.45ಕ್ಕೆ, ಲಿಯೋ (ತ): ರಾ.9.15ಕ್ಕೆ.
ಸ್ಕ್ರೀನ್ 2	ಟಗರುಪಲ್ಯ (ಕ): ಬೆ.10.45ಕ್ಕೆ, ಮ.1.40ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ.
ಸ್ಕ್ರೀನ್ 3	ಲಿಯೋ (ತ): ಮ.1.30ಕ್ಕೆ, ರಾ.7ಕ್ಕೆ.
ಸ್ಕ್ರೀನ್ 4	ಘೋಸ್ಟ್ (ಕ): ಬೆ.10.30ಕ್ಕೆ, ಸಂ.4.10ಕ್ಕೆ, ಸಂ.6.45ಕ್ಕೆ, ಲಿಯೋ (ಕ): ಮ.1.05ಕ್ಕೆ, ಟಗರುಪಲ್ಯ (ಕ): ರಾ.9.15ಕ್ಕೆ

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಘೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್ (ಹಿಂ):** ಮ.3.50ಕ್ಕೆ, **ಭಗವಂತ್ ಕೇಸರಿ (ತೆ):** ರಾ.7.05ಕ್ಕೆ, **ಗಣಪತ್: ಎ ಹೀರೋ (ಹಿಂ):** ಸಂ.4.10ಕ್ಕೆ, **ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ):** ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, **ಲಿಯೋ (ಕ):** ಮ.12.45ಕ್ಕೆ, **ಲಿಯೋ (ತ):** ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, **ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ):** ರಾ.10ಕ್ಕೆ, **ಟಗರುಪಲ್ಯ (ಕ):** ಮ.1ಕ್ಕೆ, ರಾ.7ಕ್ಕೆ, **ತೇಜಸ್ (ಹಿಂ):** ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಅತ್ತಳ್ಳಿಯಲ್ಲಿ ಮಂಚೇಶ್ವರಿ ಪೂಜಾ ಮಹೋತ್ಸವ



ಬನ್ನೂರು: ಸಮೀಪದ ಅತ್ತಳ್ಳಿ ಗ್ರಾಮದಲ್ಲಿ ಮಂಗಳವಾರ ಶ್ರೀ ಮಂಚೇಶ್ವರಿ ದೇವಿಯ ಪೂಜಾ ಮಹೋತ್ಸವ ನಡೆಯಿತು.

ಮಂಚೇಶ್ವರಿ ಸೇವಾ ಸಮಿತಿ ವತಿಯಿಂದ ಗ್ರಾಮದ ಕಾವೇರಿ ನದಿಯಿಂದ ಹಾಲರವಿ ಮತ್ತು ಕರಗವನ್ನು ತಂದು, ಬಾಯಿಬೀಗ ಸೇರಿದಂತೆ ದೇವಿಯ ಉತ್ಸವಗಳನ್ನು ನಡೆಸಲಾಯಿತು. ಗ್ರಾಮವನ್ನು ತಳಿರು ತೋರಣ, ವಿದ್ಯುತ್ ದೀಪದಿಂದ ಅಲಂಕರಿಸಲಾಗಿತ್ತು. ದೇವಿಗೆ ಹೂವಿನ ಮಾಲೆಯಿಂದ ಅಲಂಕಾರ ಮಾಡಿ, ಸಾರ್ವಜನಿಕ ದರ್ಶನಕ್ಕೆ ಅವಕಾಶ ನೀಡಲಾಯಿತು.

ಪ್ರಾತಃಕಾಲದಲ್ಲಿ ವಿವಿಧ ಹೋಮ–ಹವನ ನೆರವೇರಿಸಿ, ದೇವಿಗೆ ಪೂಜೆ ಸಲ್ಲಿಸಲಾಯಿತು. ಇದೇ ವೇಳೆ ಭಕ್ತರು ಹರಕೆ ಕಾಣಿಕೆಯನ್ನು ಸಲ್ಲಿಸಿ, ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು. ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಕಾರ್ತೀಕ ಮಾಸದ ನಾಲ್ಕು ಸೋಮವಾರ ವಿಶೇಷ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸೇವಾ ಸಮಿತಿ ತಿಳಿಸಿದೆ.

ಕಾರ್ಖಾನೆ ಎದುರು ಶವವಿಟ್ಟು ಪ್ರತಿಭಟನೆ



ನಂಜನಗೂಡು, ನ.15–ಪರಿಹಾರ ಮೊತ್ತವನ್ನು ನೀಡದಿದ್ದರಿಂದ ಮಾನಸಿಕ ಖಿನ್ನತೆಯಿಂದ ಕಾರ್ಮಿಕ ಮೃತಪಟ್ಟಿದ್ದಾರೆ ಎಂದು ಆರೋಪಿಸಿ, ಆತನ ಕುಟುಂಬಸ್ಥರು ನಗರದ ಕೈಗಾರಿಕಾ ಪ್ರದೇಶದ ನ್ಯೂ ಹಾರಿಜನ್ ಇಂಜಿನಿಯರಿಂಗ್ ಕಾರ್ಖಾನೆ ಎದುರು ಬುಧವಾರ ಶವವಿಟ್ಟು ಪ್ರತಿಭಟನೆ ನಡೆಸಿದರು.

ಕಾರ್ಖಾನೆಯ ಕಾರ್ಮಿಕರಾಗಿದ್ದ ನಗರದ ಶ್ರೀರಾಂಪುರ ನಿವಾಸಿ ಎನ್.ಸುರೇಶ್(47) ಮೃತಪಟ್ಟಿದ್ದು, ಈತ ಕಾರ್ಖಾನೆ ಆಡಳಿತ ಮಂಡಳಿ ಕಳೆದ ಎಂಟು ತಿಂಗಳಿಂದ ಪರಿಹಾರ ಮೊತ್ತ ನೀಡಲು ಸತಾಯಿಸುತ್ತಿದ್ದರಿಂದ ಮಾನಸಿಕ ಖಿನ್ನತೆಗೆ ಒಳಗಾಗಿ ಮೃತಪಟ್ಟಿದ್ದಾರೆ ಎಂದು ಕುಟುಂಬಸ್ಥರು ಆಕ್ರೋಶ ವ್ಯಕ್ತಪಡಿಸಿದರು. ಎನ್.ಸುರೇಶ್ ಕಳೆದ 20 ವರ್ಷಗಳಿಂದ ನ್ಯೂ ಹಾರಿಜನ್ ಇಂಜಿನಿಯರಿಂಗ್ ಕಾರ್ಖಾನೆಯಲ್ಲಿ ಕಾರ್ಮಿಕರಾಗಿ ಸೇವೆ ಸಲ್ಲಿಸಿ, ಎಂಟು ತಿಂಗಳ ಹಿಂದೆ ಕೆಲಸ ಬಿಟ್ಟಿದ್ದರು. ಆದರೆ, ಸುರೇಶ್‌ಗೆ ಪರಿಹಾರ ಮೊತ್ತವನ್ನು ನೀಡಲು ಕಾರ್ಖಾನೆಯ ಆಡಳಿತ ಮಂಡಳಿ ವಿಳಂಬ ಮಾಡಿದೆ. ಇದರಿಂದ ಮಾನಸಿಕವಾಗಿ ಮನನೊಂದಿದ್ದ ಸುರೇಶ್ ಮೃತಪಟ್ಟಿದ್ದಾರೆ ಎಂದು ಆರೋಪಿಸಿದರು.

ಕಾರ್ಖಾನೆಯವರ ಮಾನಸಿಕ ಕಿರುಕುಳದಿಂದ ಸುರೇಶ್ ಕುಟುಂಬ ಬೀದಿಪಾಲಾಗಿದೆ. ಆದರೂ ಕಾರ್ಖಾನೆಯ ಆಡಳಿತ ಮಂಡಳಿ ಕನಿಷ್ಠ ಸೌಜನ್ಯವನ್ನು ತೋರುತ್ತಿಲ್ಲ. ಮೃತ ಕಾರ್ಮಿಕರಿಗೆ ಗೌರವ ವಂದನೆ ಸಲ್ಲಿಸದೇ ಉದ್ಧಟತನ ತೋರುತ್ತಿದೆ. ಕಾರ್ಖಾನೆಗಾಗಿ ದುಡಿದ ಕಾರ್ಮಿಕನಿಗೆ ಅಗೌರವ ತೋರಿಸಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಂತರ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಕಾರ್ಖಾನೆಯ ಮಾನವ ಸಂಪನ್ಮೂಲ ಅಧಿಕಾರಿ ಎಚ್.ಬಿ.ರಮೇಶ್, ಪ್ರತಿಭಟನಾಕಾರರ ಮನವೊಲಿಸಿ ಸದ್ಯಕ್ಕೆ 2 ಲಕ್ಷ ರೂ. ಪರಿಹಾರ ಚೆಕ್ ಹಾಗೂ ಅಂತ್ಯಕ್ರಿಯೆಗೆ 20 ಸಾವಿರ ರೂ. ನಗದು ನೀಡಿದರು. ಉಳಿದ ಪರಿಹಾರ ಮೊತ್ತವನ್ನು ಮುಂದಿನ ದಿನಗಳಲ್ಲಿ ನೀಡುವುದಾಗಿ ಭರವಸೆ ನೀಡಿದರು. ಬಳಿಕ ಪ್ರತಿಭಟನೆ ಕೈ ಬಿಡಲಾಯಿತು. ಪ್ರತಿಭಟನೆಯಲ್ಲಿ ಮುಖಂಡರಾದ ರಾಜಶೇಖರ್ ಶೇಖಿ, ಹೆಜ್ಜಿಗೆ ನಾಗಣ್ಣ, ಅನಿಲ್, ಹರೀಶ್, ಸುರೇಶ್ ಇತರರಿದ್ದರು.